P£ÁðlP ¸PÁðg

# ¸|ºPÁg| ZÄ£Áª|uÁ DAi|ÆÃU|



# ¸|ºPÁg| ZÄ£Áª|uÁ Pê¦r

¥Pl u

P£ÁðlP| gÁdå ¸|ºPÁg| ZÄ£Áª|uÁ DAi|ÆÃU|

¨ÉAU¼ÆgÄ

# ಸಹಕಾರ ಚುನಾವಣಾ ಕೈಪಿಡಿ

ಪ್ರಕಟಣೆ
ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ
ಬೆಂಗಳೂರು

# ಸಹಕಾರ ಚುನಾವಣಾ ಆಯೋಗ

## ವಿಷಯ ಸೂಚಿ


| | ವಿಷಯ | ಪುಟ ಸಂಖ್ಯೆ |
|---|---|---|
| **ಅಧ್ಯಾಯ – I** | | |
| | **ಸಹಕಾರ ಸಂಘಗಳ ಚುನಾವಣೆ** | 01 ರಿಂದ 26 |
| | ಆಡಳಿತ ಮಂಡಳಿಗೆ ಚುನಾವಣೆ | 3 |
| 1 | ಆಡಳಿತ ಮಂಡಳಿ | 4–5 |
| 2 | ಮತದಾರರ ಪಟ್ಟಿ | 5–7 |
| 3 | ಚುನಾವಣೆಗಾಗಿ ಅಧಿಸೂಚನೆ | 7–8 |
| 4 | ಚುನಾವಣಾ ವೇಳಾಪಟ್ಟಿ | 8 |
| 5 | ರಿಟರ್ನಿಂಗ್ ಅಧಿಕಾರಿ | 9–11 |
| 6 | ನಾಮಪತ್ರ ಸಲ್ಲಿಕೆ | 11–12 |
| 7 | ನಾಮಪತ್ರಗಳ ಪರಿಶೀಲನೆ | 12–13 |
| 8 | ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವಿಕೆ | 13–14 |
| 9 | ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ ತಯಾರಿಕೆ | 14 |
| 10 | ಅವಿರೋಧ ಆಯ್ಕೆ | 14–15 |
| 10ಎ | ಸ್ಪರ್ಧಿಸುವ ಚುನಾವಣೆ | 15 |
| 11 | ಚಿಹ್ನೆಗಳ ಹಂಚಿಕೆ | 15 |
| 12 | ಪ್ರಿಸೈಡಿಂಗ್ ಅಧಿಕಾರಿಗಳ ಮತ್ತು ಸಿಬ್ಬಂದಿ ನೇಮಕಾತಿ | 16 |
| 13 | ಮತಪತ್ರ ಮತ್ತು ಮತಪೆಟ್ಟಿಗೆ | 16–17 |
| 14 | ಮತದಾನ ಕೇಂದ್ರಗಳಲ್ಲಿನ ವ್ಯವಸ್ಥೆ | 17 |
| 15 | ಮತದಾನ ಮಾಡುವ ರೀತಿ | 18 |
| 16 | ಮತದಾನ ಕೇಂದ್ರಗಳಿಗೆ ಪ್ರವೇಶ | 18 |
| 17 | ಮತದಾನಕ್ಕಾಗಿ ಮತಪೆಟ್ಟಿಗೆಗಳ ಸಿದ್ಧತೆ | 18–19 |
| 18 | ಮತದಾರರ ಗುರುತಿಸುವಿಕೆ | 19 |
| 19 | ಮತದಾರರಿಗೆ ಮತ ಪತ್ರಗಳನ್ನು ಕೊಡುವುದು | 19–20 |
| 20 | ಮತದಾನ ಕೇಂದ್ರದೊಳಗೆ ಮತದಾನ ಮತ್ತು ಮತದಾನ ಪ್ರಕ್ರಿಯೆ ರಹಸ್ಯವನ್ನು ಕಾಪಾಡುವುದು | 20 |
| 21 | ದೃಷ್ಟಿಹೀನ ಮತ್ತು ಅಸಕ್ತ ಮತದಾರರ ಮತಗಳನ್ನು ದಾಖಲು ಮಾಡುವುದು | 20–21 |
| 22 | ಮತದಾನದ ಮುಕ್ತಾಯ | 21 |

| | ವಿಷಯ | ಪುಟ ಸಂಖ್ಯೆ |
|---|---|---|
| 23 | ಮತದಾನ ತರುವಾಯ ಮತಪೆಟ್ಟಿಗೆಗಳನ್ನು ಮೊಹರು ಮಾಡುವುದು | 22 |
| 24 | ಮತಪತ್ರಗಳ ಲೆಕ್ಕ | 22 |
| 25 | ಇತರೆ ಪ್ಯಾಕೆಟ್ಟುಗಳನ್ನು ಮೊಹರು ಮಾಡುವುದು | 22–23 |
| 26 | ಮತಗಳ ಏಣಿಕೆ | 23 |
| 27 | ಚುನಾವಣಾ ಫಲಿತಾಂಶದ ಘೋಷಣೆ ಮತ್ತು ಸಹಕಾರ ಚುನಾವಣಾ ಆಯೋಗಕ್ಕೆ ರಿಟರ್ನ್‌ಗಳನ್ನು ಸಲ್ಲಿಸುವುದು | 23–24 |
| 28 | ಚುನಾಯಿತ ಉಮೇದುವಾರರಿಗೆ ಚುನಾವಣಾ ಪ್ರಮಾಣ ಪತ್ರವನ್ನು ಕೊಡುವುದು | 24 |
| 29 | ಮತಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ಅಭಿರಕ್ಷೆ | 24 |
| 30 | ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ | 24–25 |
| 31 | ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ವಿಲೇವಾರಿ | 25 |
| 32 | ಉಮೇದುವಾರರ ಠೇವಣಿಯನ್ನು ಹಿಂತಿರುಗಿಸುವುದು ಅಥವಾ ಮುಟ್ಟುಗೋಲು ಹಾಕಿಕೊಳ್ಳುವುದು | 26 |
| 33 | ಚುನಾವಣಾ ವೆಚ್ಚಗಳು | 26 |
| **ಅಧ್ಯಾಯ – II** | | |
| | **ಚುನಾವಣೆ ರದ್ದುಪಡಿಸುವಿಕೆ ಅಥವಾ ಮತದಾನ ಮುಂದೂಡುವಿಕೆ** | 27 ರಿಂದ 30 |
| 1 | ಮತದಾನಕ್ಕೆ ಮುಂಚೆ ಅಭ್ಯರ್ಥಿಯ ಮರಣ | 27 |
| 2 | ಮತಗಟ್ಟೆ ವಶಪಡಿಸುವ ಕಾರಣದ ಮೇಲೆ | 28–29 |
| 3 | ತುರ್ತುಸ್ಥಿತಿಯಲ್ಲಿ ಮತದಾನ ಮುಂದೂಡಿಕೆ | 29–30 |
| 4 | ಮತಪೆಟ್ಟಿಗೆಗಳ ನಾಶ ಇತ್ಯಾದಿ ಸಂದರ್ಭಗಳಲ್ಲಿ ಹೊಸ ಮತದಾನ | 30 |
| **ಅಧ್ಯಾಯ – III** | | |
| | **ಪದಾಧಿಕಾರಿಗಳ ಚುನಾವಣೆ** | 31 ರಿಂದ 33 |
| **ಅಧ್ಯಾಯ – IV** | | |
| | **ಭ್ರಷ್ಟಾಚಾರಗಳು/ಅಪರಾಧಗಳು ಹಾಗೂ ದಂಡನೆಗಳು** | 35 ರಿಂದ 41 |
| 1 | ಮತದಾನದ ರಹಸ್ಯವನ್ನು ಕಾಪಾಡುವುದು | 36 |
| 2 | ಅಧಿಕಾರಿಗಳು, ಮುಂತಾದವರು ಚುನಾವಣೆಗಳಿಗೆ ಅಭ್ಯರ್ಥಿ ಪರವಾಗಿ ಕಾರ್ಯನಿರ್ವಹಿಸಕೂಡದು ಅಥವಾ ಮತದಾನದ ಮೇಲೆ ಪ್ರಭಾವ ಬೀರಕೂಡದು | 37 |

| | | ವಿಷಯ | ಪುಟ ಸಂಖ್ಯೆ |
|---|---|---|---|
| | 3 | ಮತದಾನ ಕೇಂದ್ರಗಳಲ್ಲಿ ಅಥವಾ ಸಮೀಪದಲ್ಲಿ ಮತ ಕೋರಿಕೆಯ ನಿಷೇಧ | 37 |
| | 4 | ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿನ ಅವ್ಯವಸ್ಥಿತ ವರ್ತನೆಗೆ ದಂಡ | 38 |
| | 5 | ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡ | 38–39 |
| | 6 | ಚುನಾವಣೆಗೆ ಸಂಬಂಧಿಸಿದಂತೆ ಪದೀಯ ಕರ್ತವ್ಯದ ಉಲ್ಲಂಘನೆಗಳು | 39 |
| | 7 | ಮತದಾನ ಕೇಂದ್ರದಿಂದ ಮತಪತ್ರಗಳನ್ನು ಸ್ಥಳಾಂತರಿಸುವುದು ಅಪರಾಧ | 39–40 |
| | 8 | ಇತರೆ ಅಪರಾಧಗಳು ಮತ್ತು ಅವುಗಳಿಗಾಗಿ ದಂಡಗಳು | 40–41 |
| | 9 | ಅಪರಾಧಗಳು ಮತ್ತು ದಂಡನೆಗಳು | 41 |
| V | | **ನಮೂನೆಗಳು** | 43–63 |
| VI | | **ಅಧಿಸೂಚನೆಗಳು, ಆದೇಶಗಳು ಹಾಗೂ ಸುತ್ತೋಲೆಗಳು** | 64–118 |

**ಎನ್.ಸಿ. ಮುನಿಯಪ್ಪ, ಭಾ.ಆ.ಸೇ.**
ಆಯುಕ್ತರು
ಸಹಕಾರ ಚುನಾವಣಾ ಆಯೋಗ
ಬೆಂಗಳೂರು



# ಮುನ್ನುಡಿ

ಮಾನ್ಯ ಸಹಕಾರಿಗಳೆ,

ಕರ್ನಾಟಕ ರಾಜ್ಯದಲ್ಲಿನ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಈ ಹಿಂದೆ ಚುನಾವಣೆಯನ್ನು ಸಹಕಾರ ಸಂಘಗಳ ನಿಬಂಧಕರ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸಲಾಗುತ್ತಿತ್ತು. ಸಹಕಾರ ಸಂಘಗಳ ನಿಬಂಧಕರು ಚುನಾವಣಾಧಿಕಾರಿಗಳನ್ನು ನೇಮಿಸುತ್ತಿದ್ದರು. ಚುನಾವಣಾಧಿಕಾರಿಯು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿ ಅದರಂತೆ ಚುನಾವಣೆ ನಡೆಸುವುದು ಪದ್ಧತಿಯಾಗಿತ್ತು.

ಭಾರತ ಸಂವಿಧಾನಕ್ಕೆ 2011ರಲ್ಲಿ ಮಾಡಲಾದ 97ನೇ ತಿದ್ದುಪಡಿಯಂತೆ ಸಂಹಿತೆ 243 ZK (2) ಅನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಕ್ಕೆ 2012 ರಲ್ಲಿ ತಿದ್ದುಪಡಿ ಮಾಡಿದ್ದು, ಅದರಂತೆ ಪ್ರಕರಣ 39 ಎಎ ರೀತ್ಯಾ ಸರ್ಕಾರವು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಹಕಾರ ಚುನಾವಣಾ ಆಯೋಗವನ್ನು ರಚನೆ ಮಾಡಿದ್ದು ಈ ಸಂಬಂಧ 18–3–2013 ರಂತೆ ಅಧಿಸೂಚನೆಯನ್ನು ಹೊರಡಿಸಿರುತ್ತದೆ.

ಸಂವಿಧಾನದ ಆಶಯ ಹಾಗೂ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012ರ ಆಶಯದಂತೆ, ಸಹಕಾರ ಸಂಘಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣದಂತೆ ನಡೆಸಬೇಕಾಗಿದ್ದು, ಮತದಾರರ ಪಟ್ಟಿ ಸಿದ್ಧಪಡಿಸುವಿಕೆ ಮತ್ತು ಸಹಕಾರ ಸಂಘಗಳ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗವು ನಡೆಸಬೇಕಾದ ಜವಾಬ್ದಾರಿ ಹೊಂದಿರುತ್ತದೆ. ಅಲ್ಲದೇ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ಅಧಿನಿಯಮ 2012 ರ ಪ್ರಕರಣ 26ಎ ರೀತ್ಯಾ ಸೌಹಾರ್ದ ಸಹಕಾರಿಗಳಿಗೂ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 39ಎಎ ಅವಕಾಶದಂತೆ ಚುನಾವಣೆ ನಡೆಸುವ ಜವಾಬ್ದಾರಿಯನ್ನು ಹೊಂದಿದೆ.

ಕರ್ನಾಟಕ ಸರ್ಕಾರವು ದಿನಾಂಕ: 10–7–2013 ರಂದು ರಾಜ್ಯಪತ್ರದಲ್ಲಿ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಸಿಓ 14 ಸಿಎಲ್ಎಂ 2013 ರಲ್ಲಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳಿಗೆ ತಿದ್ದುಪಡಿ ಮಾಡಿದ್ದು ಸದರಿ ತಿದ್ದುಪಡಿ ನಿಯಮಗಳು ದಿನಾಂಕ:10–7–2013 ರಿಂದ ಜಾರಿಗೆ ಬಂದಿರುತ್ತದೆ. ಸದರಿ ನಿಯಮ (2) ರಂತೆ ಸಹಕಾರ ಚುನಾವಣಾ ಆಯೋಗವು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಚುನಾವಣಾಧಿಕಾರಿಯನ್ನು ಹಾಗೂ ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆ, ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಸಂಬಂಧ ರಿಟರ್ನಿಂಗ್ ಆಫೀಸರ್ ನೇಮಕ ಮಾಡುವ ಅಧಿಕಾರ ಹೊಂದಿರುತ್ತದೆ. ಈ ರೀತಿ ನೇಮಕ ಹೊಂದುವ ಜಿಲ್ಲಾ ಚುನಾವಣಾಧಿಕಾರಿಯು/ರಿಟರ್ನಿಂಗ್ ಆಫೀಸರ್ ಕಾನೂನಿಗೆ ಅನುಗುಣವಾಗಿ ಚುನಾವಣಾ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಡೆಸುವ ಜವಾಬ್ದಾರಿ ಹೊಂದಿರುತ್ತಾರೆ. ಹೊಸದಾಗಿ ತಿದ್ದುಪಡಿ ಮಾಡಿ ರಚಿಸಲಾಗಿರುವ ಅಧಿನಿಯಮ/ ನಿಯಮಗಳಿಗೆ ಅನುಸಾರವಾಗಿ ಹಾಗೂ ಭಾರತ ಚುನಾವಣಾ ಆಯೋಗದ ಮಾದರಿಯಲ್ಲೇ ವ್ಯವಸ್ಥಿತವಾಗಿ, ಶಾಸನಬದ್ಧವಾದ ನಿಬಂಧನೆಗಳನ್ವಯ, ಮತದಾರರ ಪಟ್ಟಿಯನ್ನು ಸಮರ್ಪಕವಾಗಿ ಸಿದ್ಧಪಡಿಸಿ ಸಹಕಾರ ಸಂಘಗಳ ಆಡಳಿತ ಸಮಿತಿ ಚುನಾವಣೆಯನ್ನು ನಡೆಸುವಲ್ಲಿ ಜಿಲ್ಲಾ ಚುನಾವಣಾಧಿಕಾರಿ, ರಿಟರ್ನಿಂಗ್ ಆಫೀಸರ್ ಮತ್ತು ಮುಖ್ಯಕಾರ್ಯನಿರ್ವಾಹಕರ ಪಾತ್ರ ಅತ್ಯಂತ ಮಹತ್ವ ಪಡೆಯುತ್ತದೆ. ಆದ್ದರಿಂದ ಜಿಲ್ಲಾ ಚುನಾವಣಾಧಿಕಾರಿಗಳು/ರಿಟರ್ನಿಂಗ್ ಆಫೀಸರ್/ಮುಖ್ಯ ಕಾರ್ಯನಿರ್ವಾಹಕರು/ಪದಾಧಿಕಾರಿಗಳಿಗೆ ಚುನಾವಣೆ ಸಂಬಂಧ ಸಮರ್ಪಕ ಕಾರ್ಯನಿರ್ವಹಣೆಗೆ ಅನುಕೂಲವಾಗಲೆಂದು ಸಮಗ್ರ ಮಾಹಿತಿಯುಳ್ಳ ಕೈಪಿಡಿಯನ್ನು ಹೊರತರಬೇಕೆನ್ನುವ ಉದ್ದೇಶವನ್ನು ಆಯೋಗ ಹೊಂದಿದ್ದು ಈ ಹಿನ್ನೆಲೆಯಲ್ಲಿ ಚುನಾವಣಾ ಕೈಪಿಡಿಯನ್ನು ಸಿದ್ಧಪಡಿಸಿ ಪ್ರಕಟಿಸಲಾಗುತ್ತಿದೆ.

ಈಗಾಗಲೇ ತಿಳಿಸಿದಂತೆ ಸಂವಿಧಾನ ಮತ್ತು ಸಹಕಾರ ಸಂಘಗಳ ಅಧಿನಿಯಮಗಳ ಆಶಯದಂತೆ ಸಹಕಾರ ಸಂಘಗಳ/ಸಹಕಾರಿಗಳ ಚುನಾವಣೆಯನ್ನು ಕಾನೂನುಬದ್ಧವಾಗಿ, ನಿಷ್ಪಕ್ಷಪಾತದಿಂದ ಮತ್ತು ಪಾರದರ್ಶಕವಾಗಿ ನಡೆಸುವುದು ಆಯೋಗದ ಗುರುತರವಾದ ಜವಾಬ್ದಾರಿಯಾಗಿದ್ದು, ಈ ಬಗ್ಗೆ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದೆ. ಈ ಹಿನ್ನೆಲೆಯಲ್ಲಿ ಚುನಾವಣಾ ಕೈಪಿಡಿಯು ಚುನಾವಣಾ ಅಧಿಕಾರಿಗಳಿಗೆ/ಸಿಬ್ಬಂದಿಗೆ ಅದರಲ್ಲಿಯೂ ಸಹಕಾರ ಇಲಾಖೆ ಹೊರತು ಪಡಿಸಿ ಬೇರೆ ಇಲಾಖೆಗಳಿಂದ ಚುನಾವಣೆ ಕೆಲಸ ನಿರ್ವಹಿಸಲು ನೇಮಕಾತಿ ಮಾಡುವ ಅನೇಕ ಅಧಿಕಾರಿ / ಸಿಬ್ಬಂದಿಗಳಿಗೆ ವಿಶೇಷವಾಗಿ ನೆರವಾಗುವುದೆಂದು ಭಾವಿಸಿರುತ್ತೇನೆ. ಚುನಾವಣಾ ಕೈಪಿಡಿಯ ಉಪಯೋಗವನ್ನು ಪಡೆಯುವುದರ ಜೊತೆಗೆ ಸಹಕಾರ ಸಂಘಗಳ ಕಾನೂನು/ನಿಯಮಗಳನ್ನು ಪುಸ್ತಕವನ್ನು ಅಭ್ಯಸಿಸಿ, ಸಹಕಾರ ಚುನಾವಣಾ ಆಯೋಗದ ಯಶಸ್ವಿ ಕಾರ್ಯನಿರ್ವಹಣೆಗೆ ಎಲ್ಲಾ ಚುನಾವಣಾಧಿಕಾರಿಗಳು/ರಿಟರ್ನಿಂಗ್ ಆಫೀಸರ್‌ಗಳು/ಚುನಾವಣಾ ಸಿಬ್ಬಂದಿ/ಸಹಕಾರ ಸಂಘಗಳ ಪದಾಧಿಕಾರಿಗಳು, ಸದಸ್ಯರು, ಸಂಘದ ಸಿಬ್ಬಂದಿ ಸಹಕಾರ ಅತ್ಯಾವಶ್ಯಕವಾಗಿದ್ದು, ಈ ದಿಸೆಯಲ್ಲಿ ಎಲ್ಲರ ಸಹಕಾರವನ್ನು ನಿರೀಕ್ಷಿಸುತ್ತೇನೆ. ಈ ಕೈಪಿಡಿಯನ್ನು ತಯಾರಿಸಲು ತುಂಬಾ ಮುತುವರ್ಜಿ ವಹಿಸಿದ ಶ್ರೀ ಆರ್. ಲೋಕೇಶ್, ಸಹಕಾರ ಸಂಘಗಳ ಉಪನಿಬಂಧಕರು, ಚುನಾವಣಾ ಆಯೋಗ ಹಾಗೂ ಅಂದವಾಗಿ ಮುದ್ರಿಸಿದ ನಿರ್ದೇಶಕರು, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಆಭಾರಿಯಾಗಿರುತ್ತೇನೆ. ಈ ಕೈಪಿಡಿಯನ್ನು ಉತ್ತಮಗೊಳಿಸಲು ಏನಾದರೂ ಸಲಹೆ / ಮಾರ್ಗದರ್ಶನವಿದ್ದಲ್ಲಿ ಅದನ್ನು ಸ್ವಾಗತಿಸುತ್ತೇನೆ.

ಶುಭಾಶಯಗಳೊಂದಿಗೆ,

**(ಎನ್.ಸಿ. ಮುನಿಯಪ್ಪ)**
ಸಹಕಾರ ಚುನಾವಣಾ ಆಯುಕ್ತರು

ಸ್ಥಳ: ಬೆಂಗಳೂರು
ದಿನಾಂಕ: 28-11-2013

# ಅಧ್ಯಾಯ – I

## ಸಹಕಾರ ಸಂಘಗಳ ಚುನಾವಣೆ

ಭಾರತ ಸಂವಿಧಾನಕ್ಕೆ 97ನೇ ತಿದ್ದುಪಡಿಯನ್ವಯ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಅಧಿನಿಯಮ 1959ರ ಹಾಗೂ ಸೌಹಾರ್ದ ಸಹಕಾರಿ ಅಧಿನಿಯಮಗಳಲ್ಲಿ ತಿದ್ದುಪಡಿಯನ್ನು ತರಲಾಗಿರುತ್ತದೆ. ಈ ತಿದ್ದುಪಡಿಯಲ್ಲಿ ಸಹಕಾರ ಸಂಘಗಳ ಅಧಿನಿಯಮದ ಪ್ರಕರಣ 39(ಎ) ಕ್ಕೆ ತಿದ್ದುಪಡಿಯನ್ನು ಮಾಡಲಾಗಿದೆ ಹಾಗೂ ಪ್ರಕರಣ 39ಎಎ ನ್ನು ಹೊಸದಾಗಿ ಸೇರ್ಪಡೆ ಮಾಡುವುದರ ಮೂಲಕ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮದ ಪ್ರಕರಣ 26ಎ ಸೇರ್ಪಡೆ ಮಾಡುವುದರ ಮೂಲಕ ಸಹಕಾರಿ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲು "ಸಹಕಾರ ಚುನಾವಣಾ ಆಯೋಗ" ವನ್ನು ರಚಿಸಲಾಗಿದೆ. ಇದರಿಂದ ರಾಜ್ಯ ಎಲ್ಲಾ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗಳ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರಿ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣದಲ್ಲಿ ನಡೆಸಬೇಕಾಗಿದೆ.

ಸಹಕಾರ ಸಂಘಗಳ ಚುನಾವಣೆಯು ಸಹಕಾರ ಸಂಘಗಳ ಅಧಿನಿಯಮ, ನಿಯಮಗಳು ಹಾಗೂ ಆಯಾ ಸಂಘಗಳ ಬೈಲಾ ಆಧಾರದ ಮೇಲೆ ಚುನಾವಣೆಯನ್ನು ನಡೆಸಬೇಕಾಗಿದೆ. ಹಾಗೆಯೇ ಸೌಹಾರ್ದ ಸಹಕಾರಿಗಳ ಚುನಾವಣೆಯನ್ನು ಸೌಹಾರ್ದ ಸಹಕಾರಿ ಅಧಿನಿಯಮಗಳ, ನಿಯಮಗಳ ಹಾಗೂ ಆಯಾ ಸೌಹಾರ್ದ ಸಹಕಾರಿಗಳ ಬೈಲಾ ಆಧಾರದ ಮೇಲೆ ಚುನಾವಣೆಯನ್ನು ನಡೆಸಬೇಕಾಗಿದೆ.

## ಸಹಕಾರ ಚುನಾವಣಾ ಆಯೋಗ

### (ಪ್ರಕರಣ 39ಎಎ ಹಾಗೂ ನಿಯಮ 13ಬಿ)

1. ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿಯಂತ್ರಣ ಮತ್ತು ನಿರ್ದೇಶನದಡಿಯಲ್ಲಿ ಸಹಕಾರ ಸಂಘಗಳ ಚುನಾವಣೆಗಳು ನಡೆಯಬೇಕಾಗಿದ್ದು.
2. ಸಹಕಾರ ಚುನಾವಣಾ ಆಯೋಗವು ರಾಜ್ಯದಲ್ಲಿನ ಎಲ್ಲಾ ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸಲು ಅಧಿಸೂಚನೆಯನ್ನು ಹೊರಡಿಸುವುದು.
3. ಮತದಾರರ ಪಟ್ಟಿಗಳನ್ನು ತಯಾರಿಸಲು ಅಗತ್ಯವಾದ ಮಾರ್ಗಸೂಚಿಗಳನ್ನು ರೂಪಿಸುವುದು ತತ್ಸಂಬಂಧ ಸಮನ್ವಯವನ್ನು ಮೇಲ್ವಿಚಾರಣೆ ಮಾಡುವುದು.
4. ಜಿಲ್ಲಾ ಚುನಾವಣಾಧಿಕಾರಿಗಳನ್ನು ಹಾಗೂ ಚುನಾವಣಾಧಿಕಾರಿಗಳನ್ನು ನೇಮಿಸುವುದು.
5. ಸಹಕಾರಿ ಚುನಾವಣಾ ಆಯೋಗವು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ ದಿನಾಂಕದಿಂದ ಚುನಾವಣಾ ಪ್ರಕ್ರಿಯೆಯು ಪೂರ್ಣಗೊಂಡು ತತ್ಸಂಬಂಧದ ಫಲಿತಾಂಶ ಘೋಷಣೆಯಾಗುವವರೆಗೆ ಆಯೋಗವು ಚುನಾವಣೆಗಾಗಿ ನಿಯೋಜಿಸಲ್ಪಟ್ಟ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಸಹಿತ ಆಯೋಗಕ್ಕೆ ನಿಯೋಜಿಸಲ್ಪಟ್ಟಿದ್ದಾರೆಂದು ಭಾವಿಸತಕ್ಕದ್ದು [ನಿಯಮ 13ಸಿ(2)]

## ಜಿಲ್ಲಾ ಚುನಾವಣಾಧಿಕಾರಿಗಳು

### [ನಿಯಮ 13(ಸಿ)]

ಸಹಕಾರಿ ಚುನಾವಣಾ ಆಯೋಗವು ಜಿಲ್ಲೆಯಲ್ಲಿನ ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸಲು ನಿಯೋಜಿಸಲ್ಪಟ್ಟ ಅಧಿಕಾರಿಯಾಗಿರುತ್ತಾರೆ.

1. ಜಿಲ್ಲಾ ಚುನಾವಣಾಧಿಕಾರಿಗಳು ಸಹಕಾರ ಸಂಘಗಳ ಚುನಾವಣೆಗಳ ಸಮನ್ವಯ ಮತ್ತು ಮೇಲ್ವಿಚಾರಣೆಯನ್ನು ಚುನಾವಣಾ ಆಯೋಗದ ನಿಯಂತ್ರಣಕ್ಕೆ ಒಳಪಟ್ಟು ನಿರ್ವಹಿಸತಕ್ಕದ್ದು.
2. ಜಿಲ್ಲೆಯಲ್ಲಿನ ಸಹಕಾರ ಸಂಘಗಳ ಮತದಾರರ ಪಟ್ಟಿಯನ್ನು ತಯಾರಿಸುವಲ್ಲಿ ಮಾರ್ಗದರ್ಶನವನ್ನು ನೀಡತಕ್ಕದ್ದು ಹಾಗೂ ಮೇಲ್ವಿಚಾರಣೆಯನ್ನು ನಡೆಸುವುದು.
3. ಪ್ರಕರಣ 39ಎಎ ರಲ್ಲಿ ಉಲ್ಲೇಖಿಸಲಾದ ಚುನಾವಣೆಗಳಿಗಾಗಿ ಸಹಕಾರ ಚುನಾವಣಾ ಆಯೋಗದ ಅನುಮೋದನೆ ಪಡೆದ ನಂತರ ನಮೂನೆ X1 ರಲ್ಲಿ ಅಧಿಸೂಚನೆ ಹೊರಡಿಸುವುದು.
4. ಚುನಾವಣೆ ನಡೆಯಲಿರುವ ಸಹಕಾರ ಸಂಘಗಳ ತಾತ್ಕಾಲಿಕ ಮತದಾರರ ಪಟ್ಟಿ ಹಾಗೂ ಸುಸ್ತಿದಾರ ಪಟ್ಟಿಯನ್ನು ಚುನಾವಣೆ ನಡೆಯುವ ದಿನಾಂಕಕ್ಕೆ ಕನಿಷ್ಟ 45 ದಿನಗಳ ಮುಂಚೆ ಪ್ರಕಟಿಸಲು ಕ್ರಮವಹಿಸುವುದು ಹಾಗೂ ಈ ಮೂಲಕ ಸಂಘದ ಸದಸ್ಯರಿಂದ ಆಕ್ಷೇಪಣೆಗಳನ್ನ ಸ್ವೀಕರಿಸುವುದು ಮತ್ತು ನಿಯಮಾನುಸಾರ ಕ್ರಮವಹಿಸುವುದು.
5. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಯಾರಿಸಲಾದ ಅಂತಿಮ ಮತದಾರರ ಪಟ್ಟಿಯನ್ನು ಪರಿಶೀಲಿಸುವುದು ಹಾಗೂ ಚುನಾವಣೆ ನಡೆಯುವ ದಿನಾಂಕಕ್ಕೆ ಸ್ಪಷ್ಟ 15 ದಿನಗಳ ಮುಂಚೆ ಕಛೇರಿಯ ನಾಮಫಲಕದಲ್ಲಿ ಪ್ರಕಟಿಸಲು ಕ್ರಮವಹಿಸುವುದು.
6. ಜಿಲ್ಲಾ ಚುನಾವಣಾಧಿಕಾರಿಗಳು ಮತದಾನ ಕೇಂದ್ರಗಳನ್ನ ಒದಗಿಸಲು ವ್ಯವಸ್ಥೆಮಾಡುವುದು.
7. ಜಿಲ್ಲಾ ಚುನಾವಣಾಧಿಕಾರಿಗಳು ಪ್ರತಿಯೊಂದು ಮತದಾನ ಕೇಂದ್ರಕ್ಕೆ ಒಬ್ಬ ಪ್ರಿಸೈಡಿಂಗ್ ಅಧಿಕಾರಿಯನ್ನು ಮತ್ತು ತಾನು ಅವಶ್ಯಕವೆಂದು ಭಾವಿಸುವಂತಹ ಸಂಖ್ಯೆಯಲ್ಲಿ ಪೋಲಿಂಗ್ ಅಧಿಕಾರಿಗಳನ್ನು ನೇಮಕ ಮಾಡುವುದು.
8. ಜಿಲ್ಲಾ ಚುನಾವಣಾಧಿಕಾರಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಚುನಾವಣೆ ದಿನಾಂಕದಂದು ಮತದಾನ ನಡೆಸತಕ್ಕದ್ದು ಹಾಗೂ ಮತ ಏಣಿಕೆಯನ್ನು ನಡೆಸತಕ್ಕದ್ದು. ಮತದಾನದ ಪ್ರಗತಿಯನ್ನ ಆಯೋಗಕ್ಕೆ ಕಾಲಕಾಲಕ್ಕೆ ವರದಿಯನ್ನು ಮಾಡುವುದು.
9. ಚುನಾವಣಾ ಆಯೋಗವು ನಿಗದಿಪಡಿಸಲಾದ ಚುನಾವಣಾ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು.
10. ಚುನಾವಣಾ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ಎಲ್ಲಾ ರೀತಿಯಲ್ಲಿ ವ್ಯವಸ್ಥೆ ಮಾಡುವುದು.
11. ಚುನಾವಣೆ ಫಲಿತಾಂಶವನ್ನ ನಿಗದಿತ ನಮೂನೆಯಲ್ಲಿ ಚುನಾವಣಾಧಿಕಾರಿಗಳಿಂದ ಪಡೆದು ಚುನಾವಣೆ ಆಯೋಗಕ್ಕೆ ಅಂದೇ ಸಲ್ಲಿಸಲು ಕ್ರಮವಹಿಸುವುದು.
12. ಪದಾಧಿಕಾರಿಗಳ ಚುನಾವಣೆಯನ್ನು ಸಹ ಜಿಲ್ಲಾ ಚುನಾವಣಾಧಿಕಾರಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ನಡೆಸುವುದು.
13. ಪದಾಧಿಕಾರಿಗಳ ಚುನಾವಣೆ ಫಲಿತಾಂಶವನ್ನು ಚುನಾವಣಾಧಿಕಾರಿಗಳಿಂದ ಪಡೆದು ಅಂದೇ ಚುನಾವಣಾ ಆಯೋಗಕ್ಕೆ ಸಲ್ಲಿಸುವುದು.
14. ಕಾಲಕಾಲಕ್ಕೆ ಸಹಕಾರ ಚುನಾವಣಾ ಆಯೋಗ ವಹಿಸುವಂತಹ ಇತರ ಚುನಾವಣಾ ಪ್ರಕ್ರಿಯೆಗಳನ್ನು ನಿರ್ವಹಿಸುವುದು.

## ಆಡಳಿತ ಮಂಡಳಿಗೆ ಚುನಾವಣೆ

ಸಹಕಾರ ಸಂಘದ ಚುನಾವಣೆಯನ್ನು ನಡೆಸುವುದಕ್ಕೆ ಆಡಳಿತ ಮಂಡಳಿಯ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಕನಿಷ್ಠ ಆರು ತಿಂಗಳ ಮುಂಚೆ ಸಂಘದ ಚುನಾವಣೆಯನ್ನು ನಡೆಸುವುದಕ್ಕೆ ಸಹಕಾರಿ ಚುನಾವಣಾ ಆಯೋಗಕ್ಕೆ ಮಂಡಳಿಯು ವರದಿಯನ್ನು ಮಾಡತಕ್ಕದ್ದು (ಪ್ರಕರಣ 39ಎಎ). ಯಾವುದೇ ಆಡಳಿತ ಮಂಡಳಿಯು, ಮಂಡಳಿಯ ಚುನಾವಣೆಯನ್ನು ನಡೆಸಲು ವಿಫಲರಾಗಿದ್ದಲ್ಲಿ ಅಂತಹ ಮಂಡಳಿಯು, ಮಂಡಳಿಯ ಅವಧಿ ನಿರ್ದಿಷ್ಟಪಡಿಸಿದ ಕಾಲಮಿತಿಯ ಕೊನೆಯ ದಿನದಂದು ಅವರ ಪಥಾವಧಿ ತೆರವುಗೊಳಿಸಿದ್ದಾರೆಂದು ಭಾವಿಸತಕ್ಕದ್ದು ಮತ್ತು ಅಂಥ ಸದಸ್ಯರು ಅವರ ಪದಾವಧಿ ಮುಕ್ತಾಯವಾದ ದಿನಾಂಕದಿಂದ 5 ವರ್ಷಗಳ ಅವಧಿಯವರೆಗೆ ಮಂಡಳಿಯ ಸದಸ್ಯರಾಗಿ ಚುನಾವಣೆಗೆ ಸ್ಪರ್ಧಿಸಲು ಅನರ್ಹರಾಗುತ್ತಾರೆ [ಪ್ರಕರಣ 28ಬಿ(2)]

ಮಂಡಲಿಯು ಆಯೋಗಕ್ಕೆ ಅಗತ್ಯ ಪಡಿಸುವಂತ ಪುಸ್ತಕಗಳನ್ನು, ದಾಖಲಾತಿಗಳನ್ನು ಹಾಗೂ ಮಾಹಿತಿಯನ್ನು ಒದಗಿಸತಕ್ಕದ್ದು ಮತ್ತು ಮತದಾರರ ಪಟ್ಟಿಯನ್ನು ತಯಾರಿಸುವುದಕ್ಕೆ ಚುನಾವಣೆಯನ್ನು ನಡೆಸುವುದಕ್ಕೆ ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ಚುನಾವಣಾ ಆಯೋಗಕ್ಕೆ/ಜಿಲ್ಲಾ ಚುನಾವಣಾಧಿಕಾರಿಗಳಿಗೆ/ ಚುನಾವಣಾಧಿಕಾರಿಗಳಿಗೆ ನೀಡತಕ್ಕದ್ದು. [ಪ್ರಕರಣ 39ಎಎ(15)(ಬಿ) (ಸಿ)]

ಸಹಕಾರ ಸಂಘದ ಮಂಡಲಿಯ ಸದಸ್ಯ ಮರಣ/ರಾಜೀನಾಮೆ/ ವಜಾ/ ಇತರೆ ಕಾರಣದಿಂದ ತೆರವಾಗುವ ಯಾವ ಖಾಲಿ ಸ್ಥಾನವನ್ನು ಅಂಥ ಸಂಘದ ಉಪವಿಧಿಗಳಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ರೀತಿಯಲ್ಲಿ ಭರ್ತಿ ಮಾಡತಕ್ಕದ್ದು (ಪ್ರಕರಣ 29 ಇ)

ಪರಂತು, ಮಂಡಲಿಯ ಉಳಿದ ಪದಾವಧಿಯು ಅದರ ಮೂಲ ಪದಾವಧಿಯ ಅರ್ಧಕ್ಕಿಂತ ಹೆಚ್ಚು ಇದ್ದರೆ ಚುನಾವಣೆ ಮೂಲಕ ಭರ್ತಿ ಮಾಡತಕ್ಕದ್ದು, ಅಂತಹ ಸ್ಥಾನ ಭರ್ತಿ ಮಾಡಲು ಆ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನು ಅಂಥ ರಿಕ್ತತೆಯು ಉಂಟಾದ 7 ದಿನಗಳ ಒಳಗೆ ಸಹಕಾರ ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು ಆಯೋಗವು ಖಾಲಿ ಬಿದ್ದ ನಿರ್ದೇಶಕರ ಸ್ಥಾನಕ್ಕೆ 60 ದಿನಗಳ ಒಳಗಾಗಿ ರಿಕ್ತ ಸ್ಥಾನವನ್ನು ಭರ್ತಿ ಮಾಡಲು ಕ್ರಮವಹಿಸುವುದು (ನಿಯಮ 14ಎಎಫ್). ಪರಂತು, ಮಂಡಲಿಯ ಉಳಿದಿರುವ ಪದಾವಧಿಯು ಅದರ ಮೂಲ ಪದಾವಧಿಯು ಅರ್ಧಕ್ಕಿಂತ ಕಡಿಮೆ ಇದ್ದಲ್ಲಿ, ಯಾವ ವರ್ಗದ ಸದಸ್ಯರಿಂದ ಸಂಬಂಧಪಟ್ಟ ಸ್ಥಾನವು ಖಾಲಿಯಾಗಿದೆಯೇ, ಅದೇ ವರ್ಗದ ಸದಸ್ಯರ ಪೈಕಿ ನಾಮನಿರ್ದೇಶನ (co-option) ಮಾಡುವ ಮೂಲಕ ಮಂಡಲಿಯ ಖಾಲಿ ಸ್ಥಾನವನ್ನು ಭರ್ತಿ ಮಾಡುವುದು.

ಹೊಸದಾಗಿ ನೋಂದಣಿಯಾದ ಸಹಕಾರ ಸಂಘದ ಮೂಲಕ ಸಮಿತಿಯನ್ನು ಆಯ್ಕೆ ಮಾಡಲು ನೋಂದಣಿಯ ದಿನಾಂಕದಿಂದ 1 ತಿಂಗಳೊಳಗೆ ಚುನಾವಣೆ ನಡೆಸತಕ್ಕದ್ದು. ನೋಂದಣಿಯನ್ನು ಮಾಡಿದಂತಹ ನಿಬಂಧಕರು ಚುನಾವಣಾಧಿಕಾರಿಗಳ ನೇಮಕ ಮಾಡಲು ಪ್ರಸ್ತಾವನೆಯನ್ನು ಚುನಾವಣಾ ಆಯೋಗಕ್ಕೆ ಕೂಡಲೇ ಸಲ್ಲಿಸತಕ್ಕದ್ದು. ಆಡಳಿತ ಮಂಡಳಿಯ ಚುನಾವಣೆಯ ನಿಯಮ 13 ಹಾಗೂ 14 ರೀತ್ಯಾ ನಡೆಸತಕ್ಕದ್ದು ಪರಂತು ನಿಯಮ 13(ಡಿ) ಯ ಉಪನಿಯಮ (3) ಹಾಗೂ (5) ರ ಮೇರೆಗೆ ಸುಸ್ತಿದಾರರ ಪಟ್ಟಿಯನ್ನು ಪ್ರಕಟಿಸುವ ಅಗತ್ಯವಿರತಕ್ಕದ್ದಲ್ಲ.

## 01 – ಆಡಳಿತ ಮಂಡಳಿ

### ಪ್ರಕರಣ – 28(ಎ)

ಸಹಕಾರ ಸಂಘದ ಆಡಳಿತ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕರನ್ನು ಹೊರತು ಪಡಿಸಿ, 09ಕ್ಕಿಂತ ಕಡಿಮೆಯಿಲ್ಲದ ಆದರೆ ಕೆಳಗೆ ನಿರ್ದಿಷ್ಟ ಪಡಿಸಿದಷ್ಟು ಸಂಖ್ಯೆಗಿಂತ ಹೆಚ್ಚಿಲ್ಲದ ಸದಸ್ಯರನ್ನು ಒಳಗೊಂಡಿರತಕ್ಕದ್ದು [ಪ್ರಕರಣ –28ಎ(2)].

| | | |
|---|---|---|
| 1 | ಪ್ರಾಥಮಿಕ ಸಂಘ ಅಥವಾ ಮಾಧ್ಯಮಿಕ ಸಂಘದ ಕಾರ್ಯಕ್ಷೇತ್ರದ ವ್ಯಾಪ್ತಿಯು ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದ್ದರೆ, | ಹನ್ನೊಂದು ಸದಸ್ಯರು, |
| 2 | ಇಡೀ ತಾಲ್ಲೂಕು ವ್ಯಾಪಿಸಿದ್ದರೆ, | ಹದಿಮೂರು ಸದಸ್ಯರು, |
| 3 | ತಾಲ್ಲೂಕು ಮೀರಿದ ಅದರೆ ಜಿಲ್ಲೆಯನ್ನು ಮೀರದ ಪ್ರದೇಶಕ್ಕೆ ವ್ಯಾಪಿಸಿದ್ದರೆ, | ಹದಿನೈದು ಸದಸ್ಯರು,<br>ಪರಂತು, ಒಂದು ಜಿಲ್ಲೆಯನ್ನು ಮೀರಿದ ಕಾರ್ಯಕ್ಷೇತ್ರವನ್ನು ಹೊಂದಿರುವ ಪಟ್ಟಣ ಸಹಕಾರ ಬ್ಯಾಂಕ್‌ನ ಸಂಬಂಧದಲ್ಲಿ ಗರಿಷ್ಟ ಸಂಖ್ಯೆ ಹದಿನೇಳು ಸದಸ್ಯರು ಮೀರತಕ್ಕದ್ದಲ್ಲ, |
| 4 | ಜಿಲ್ಲೆಯನ್ನು ಮೀರಿ ವ್ಯಾಪಿಸಿದ್ದರೆ, | ಹತ್ತೊಂಬತ್ತು ಸದಸ್ಯರು, |
| 5 | ಅಪೆಕ್ಸ್ ಸಂಘಗಳನ್ನು ಒಳಗೊಂಡ ಸರಿಯುಕ್ತ ಸಂಘವಾಗಿದ್ದಲ್ಲಿ, | ಇಪ್ಪತ್ತೊಂದು ಸದಸ್ಯರು. |

ಪರಂತು, ಒಬ್ಬ ಸದಸ್ಯ ಸಂಘದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚಿನ ಸ್ಥಾನ/ಮತಕ್ಷೇತ್ರವನ್ನು ಪ್ರತಿನಿಧಿಸತಕ್ಕದ್ದಲ್ಲ ಪ್ರತಿ ಸಹಕಾರ ಸಂಘದ ಆಡಳಿತ ಮಂಡಳಿಯಲ್ಲಿ ಪ್ರಕರಣ 28–ಎ(3) ಪ್ರಕಾರ ಸ್ಥಾನಗಳನ್ನು ಈ ಕೆಳಕಂಡಂತೆ ಮೀಸಲಿಡತಕ್ಕದ್ದು ಹಾಗೂ ಚುನಾವಣೆ ಮೂಲಕ ಭರ್ತಿ ಮಾಡತಕ್ಕದ್ದು.

1. ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ವರ್ಗಕ್ಕೆ,
2. ಎರಡು ಸ್ಥಾನಗಳನ್ನು ಮಹಿಳೆಯರಿಗಾಗಿ,
3. ಒಂದು ಸ್ಥಾನವನ್ನು ಹಿಂದುಳಿದ ವರ್ಗಕ್ಕೆ,

ಯಾವುದೇ ಸಹಕಾರ ಸಂಘದ ಆಡಳಿತ ಮಂಡಲಿಯು ಪ್ರದೇಶ/ಮತಕ್ಷೇತ್ರದ ಆಧಾರದ ಮೇಲೆ ಚುನಾಯಿತವಾದಾಗ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ, ಮಹಿಳೆಯರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಕಾಯ್ದಿರಿಸಬೇಕಾದ ಮತಕ್ಷೇತ್ರಗಳನ್ನು ನಿರ್ದೇಶಕರ ಸಾಮಾನ್ಯ ಚುನಾವಣಾ ದಿನಾಂಕದ ಪೂರ್ವದಲ್ಲಿ ನಡೆಯುವ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ನಿರ್ಧರಿಸತಕ್ಕದ್ದು ಮತ್ತು ಈ ಸಂಬಂಧದಲ್ಲಿ ಚುನಾವಣಾ ಆಯೋಗವು ನೀಡುವ ಮಾರ್ಗಸೂಚಿಗಳಿಗೆ ಒಳಪಡತಕ್ಕದ್ದು. ಹಂತಹಂತವಾಗಿ ಒಂದಾದ ಮೇಲೆ ಒಂದರಂತೆ ಸಹಕಾರ ಸಂಘದ ಎಲ್ಲಾ ಮತಕ್ಷೇತ್ರಗಳು ಮೀಸಲಾತಿಗೆ ಒಳಪಡುವಂತೆ ಸ್ಥಾನಗಳ ಮೀಸಲಾತಿಯು ಕ್ರಮಬದ್ಧವಾಗಿ ಆವರ್ತಿಸುವುದನ್ನು ಖಾತರಿಪಡಿಸತಕ್ಕದ್ದು. (ನಿಯಮ 14ಎ.ಎಲ್)

ಪರಂತು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಮಹಿಳೆ ಅಥವಾ ಹಿಂದುಳಿದ ವರ್ಗದವರಿಗೆ ಮೀಸಲಿರಿಸಿದ ಮತ ಕ್ಷೇತ್ರದಲ್ಲಿ ವಾಸವಿರುವ ಅಂಥ ವರ್ಗ, ಜಾತಿ ಅಥವಾ ಪಂಗಡದ ಸದಸ್ಯರು ಸಂಘದಲ್ಲಿ ಲಭ್ಯವಿಲ್ಲದಿದ್ದಲ್ಲಿ, ಅಂತಹ ಸ್ಥಾನಗಳಿಗೆ ಮೀಸಲಾತಿ ಇಡತಕ್ಕದ್ದಲ್ಲ. ಮತ್ತು ಅಂಥ ಸ್ಥಾನಗಳನ್ನು ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡತಕ್ಕದ್ದು.

ಪರಂತು, ಬಿಡಿ ಸದಸ್ಯರನ್ನು ಉಳ್ಳ ಸಹಕಾರ ಸಂಘಗಳಲ್ಲಿ ಮೀಸಲಾತಿಯನ್ನು ಮಾಡತಕ್ಕದ್ದು ಯಾವುದೇ ಸಹಕಾರ ಸಂಘದ ಮಂಡಳಿಯು, ಬ್ಯಾಂಕಿಂಗ್ ವ್ಯವಸ್ಥೆಯೇ ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಸಂಘದ ಉದ್ದೇಶಗಳಿಗೆ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಇತರೆ ಕ್ಷೇತ್ರದಲ್ಲಿ ಪರಿಮಿತಿಯನ್ನು ಹೊಂದಿರುವ ವ್ಯಕ್ತಿಗಳನ್ನು ಮಂಡಳಿಯ ಸದಸ್ಯರಾಗಿ ಸಹಮತದಿಂದ (ಕೋ–ಆಪ್ಸನ್) ಮೂಲಕ ಸೇರಿಸಿಕೊಳ್ಳತಕ್ಕದ್ದು. [ಪ್ರಕರಣ 28–ಎ (4–ಎ)]

ಪರಂತು, ಸಹಮತದಿಂದ ಸೇರಿಸಿಕೊಂಡು ಸದಸ್ಯರ ಸಂಖ್ಯೆಯ ಪ್ರಕರಣ 28–ಎ(2) ರಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಟ ಸಂಖ್ಯೆಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ– ಸಹಮತದಿಂದ ಸೇರಿಸಿಕೊಂಡ ಸದಸ್ಯರು, ಅಂಥ ಸದಸ್ಯರ ಅಧಿಕಾರವುಳ್ಳವರಾಗಿ ಸಹಕಾರ ಸಂಘದ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಹೊಂದಿರತಕ್ಕದ್ದಲ್ಲ ಅಥವಾ ಮಂಡಳಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ.

ಪರಂತು, ವೃತ್ತಿಪರ ನಿರ್ದೇಶಕರು ಮತ್ತು ಕಾರ್ಯಾನುಗುಣ ನಿರ್ದೇಶಕರು ಮಂಡಳಿಯ ಸಭೆಗಳನ್ನು ನಡೆಸಲು ಕೋರಂನ ಭಾಗವಾಗಿರತಕ್ಕದ್ದಲ್ಲ.

ರಾಜ್ಯ ಸರ್ಕಾರವು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಹೊರತುಪಡಿಸಿ, ಸರ್ಕಾರದಿಂದ ನೆರವು ಪಡೆದ ಸಂಘದ ಆಡಳಿತ ಮಂಡಳಿಗೆ ಒಬ್ಬ ವ್ಯಕ್ತಿಯನ್ನು ತನ್ನ ಪ್ರತಿನಿಧಿಯಾಗಿ ನಾಮನಿರ್ದೇಶಿಸಬಹುದು. [ಪ್ರಕರಣ 28–ಎ(4–3)]

ಪ್ರಕರಣ 29ಎ ಮತ್ತು 39ಎ ಪ್ರಕರಣ ಉಪಬಂಧಗಳಿಗೊಳಪಟ್ಟು, ಮಂಡಳಿಯ ಸದಸ್ಯರ ಅಧಿಕಾರ ಅವಧಿಯು ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು, ಮತ್ತು ಸದರಿ ಅವಧಿಯು ಮುಕ್ತಾಯವಾದ ದಿನಾಂಕದಿಂದ ಮಂಡಳಿಯ ಅಂಥ ಸದಸ್ಯರು ಪದವನ್ನು ತೆರವುಗೊಳಿಸಿದ್ದಾರೆಂದು ಭಾವಿಸತಕ್ಕದ್ದು.

## 02 – ಮತದಾರರ ಪಟ್ಟಿ

### (ಪ್ರಕರಣ 20 ಹಾಗೂ ನಿಯಮ 13ಬಿ ಹಾಗೂ 13ಡಿ)

ಜಿಲ್ಲಾ ಚುನಾವಣಾಧಿಕಾರಿಗಳ ಜಿಲ್ಲೆಯಲ್ಲಿನ ಸಹಕಾರ ಸಂಘಗಳ ಆಡಳಿತ ಮಂಡಳಿಯ ಪದಾವಧಿಯು ಅಂತ್ಯವಾಗುವಂತಹ ಸಂಘಗಳ ಕ್ರೋಢೀಕೃತ ಪಟ್ಟಿಯೊಂದಿಗೆ ಈ ಕೆಳಕಂಡ ಮಾಹಿತಿಯೊಂದಿಗೆ ಕನಿಷ್ಠ 120 ದಿವಸಗಳ ಮುಂಚಿತವಾಗಿ ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು.

1. ಸಂಘದ ಹೆಸರು ಮತ್ತು ವಿಳಾಸ,
2. ಚುನಾಯಿಸಬೇಕಾದ ಮಂಡಳಿ ಸದಸ್ಯರ ಸಂಖ್ಯೆ,
3. ಆಡಳಿತ ಮಂಡಳಿಯ ಪದಾವಧಿಯು ಅಂತ್ಯವಾಗುವ ದಿನಾಂಕ,
4. ಚುನಾವಣೆ ನಡೆಯಬಹುದಾದ ನಿಯೋಜಿತ ಸ್ಥಳ,
5. ಚುನಾವಣಾಧಿಕಾರಿಯನ್ನಾಗಿ ನೇಮಿಸಬಹುದಾದ ಅಧಿಕಾರಿಯ ಹೆಸರು, ಹುದ್ದೆ ಹಾಗೂ ಕಛೇರಿಯ ವಿಳಾಸ.

ಜಿಲ್ಲಾ ಚುನಾವಣಾಧಿಕಾರಿಯು ಮತದಾರರ ಪಟ್ಟಿಯನ್ನು ತಯಾರಿಸಲು ಹಾಗೂ ಪರಿಶೀಲಿಸಲು ಅಗತ್ಯ ಸಂಘದ ದಾಖಲಾತಿಗಳನ್ನು ಸಲ್ಲಿಸುವುದು ಸಂಘದ ಕರ್ತವ್ಯವಾಗಿರತಕ್ಕದ್ದು [ನಿಯಮ 13ಡಿ(4)]. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಈ ಕೆಳಕಂಡ ಪಟ್ಟಿಗಳನ್ನು ಸಿದ್ಧಪಡಿಸಿ ಅಗತ್ಯ ಮಾಹಿತಿಗಳೊಂದಿಗೆ ಜಿಲ್ಲಾ

ಚುನಾವಣಾಧಿಕಾರಿಗಳಿಗೆ ಚುನಾವಣೆ ನಡೆಯುವ ದಿನಾಂಕಕ್ಕೆ ಕನಿಷ್ಠ 60 ದಿನಗಳ ಮುಂಚೆ ಸಲ್ಲಿಸತಕ್ಕದ್ದು. [ನಿಯಮ 13ಡಿ (5) (ಬಿ)]

1. ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರ ಅಥವಾ ಪ್ರತಿನಿಧಿಗಳ ಕರಡು ಪ್ರತಿ,
2. ಅಂತಿಮ ಮತದಾರರ ಪಟ್ಟಿ ಪ್ರಕಟಿಸಿ ನಿಗದಿಪಡಿಸುವ ದಿನಾಂಕಕ್ಕೆ ಸುಸ್ತಿಯಾಗುವಂತ ಮತದಾರರ ಪಟ್ಟಿ,
3. ಸುಸ್ತಿದಾರರ ಕರಡು ಪಟ್ಟಿ,
4. ಅನರ್ಹ ಕಾರಣಗಳಿಂದ ಮತದಾನ ಹಕ್ಕನ್ನು ಹೊಂದಿರದ ಸದಸ್ಯರ / ಪ್ರತಿನಿಧಿಗಳ / ಡೆಲಿಗೇಟುಗಳ ಕರಡು ಪ್ರತಿ. ಅನರ್ಹತೆಗೆ ಕಾರಣಗಳನ್ನು ಸದಸ್ಯವಾರು ತೋರಿಸುವುದು.

    ಎ. ಬಿಡಿ ಸದಸ್ಯನಾಗಿದ್ದಲ್ಲಿ ಅವನ /ಅವಳ ಹೆಸರು, ಸದಸ್ಯತ್ವ ಸಂಖ್ಯೆ ತಂದೆ/ ತಾಯಿ/ಪತಿ/ಪತ್ನಿಯ ಹೆಸರು ಮತ್ತು ವಿಳಾಸ.

    ಬಿ. ಸಂಘದ ಪ್ರತಿನಿಧಿಯಾಗಿದ್ದಲ್ಲಿ, ಸಂಘದ ಹೆಸರು, ಪ್ರತಿನಿಧಿಯ ಹೆಸರು, ತಂದೆ/ತಾಯಿ/ಪತಿ/ಪತ್ನಿಯ ಹೆಸರು ಹಾಗೂ ವಿಳಾಸ.

ಜಿಲ್ಲಾ ಚುನಾವಣಾಧಿಕಾರಿ ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸಲು ಮತದಾರರ ಪಟ್ಟಿಯನ್ನು ಚುನಾವಣೆ ದಿನಾಂಕಕ್ಕೆ ಕನಿಷ್ಠ 45 ದಿನಗಳ ಮುಂಚೆ ತಾತ್ಕಾಲಿಕ ಮತದಾರರ ಪಟ್ಟಿಯನ್ನು ಹಾಗೂ ಸುಸ್ತಿದಾರರ ಪಟ್ಟಿಯನ್ನು ಪ್ರಕಟಿಸುವುದು, ಹಾಗೂ ಈ ಮೂಲಕ ಸಂಘದ ಸದಸ್ಯರಿಂದ ಆಕ್ಷೇಪಣೆಗಳನ್ನು ಸ್ವೀಕರಿಸುವುದು. ಮತ್ತು ಅದೇ ದಿನ ಸುಸ್ತಿದಾರರಿಗೆ ಅವರ ಸುಸ್ತಿ ಬಾಕಿಯನ್ನು 30 ದಿನಗಳ ಒಳಗಾಗಿ ಪಾವತಿಸಲು ಕಾಲಾವಕಾಶ ನೀಡಿ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿ ನೋಟೀಸ್ ನೀಡತಕ್ಕದ್ದು.

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಚುನಾವಣೆ ನಡೆಯುವ ದಿನಾಂಕಕ್ಕೆ ಸ್ಪಷ್ಟ 15 ದಿನಗಳ ಮುಂಚೆ ಅರ್ಹ ಮತದಾರರ ಅಂತಿಮ ಪಟ್ಟಿಯನ್ನು ಪ್ರಕಟಿಸತಕ್ಕದ್ದು. ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವ ಪೂರ್ವದಲ್ಲಿ ಈ ಕೆಳಕಂಡ ಯಾವುದೇ ಅನರ್ಹತೆಯನ್ನು ಹೊಂದಿರುವ ವ್ಯಕ್ತಿ / ಡೆಲಿಗೇಟ್‌ಗೆ ಮತದಾನದ ಹಕ್ಕು ಇರುವುದಿಲ್ಲ ಹಾಗೂ ಅಂತಿಮ ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡತಕ್ಕದ್ದಲ್ಲ.

1. ಸಹ ಸದಸ್ಯರು ಅಥವಾ ನಾಮಮಾತ್ರ ಸದಸ್ಯರು,
2. ಸುಸ್ತಿದಾರರು ಅಥವಾ ಯಾವುದೇ ಸುಸ್ತಿ ಬಾಕಿದಾರರು,
3. ಚುನಾವಣೆ ದಿನಾಂಕಕ್ಕಿಂತ ಹನ್ನೆರಡು ತಿಂಗಳು ಒಳಗೆ ಸದಸ್ಯತ್ವ ಪಡೆದ ವ್ಯಕ್ತಿ ಅಥವಾ ಸದಸ್ಯ,
4. ವಜಾಗೊಂಡ ಅಥವಾ ರಾಜೀನಾಮೆ ನೀಡಿದ ಅಥವಾ ಮೃತ ಸದಸ್ಯ,
5. ಷೇರು ವ್ಯತ್ಯಾಸ ಬಾಕಿದಾರ ಸದಸ್ಯ.

**ಮತದಾರ ಸಂಘವು ಆಗಿದ್ದಲ್ಲಿ**

1. ಸಂಘದ ಆಡಳಿತ ಮಂಡಳಿ ಇಲ್ಲದಿದ್ದಲ್ಲಿ,
2. ಸಂಘವು ಸಮಾಪನೆಯಾಗಿದ್ದಲ್ಲಿ,
3. ಸಂಘವು ತನ್ನ ಕಾರ್ಯಚಟುವಟಿಕೆಯನ್ನು ಪ್ರಾರಂಭಿಸದಿದ್ದಲ್ಲಿ,
4. ಯಾವ ಸಂಘವು ತನ್ನ ಸದಸ್ಯರಿಗೆ ಸಾಲವನ್ನು ವಿತರಿಸುತ್ತದೆಯೋ ಅಂತಹ ಸಂಘವು ಚುನಾವಣೆ ನಡೆಯುವ ಹಿಂದಿನ ವರ್ಷದಲ್ಲಿ ಸದಸ್ಯರಿಂದ ಕನಿಷ್ಠ ಶೇ.50 ರಷ್ಟು ವಸೂಲಾತಿಯನ್ನು ಮಾಡಬೇಕು ಹಾಗೂ 50 ರಷ್ಟು ಸಾಲವನ್ನು ತನ್ನ ಹಣಕಾಸು ಸಂಘಗಳಿಗೆ ಪಾವತಿಸಿರಬೇಕು,

a) ಸಂಘದ ಬೇಡಿಕೆಯು ಹಣಕಾಸು ಬ್ಯಾಂಕ್ ಅಥವಾ ಸಾಲ ಏಜೆನ್ಸಿಯ ಬೇಡಿಕೆಗಿಂತ ಕಡಿಮೆ ಇದ್ದಲ್ಲಿ, ಸಂಘದ ಬೇಡಿಕೆಯ ಶೇ.50 ರಷ್ಟು,

ಅಥವಾ

b) ಸಂಘದ ಬೇಡಿಕೆಯು ಹಣಕಾಸು ಬ್ಯಾಂಕ್ ಅಥವಾ ಸಾಲ ಏಜೆನ್ಸಿಯ ಬೇಡಿಕೆಗಿಂತ ಹೆಚ್ಚಾಗಿದ್ದಲ್ಲಿ, ಹಣಕಾಸು ಬ್ಯಾಂಕ್ ಅಥವಾ ಸಾಲ ಏಜೆನ್ಸಿಯ ವಾಸ್ತವಿಕ ಬೇಡಿಕೆ ಅಷ್ಟು.

ಸದಸ್ಯ ಸಂಘವು ವರ್ಷ ಮುಕ್ತಾಯವಾದ 15 ದಿನಗಳೊಳಗಾಗಿ (ಏಪ್ರಿಲ್ 15) ಹಣಕಾಸು ಸಂಸ್ಥೆಗೆ ಪಾವತಿಸಿರಬೇಕು.

**ಬಿಡಿ ಸದಸ್ಯರಾಗಿದ್ದಲ್ಲಿ ಅಥವಾ ಸದಸ್ಯ ಸಂಘವಾಗಿದ್ದಲ್ಲಿ ಮತದಾನಕ್ಕೆ ಅನರ್ಹತೆಗಳು**

1. ಕಳೆದ 5 ವಾರ್ಷಿಕ ಸರ್ವಸದಸ್ಯರ ಸಭೆಗಳ ಪೈಕಿ ಕನಿಷ್ಠ 3 ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸದಿದ್ದಲ್ಲಿ
2. ಸಂಘದ ಬೈಲಾ ನಿರ್ದಿಷ್ಟಪಡಿಸಿದ ಕನಿಷ್ಠ ಸೇವೆಯನ್ನು ಸಂಘದಿಂದ ಪಡೆಯದಿದ್ದಲ್ಲಿ.

ತಾತ್ಕಾಲಿಕ ಮತದಾರರ ಪಟ್ಟಿ, ಸುಸ್ತಿದಾರರ ಪಟ್ಟಿ ಹಾಗೂ ಅಂತಿಮ ಅರ್ಹ ಮತದಾರರ ಪಟ್ಟಿ/ ಡೆಲಿಗೇಟ್ ಪಟ್ಟಿಯನ್ನು ಆಯಾ ಸಹಕಾರ ಸಂಘದ ನಾಮಫಲಕದಲ್ಲಿ, ಸಂಘದ ಶಾಖಾ ಕಛೇರಿಗಳಲ್ಲಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿಯ ನಾಮಫಲಕದಲ್ಲಿ ಪ್ರಕಟಿಸತಕ್ಕದ್ದು.

## 03 – ಚುನಾವಣೆಗಾಗಿ ಅಧಿಸೂಚನೆ

### [ಪ್ರಕರಣ 39ಎಎ ಹಾಗೂ ನಿಯಮ14(1)]

1. ಪ್ರಕರಣ 39ಎಎ ದಲ್ಲಿ ಉಲ್ಲೇಖಿಸಿದ ಚುನಾವಣೆಗಾಗಿ ಜಿಲ್ಲಾ ಚುನಾವಣಾಧಿಕಾರಿಯು, ಸಹಕಾರ ಚುನಾವಣಾ ಆಯೋಗದ ಅನುಮೋದನೆ ಪಡೆದ ನಂತರ, ನಮೂನೆ XI ರಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು.
2. ಜಿಲ್ಲಾ ಚುನಾವಣಾಧಿಕಾರಿಯು, ಅಂಥ ಅಧಿಸೂಚನೆಯಲ್ಲಿ,
   i. ಚುನಾವಣೆಯ ದಿನಾಂಕದ ನಿಕಟಪೂರ್ವದ ಏಳನೇ ಸ್ಪಷ್ಟ ದಿನದಂದು ಚುನಾವಣೆಗೆ ಸ್ಪರ್ಧಿಸಲು ಇಚ್ಛೆಯುಳ್ಳ ಅಭ್ಯರ್ಥಿಗಳಿಂದ ನಾಮಪತ್ರವನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರತಕ್ಕದ್ದು.
   ii. ನಾಮಪತ್ರ ಸ್ವೀಕರಿಸಲು ನಿಗದಿಯಾದ ಕೊನೆಯ ದಿನಾಂಕದ ನಿಕಟ ನಂತರದ ಮರುದಿನ ನಾಮಪತ್ರಗಳ ಪರಿಶೀಲನಾ ದಿನಾಂಕವಾಗಿರತಕ್ಕದ್ದು.
   iii. ಚುನಾವಣೆಯ ದಿನಾಂಕದ ನಿಕಟಪೂರ್ವದ ಐದನೇ ಸ್ಪಷ್ಟ ದಿನವು ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕವಾಗಿರತಕ್ಕದ್ದು.
   iv. ಅಗತ್ಯಬಿದ್ದಲ್ಲಿ ಮತದಾನ ನಡೆಯತಕ್ಕ ದಿನಾಂಕ ಹಾಗೂ ಮತದಾನ ನಡೆಯತಕ್ಕ ಸಮಯವನ್ನು ನಿಗದಿಪಡಿಸತಕ್ಕದ್ದು
   v. ಯಾವ ದಿನಾಂಕಕ್ಕೆ ಮುಂಚೆ ಚುನಾವಣೆಯನ್ನು ಪೂರ್ಣಗೊಳಿಸಬೇಕೋ ಆ ದಿನವನ್ನು ನಿಗದಿಪಡಿಸತಕ್ಕದ್ದು.

   – ಎಂಬ ವಿವರಗಳನ್ನು ತಿಳಿಸತಕ್ಕದ್ದು.

(2) (ಎ). ಉಪನಿಯಮ (1)ರಡಿ ಅಧಿಸೂಚನೆಯನ್ನು ಹೊರಡಿಸಿದ ನಂತರ, ಉದ್ದೇಶಿತ ಚುನಾವಣೆಗಾಗಿ ರಿಟರ್ನಿಂಗ್ ಅಧಿಕಾರಿಯು ನಮೂನೆ XII ರಲ್ಲಿ ಸಾರ್ವಜನಿಕ ನೋಟಿಸನ್ನು ನೀಡಿ ಅದನ್ನು ತನ್ನ ಕಚೇರಿಯ ಸೂಚನಾಫಲಕದಲ್ಲಿ, ಸಹಕಾರ ಸಂಘದ ಕಚೇರಿಯ ಸೂಚನಾಫಲಕದಲ್ಲಿ ಮತ್ತು ತಾನು ಅವಶ್ಯವೆಂದು ಭಾವಿಸುವಂಥ ಇತರ ಸ್ಥಳಗಳಲ್ಲಿ ಪ್ರದರ್ಶಿಸುವ ಮೂಲಕ ನಾಮಪತ್ರಗಳನ್ನು ಆಹ್ವಾನಿಸತಕ್ಕದ್ದು.

(ಬಿ). ಅಂಥ ನೋಟಿಸಿನಲ್ಲಿ, ರಿಟರ್ನಿಂಗ್ ಅಧಿಕಾರಿಯು ಇತರೆ ವಿಷಯಗಳ ಜೊತೆಗೆ ನಾಮಪತ್ರಗಳನ್ನು ಸ್ವೀಕರಿಸುವುದಕ್ಕಾಗಿ ಇರುವ ಕೊನೆಯ ದಿನಾಂಕ, ನಾಮಪತ್ರಗಳನ್ನು ಸಲ್ಲಿಸಬೇಕಾದ ಸ್ಥಳ, ನಾಮಪತ್ರಗಳ ಪರಿಶೀಲನೆಯ ದಿನಾಂಕ, ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ, ಅವಶ್ಯವಾದರೆ ಮತದಾನವನ್ನು ನಡೆಸುವ ದಿನಾಂಕ ಮತ್ತು ಮತದಾನದ ಅವಧಿ ಮತ್ತು ಚುನಾವಣೆಯನ್ನು ಯಾವ ದಿನಾಂಕಕ್ಕೆ ಮುಂಚೆ ಪೂರ್ಣಗೊಳಿಸಬೇಕೋ ಆ ದಿನಾಂಕದ ವಿವರಗಳನ್ನ ನಿರ್ದಿಷ್ಟಪಡಿಸತಕ್ಕದ್ದು. ಇವು ಜಿಲ್ಲಾ ಚುನಾವಣಾಧಿಕಾರಿಯು ಆ ಬಗ್ಗೆ (2)ನೇ ಉಪನಿಯಮದ ಅಡಿಯಲ್ಲಿ ಅಧಿಸೂಚಿಸಿದ ದಿನಾಂಕಗಳಿಗೆ ಅನುಗುಣವಾಗಿರತಕ್ಕದ್ದು.

## 04 – ಚುನಾವಣಾ ವೇಳಾಪಟ್ಟಿ

**[ನಿಯಮ 13ಡಿ (2)]**

ಜಿಲ್ಲಾ ಚುನಾವಣಾಧಿಕಾರಿಗಳು ಪ್ರಕರಣ 39ಎಎ ನಿಯಮ 14(1)ರ ರೀತ್ಯಾ ಆಡಳಿತ ಮಂಡಳಿಯ ಚುನಾವಣೆಗಾಗಿ ಅಧಿಸೂಚನೆಯನ್ನ ಹೊರಡಿಸಿದ ನಂತರ ಚುನಾವಣಾಧಿಕಾರಿಗಳು ಆಯಾ ಸಹಕಾರ ಸಂಘದ ಚುನಾವಣೆ ನಡೆಸಲು ಈ ಕೆಳಕಂಡ ಅಂಶಗಳನ್ನು ಒಳಗೊಂಡ ಚುನಾವಣಾ ವೇಳಾಪಟ್ಟಿಯನ್ನ ಚುನಾವಣೆ ನಡೆಯುವ ಸ್ಪಷ್ಟ 15 ದಿನಗಳ ಮುಂಚೆ (ನಮೂನೆ – XII)ರ ರೀತ್ಯಾ ಪ್ರಕಟಿಸತಕ್ಕದ್ದು.

a) ನಾಮಪತ್ರ ಆಹ್ವಾನಿಸಿ ಹೊರಡಿಸಿದ ಅಧಿಸೂಚನೆಯ ದಿನಾಂಕ;

b) ನಾಮಪತ್ರ ಸ್ವೀಕರಿಸಲು ಕೊನೆಯ ದಿನಾಂಕ;

c) ನಾಮಪತ್ರಗಳನ್ನು ಪರಿಶೀಲಿಸುವ ದಿನಾಂಕ ಮತ್ತು ಸಮಯ;

d) ಕ್ರಮಬದ್ಧ ನಾಮಪತ್ರಗಳನ್ನು ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ದಿನಾಂಕ ಮತ್ತು ಸಮಯ;

e) ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ ಮತ್ತು ಸಮಯ;

f) ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ದಿನಾಂಕ ಮತ್ತು ಸಮಯ;

g) ಅಭ್ಯರ್ಥಿಗಳಿಗೆ ಚಿಹ್ನೆಗಳ ಹಂಚಿಕೆ ಮತ್ತು ಚಿಹ್ನೆಗಳ ಸಹಿತ ಸ್ಪರ್ಧಿಸುವ ಅಭ್ಯರ್ಥಿಗಳ ಪ್ರಕಟಣೆಯ ದಿನಾಂಕ ಮತ್ತು ಸಮಯ;

h) ಮತದಾನದ ದಿನಾಂಕ ಮತ್ತು ಸಮಯ;

i) ಮತ ಏಣಿಕೆಯ ಮತ್ತು ಫಲಿತಾಂಶ ಪ್ರಕಟಣೆಯ ದಿನಾಂಕ ಮತ್ತು ಸಮಯ.

## 05 – ರಿಟರ್ನಿಂಗ್ ಅಧಿಕಾರಿ

**[ನಿಯಮ 13ಇ]**

1. ಸಹಕಾರ ಸಂಘದ ಆಡಳಿತ ಮಂಡಲಿಯ ಸಾಮಾನ್ಯ ಚುನಾವಣೆಗೆ ಅಥವಾ ಸಹಕಾರ ಸಂಘದ ಪದಾಧಿಕಾರಿಗಳ ಚುನಾವಣೆಗೆ ಅಥವಾ ಸಹಕಾರ ಸಂಘದ ಪ್ರತಿನಿಧಿಯ ಅಥವಾ ನಿರ್ದೇಶಕನ ಅಥವಾ ಪಧಾಧಿಕಾರಿಯ ಪದದಲ್ಲಿ ಉಂಟಾಗುವ ಆಕಸ್ಮಿಕ ಖಾಲಿಸ್ಥಾನವನ್ನು ಭರ್ತಿ ಮಾಡಲು ನಡೆಸುವ ಚುನಾವಣೆಗೆ, ಸಹಕಾರ ಚುನಾವಣಾ ಆಯೋಗವು ಒಬ್ಬ ರಿಟರ್ನಿಂಗ್ ಅಧಿಕಾರಿಯನ್ನು ಮತ್ತು ಅಗತ್ಯವಾದಷ್ಟು ಒಬ್ಬ ಅಥವಾ ಹೆಚ್ಚಿನ ಸಹಾಯಕ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸತಕ್ಕದ್ದು.
2. ರಿಟರ್ನಿಂಗ್ ಅಧಿಕಾರಿಯು ಈ ಕೆಳಗಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

   i. ಸಹಕಾರ ಚುನಾವಣಾ ಆಯೋಗದ ಅನುಮೋದನೆಗೆ ಒಳಪಟ್ಟು, ರಿಟರ್ನಿಂಗ್ ಅಧಿಕಾರಿಯು ಚುನಾವಣೆಯನ್ನು ನಡೆಸಲು ಪೂರ್ಣ ಕಾಲಾವಧಿಯ ಷೆಡ್ಯೂಲನ್ನು ತಯಾರಿಸಿ ಪ್ರಕಟಿಸತಕ್ಕದ್ದು.

   ii. ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸುವಂಥ ರೀತಿಯಲ್ಲಿ ರಿಟರ್ನಿಂಗ್ ಅಧಿಕಾರಿಯು ಜಿಲ್ಲಾ ಚುನಾವಣಾಧಿಕಾರಿಯೊಡನೆ ಸಮಾಲೋಚಿಸಿ ಅವಶ್ಯವಿರುವ ಸಂಖ್ಯೆಯ ಮತದಾನ ಕೇಂದ್ರಗಳನ್ನು ಒದಗಿಸಲು ವ್ಯವಸ್ಥೆ ಮಾಡಬಹುದು.

   iii. ಉಪನಿಯಮ (1)ರಡಿ ನೇಮಕವಾದ ರಿಟರ್ನಿಂಗ್ ಅಧಿಕಾರಿಯು ನಿರ್ದೇಶಕರ ಚುನಾವಣೆಯ ಉದ್ದೇಶಕ್ಕಾಗಿ ಚುನಾವಣಾ ವೇಳಾಪಟ್ಟಿಯನ್ನು ಚುನಾವಣಾ ದಿನಾಂಕದ ಕನಿಷ್ಠ ಹದಿನೈದು ದಿನಗಳ ಪೂರ್ವದಲ್ಲಿ ಪ್ರಕಟಿಸತಕ್ಕದ್ದು. ರಿಟರ್ನಿಂಗ್ ಅಧಿಕಾರಿಯ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಸಹಿಯಲ್ಲಿ ಚುನಾವಣೆಯ ನೋಟಿಸನ್ನು ಚುನಾವಣಾ ವೇಳಾಪಟ್ಟಿ ಸಹಿತ ಎಲ್ಲಾ ಅರ್ಹ ಸದಸ್ಯರಿಗೆ ಕೆಳಗಿನ ರೀತಿಯಲ್ಲಿ ಕಳುಹಿಸತಕ್ಕದ್ದು:

   - ಸಾಮಾನ್ಯ ಅಂಚೆಯ ಮೂಲಕ; ಅಥವಾ
   - ವಿದ್ಯುಜ್ಜನ್ಯ ಅಂಚೆ (ಇ–ಮೇಲ್); ಅಥವಾ
   - ಸೂಕ್ತ ಸ್ವೀಕೃತಿಯೊಂದಿಗೆ ಸ್ಥಳೀಯ ತಲುಪಿಸುವಿಕೆಯ ಮೂಲಕ; ಮತ್ತು
   - ಕಾರ್ಯಕ್ಷೇತ್ರದಲ್ಲಿ ಹೆಚ್ಚು ಪರಿಚಲನೆಯಲ್ಲಿರುವ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ.

   (iv) ಚುನಾವಣಾ ವೇಳಾಪಟ್ಟಿಯ ಸಹಿತ ಚುನಾವಣಾ ನೋಟಿಸನ್ನು ಸಹಕಾರ ಸಂಘದ ಮತ್ತು ಅದರ ಶಾಖೆಗಳ ಸೂಚನಾಫಲಕಗಳಲ್ಲಿ, ರಿಟರ್ನಿಂಗ್ ಅಧಿಕಾರಿಯ ಕಚೇರಿಯ ಸೂಚನಾಫಲಕದಲ್ಲಿ ಮತ್ತು ಜಿಲ್ಲಾ ಚುನಾವಣಾಧಿಕಾರಿಯ ಸೂಚನಾಫಲಕದಲ್ಲಿ ಪ್ರಕಟಿಸತಕ್ಕದ್ದು. ಚುನಾವಣಾ ನೋಟೀಸು ಕೆಳಗಿನ ಹೆಚ್ಚುವರಿ ಮಾಹಿತಿಯನ್ನು ಒಳಗೊಂಡಿರತಕ್ಕದ್ದು:–

   a) ಚುನಾವಣೆಯಲ್ಲಿ ಭರ್ತಿಮಾಡಬೇಕಾದ ಸ್ಥಾನಗಳ ಸಂಖ್ಯೆ;
   b) ನಿರ್ದೇಶಕರನ್ನು ಚುನಾಯಿಸಬೇಕಾದ ಪ್ರದೇಶ ಅಥವಾ ಮತಕ್ಷೇತ್ರ (ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ);

c) ಕಾಯ್ದೆಯಲ್ಲಿ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ಆಡಳಿತ ಮಂಡಲಿಯ ಸದಸ್ಯನಾಗಿ ಚುನಾಯಿತನಾಗಲು ನಿರ್ದಿಷ್ಟಪಡಿಸಲಾದ ಅರ್ಹತೆಗಳು;

(v) ಪ್ರತಿ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕನು ಚುನಾವಣೆ ಸಂಬಂಧದಲ್ಲಿ ರಿಟರ್ನಿಂಗ್ ಅಧಿಕಾರಿಯು ಅಪೇಕ್ಷಿಸುವ ಸೂಕ್ತವಾದ ಸಹಾಯ ಮತ್ತು ನೆರವನ್ನು ಒದಗಿಸತಕ್ಕದ್ದು.

(vi) ಯಾವುದೇ ಚುನಾವಣೆಯನ್ನು ನಿಯಮಗಳಲ್ಲಿ ತಿಳಿಸಿರುವ ರೀತಿಯಲ್ಲಿ ಪರಿಣಾಮಕಾರಿಯಾಗಿ ನಡೆಸಲು ಅಗತ್ಯವಾದ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುವುದು. ರಿಟರ್ನಿಂಗ್ ಅಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರತಕ್ಕದ್ದು, ಎಂದರೆ:–

(ಎ) ನಾಮಪತ್ರಗಳನ್ನು ಆಹ್ವಾನಿಸಿ ನೋಟೀಸನ್ನು ನೀಡುವುದು;

(ಬಿ) ನಾಮಪತ್ರಗಳನ್ನು ಸ್ವೀಕರಿಸುವುದು ಮತ್ತು ಪರಿಶೀಲಿಸುವುದು;

(ಸಿ) ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚಿಹ್ನೆಗಳನ್ನು ಹಂಚಿಕೆ ಮಾಡುವುದು;

(ಡಿ) ಸ್ಪರ್ಧಿಸುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವುದು;

(ಇ) ಮತದಾನ ಕೇಂದ್ರಗಳ ವ್ಯವಸ್ಥೆ ಮಾಡುವುದು;

(ಎಫ್) ಮತದಾನ ಕೇಂದ್ರಗಳಿಗೆ ಸಿಬ್ಬಂದಿಯನ್ನು ನಿಯೋಜಿಸುವ ವ್ಯವಸ್ಥೆ ಮಾಡುವುದು;

(ಜಿ) ಮತಪೆಟ್ಟಿಗೆಗಳನ್ನು ಒದಗಿಸಲು ವ್ಯವಸ್ಥೆ ಮಾಡುವುದು;

(ಹೆಚ್) ಮತಪತ್ರಗಳನ್ನು ಮುದ್ರಿಸಲು ವ್ಯವಸ್ಥೆ ಮಾಡುವುದು;

(ಐ) ವಿವಿಧ ಮತದಾನ ಕೇಂದ್ರಗಳ ಏಣಿಕೆ ಫಲಿತಾಂಶ ಕ್ರೋಢೀಕರಿಸುವುದು.

(ಜೆ) ಚುನಾವಣೆಯ ಫಲಿತಾಂಶವನ್ನು ಘೋಷಿಸುವುದು ಮತ್ತು ಚುನಾವಣಾ ಪ್ರಮಾಣ ಪತ್ರವನ್ನು ನೀಡುವುದು.

(vii) ರಿಟರ್ನಿಂಗ್ ಅಧಿಕಾರಿಯು ಚುನಾವಣೆಯ ಸಂಬಂಧದಲ್ಲಿ ಚುನಾವಣಾ ಸಿಬ್ಬಂದಿಗಳಿಂದ ಬರುವ ಮನವಿ ಪತ್ರಗಳನ್ನು ಸ್ವೀಕರಿಸತಕ್ಕದ್ದು.

(viii) ರಿಟರ್ನಿಂಗ್ ಅಧಿಕಾರಿಯು ತನ್ನ ಕರ್ತವ್ಯ ನಿರ್ವಹಣೆಗೆ ಅಗತ್ಯವಾದಲ್ಲಿ ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ಮತ್ತು ಚುನಾವಣಾ ಸಿಬ್ಬಂದಿಯ ನೆರವನ್ನು ಚುನಾವಣಾ ಆಯೋಗದ ಅನುಮತಿಗೊಳಪಟ್ಟು ಪಡೆಯಬಹುದು.

(ix) ರಿಟರ್ನಿಂಗ್ ಅಧಿಕಾರಿಯು ತನ್ನ ವ್ಯಾಪ್ತಿಯಲ್ಲಿ ಬರುವ ಯಾವುದೇ ಸಹಕಾರ ಸಂಘದ ಚುನಾವಣೆಯಲ್ಲಿ ಕಾನೂನು ಸುವ್ಯವಸ್ಥೆ ಪಾಲನೆಗಾಗಿ ಜಿಲ್ಲಾಡಳಿತದೊಡನೆ ಸಂಪರ್ಕವಿಟ್ಟಿರತಕ್ಕದ್ದು.

(x) ಚುನಾವಣಾ ಆಯೋಗವು ಕಾಲಕಾಲಕ್ಕೆ ನಿರ್ದೇಶಿಸಿದಂತೆ ರಿಟರ್ನಿಂಗ್ ಅಧಿಕಾರಿಯು ಸಹಕಾರ ಚುನಾವಣಾ ಆಯೋಗಕ್ಕೆ ವರದಿ ಅಥವಾ ರಿಟರ್ನ್‌ಗಳನ್ನು ಸಲ್ಲಿಸತಕ್ಕದ್ದು.

(xi) ಚುನಾವಣೆಗೆ ಸಂಬಂಧಪಟ್ಟ ಎಲ್ಲ ಸಂಗತವಾದ ಚುನಾವಣಾ ದಾಖಲೆಗಳನ್ನು ಸೂಕ್ತ ಸ್ವೀಕೃತಿಯೊಂದಿಗೆ ಸಂಬಂಧಪಟ್ಟ ಸಹಕಾರ ಸಂಘದ ಸುಪರ್ದಿನಲ್ಲಿ ಸಂರಕ್ಷಿಸತಕ್ಕದ್ದು, ಆದರೆ ಅಸಾಧಾರಣ ಸಂದರ್ಭಗಳಲ್ಲಿ, ಚುನಾವಣಾ ಆಯೋಗವು ಅಥವಾ ರಿಟರ್ನಿಂಗ್ ಅಧಿಕಾರಿಯು ಅಥವಾ ಸಹಾಯಕ ರಿಟರ್ನಿಂಗ್

ಅಧಿಕಾರಿಯು ಅಂಥ ದಾಖಲೆಗಳನ್ನು ಉಪವಿಭಾಗೀಯ ಕಚೇರಿಯಲ್ಲಿ ಅಭಿರಕ್ಷೆಯಲ್ಲಿಡುವುದು ಅಗತ್ಯವೆಂದು ಆದೇಶಿಸಿದಲ್ಲಿ, ಅಭಿರಕ್ಷೆಯಲ್ಲಿಡಬಹುದು.

(xii) ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸುವ ಅಂಥ ಅವಧಿಗೆ, ರಿಟರ್ನಿಂಗ್ ಅಧಿಕಾರಿಯು ತನ್ನ ವ್ಯಾಪ್ತಿಯಲ್ಲಿ ಬರುವ ಯಾವುದೇ ಸಹಕಾರ ಸಂಘದ ಚುನಾವಣೆಗೆ ಸಂಬಂಧಪಟ್ಟಂತೆ ತಾನು ತಯಾರಿಸಿದ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯಿಂದ ಸ್ವೀಕರಿಸಿದ ಎಲ್ಲಾ ಕಾಗದ ಪತ್ರಗಳನ್ನು/ ದಸ್ತಾವೇಜುಗಳನ್ನು ತನ್ನ ಸುಪರ್ದಿನಲ್ಲಿ ಇಟ್ಟಿರತಕ್ಕದ್ದು.

(xiii) ಕಾಲಕಾಲಕ್ಕೆ ಸಹಕಾರ ಚುನಾವಣಾ ಆಯೋಗವು ವಹಿಸುವ ಅಂಥ ಇತರ ಪ್ರಕಾರ್ಯಗಳನ್ನು ರಿಟರ್ನಿಂಗ್ ಅಧಿಕಾರಿಯು ನಿರ್ವಹಿಸತಕ್ಕದ್ದು.

## 06 – ನಾಮಪತ್ರ ಸಲ್ಲಿಕೆ

**[ನಿಯಮ 14(ಎ)]**

(1) ನಾಮಪತ್ರ ಸಲ್ಲಿಸುವುದಕ್ಕಾಗಿ ಗೊತ್ತುಪಡಿಸಿದ ದಿನಾಂಕದಂದು ಅಥವಾ ಅದಕ್ಕೆ ಮುಂಚೆ ಪ್ರತಿಯೊಬ್ಬ ಅಭ್ಯರ್ಥಿಯು ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ನಮೂನೆ XIII ರಲ್ಲಿ ಪೂರ್ಣಗೊಳಿಸಿದ ಅಭ್ಯರ್ಥಿಯು ಮತ್ತು ಮತದಾನದ ಹಕ್ಕುಳ್ಳ ಇನ್ನೊಬ್ಬ ಸದಸ್ಯನು ಸೂಚಕನಾಗಿ ಯುಕ್ತವಾಗಿ ರುಜುಮಾಡಿರುವ ನಾಮಪತ್ರವನ್ನು ಸಲ್ಲಿಸತಕ್ಕದ್ದು. ಅಂಥ ನಾಮಪತ್ರವು ಅಭ್ಯರ್ಥಿಯು ಸಹಕಾರ ಸಂಘದ ಆಡಳಿತ ಮಂಡಲಿಗೆ ಸಾಮಾನ್ಯ ಸ್ಥಾನದಿಂದ ಅಥವಾ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಅಥವಾ ಮಹಿಳೆಯರಿಗೆ ಅಥವಾ ಹಿಂದುಳಿದ ವರ್ಗದವರಿಗೆ ಮೀಸಲಿರಿಸಿದ ಸ್ಥಾನದಿಂದ ಅಭ್ಯರ್ಥಿಯಾಗಿ ಸ್ಪರ್ಧಿಸುವ ತನ್ನ ಇಚ್ಛೆಯನ್ನು ವ್ಯಕ್ತಪಡಿಸುವ ಮತ್ತು ಆತನು ಸಹಿ ಮಾಡಿರುವ ಘೋಷಣೆಯನ್ನು ಒಳಗೊಂಡಿರತಕ್ಕದ್ದು.

ಪರಂತು, ಸಂದರ್ಭಾನುಸಾರ ಯಾವ ಸದಸ್ಯನೂ ಅಥವಾ ಡೆಲಿಗೇಟನೂ ಒಂದು ಮತಕ್ಷೇತ್ರಕ್ಕಿಂತ ಹೆಚ್ಚಿನ ಮತಕ್ಷೇತ್ರಗಳಿಗೆ ಅಭ್ಯರ್ಥಿಯಾಗಿರತಕ್ಕದ್ದಲ್ಲ ಹಾಗೂ ಯಾವ ಸದಸ್ಯನೂ ಅಥವಾ ಡೆಲಿಗೇಟನೂ ಒಂದೇ ಮತಕ್ಷೇತ್ರದಿಂದ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ. ಮತ್ತು ಪರಂತು, ಒಂದು ಸಹಕಾರ ಸಂಘದ ಪರವಾಗಿ ಸಲ್ಲಿಸಲ್ಪಟ್ಟ ನಾಮಪತ್ರವು ಆ ಸಹಕಾರ ಸಂಘದ ಆಡಳಿತ ಮಂಡಲಿಯ ನಿರ್ಣಯದೊಂದಿಗೆ ಇರತಕ್ಕದ್ದು ಮತ್ತು ಅದನ್ನು ಅಭ್ಯರ್ಥಿಯೇ ಸ್ವತಃ ಸಹಿ ಮಾಡಿರತಕ್ಕದ್ದು.

(2) ಯಾವುದೇ ಸಹಕಾರ ಸಂಘದ ಆಡಳಿತ ಮಂಡಲಿಗೆ ನಡೆಯುವ ಸಾಮಾನ್ಯ ಚುನಾವಣೆಯಲ್ಲಿ

i. ಯಾವುದೇ ಸ್ಥಾನವನ್ನು ಹಿಂದುಳಿದ ವರ್ಗಗಳಿಗೆ ಅಥವಾ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟಿದ್ದರೆ, ಅಂಥ ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಯ ನಾಮಪತ್ರದ ಜೊತೆಗೆ ಅವನು / ಅವಳು ಆ ವರ್ಗಕ್ಕೆ ಸೇರಿದವರು ಎಂಬುದಕ್ಕೆ ರುಜುವಾತು ಪಡಿಸಲು ಸಮಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು.

ii. ಯಾವುದೇ ಸ್ಥಾನವನ್ನು ಮಹಿಳೆಯರಿಗಾಗಿ ಮೀಸಲಿಟ್ಟಿದ್ದರೆ, ನಾಮಪತ್ರವು ಅಭ್ಯರ್ಥಿಯು ಮಹಿಳೆಯಾಗಿರುವಳೆಂಬ ಘೋಷಣೆಯನ್ನು ಒಳಗೊಂಡಿರತಕ್ಕದ್ದು.

(2) ಪ್ರತಿ ನಾಮಪತ್ರವು ಸಹಕಾರ ಸಂಘದ ಹೆಸರಿಗೆ ಕೆಳಗಿನಂತೆ ನಗದುರೂಪದಲ್ಲಿ ಅಥವಾ ಪೇ ಆರ್ಡರ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ಠೇವಣಿಸಿದ ರಶೀದಿಯನ್ನು ಒಳಗೊಂಡಿರತಕ್ಕದ್ದು.

(i) ಪ್ರಾಥಮಿಕ ಅಥವಾ ಮಾಧ್ಯಮಿಕ ಸಹಕಾರ ಸಂಘವಾಗಿದ್ದಲ್ಲಿ, ಎರಡು ಸಾವಿರ ರೂ.ಗಳು

(ii) ಫೆಡರಲ್ ಅಥವಾ ಅಪೆಕ್ಸ್ ಸಹಕಾರ ಸಂಘವಾಗಿದ್ದಲ್ಲಿ, ಐದು ಸಾವಿರ ರೂ.ಗಳು

ಪರಂತು, ಅಭ್ಯರ್ಥಿಯು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದಲ್ಲಿ ಅಥವಾ ಹಿಂದುಳಿದ ವರ್ಗಕ್ಕೆ ಸೇರಿದ್ದಲ್ಲಿ ಅಥವಾ ಮಹಿಳೆಯಾಗಿದ್ದಲ್ಲಿ, ಅಂತಹ ಅಭ್ಯರ್ಥಿಯು ಪಾವತಿಸಬೇಕಾದ ಠೇವಣಿಯು ಮೇಲೆ ನಿರ್ದಿಷ್ಟಪಡಿಸಿದ ಮೊಬಲಗಿನ ಶೇಕಡಾ ಐವತ್ತರಷ್ಟು ಇರತಕ್ಕದ್ದು. ಸಾಮಾನ್ಯ ಸ್ಥಾನಕ್ಕೆ ಸ್ಪರ್ಧಿಸಲು ಇಚ್ಛಿಸುವ ಅಭ್ಯರ್ಥಿಗಳು ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡ ಅಥವಾ ಹಿಂದುಳಿದ ವರ್ಗ ಅಥವಾ ಮಹಿಳೆಯಾಗಿದ್ದರೂ ಸಹ ಅಂತಹವರು ಪೂರ್ಣ ಮೊಬಲಗು ಪಾವತಿಸತಕ್ಕದ್ದು. ಪರಂತು ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚಿನ ನಾಮಪತ್ರಗಳನ್ನು ಸಲ್ಲಿಸಿದ್ದಲ್ಲಿ ಈ ಉಪನಿಯಮದ ಅಡಿಯಲ್ಲಿ ನಿಗದಿಪಡಿಸಲಾದ ಒಂದಕ್ಕಿಂತ ಹೆಚ್ಚು ಠೇವಣಿ ಅವನಿಂದ ಅಗತ್ಯ ಪಡಿಸತಕ್ಕದ್ದಲ್ಲ.

(3) ನಾಮಪತ್ರವನ್ನು ಸಲ್ಲಿಸಿದ ಮೇಲೆ, ರಿಟರ್ನಿಂಗ್ ಅಧಿಕಾರಿಯು ನಾಮಪತ್ರದಲ್ಲಿ ನಮೂದಿಸಿದ ಅಭ್ಯರ್ಥಿಯ ಮತ್ತು ಅವನ ಸೂಚಕನ ಹೆಸರುಗಳು ಮತ್ತು ಮತದಾರರ ಪಟ್ಟಿಯ ಸಂಖ್ಯೆಗಳು ಮತದಾರರ ಪಟ್ಟಿಯಲ್ಲಿ ಹೇಗೆ ನಮೂದಿತವಾಗಿವೆಯೋ ಹಾಗೇ ಇವೆ ಎಂಬುದನ್ನು ಮನದಟ್ಟುಮಾಡಿಕೊಳ್ಳತಕ್ಕದ್ದು.

(4) ನಾಮಪತ್ರವನ್ನು ಸಲ್ಲಿಸುವಾಗ ರಿಟರ್ನಿಂಗ್ ಅಧಿಕಾರಿಯು ನಾಮಪತ್ರಗಳ ಪರಿಶೀಲನೆಗೆ ನಿಗದಿಪಡಿಸಿದ ಸ್ಥಳ, ದಿನಾಂಕ ಮತ್ತು ಸಮಯವನ್ನು ಅಭ್ಯರ್ಥಿಗೆ ತಿಳಿಸತಕ್ಕದ್ದು ಮತ್ತು ನಾಮಪತ್ರದ ಮೇಲೆ ಅದರ ಕ್ರಮ ಸಂಖ್ಯೆಯನ್ನು ದಾಖಲಿಸಿ ಅದರ ಮೇಲೆ ನಾಮಪತ್ರವನ್ನು ಆತನಿಗೆ ತಲುಪಿಸಿದ ದಿನಾಂಕ ಮತ್ತು ಸಮಯವನ್ನು ನಮೂದಿಸಿ ಸಹಿ ಮಾಡತಕ್ಕದ್ದು ಹಾಗೂ ಅದನ್ನು ಸ್ವೀಕರಿಸಿದ ಬಗ್ಗೆ ಲಿಖಿತ ಸ್ವೀಕೃತಿಯನ್ನು ತಕ್ಷಣ ನೀಡತಕ್ಕದ್ದು. ನಾಮಪತ್ರವನ್ನು ಸ್ವೀಕರಿಸಲು ನಿಗದಿಪಡಿಸಿದ ಸಮಯವು ಮುಕ್ತಾಯವಾದ ನಂತರ, ರಿಟರ್ನಿಂಗ್ ಅಧಿಕಾರಿಯು ಸ್ವೀಕೃತವಾದ ನಾಮಪತ್ರಗಳ ಪಟ್ಟಿಯನ್ನು ಅದೇ ದಿನ ತಯಾರಿಸಿ ಸಹಕಾರ ಸಂಘದ ಸೂಚನಾಫಲಕದ ಮೇಲೆ ಮತ್ತು ತನ್ನ ಕಚೇರಿಯ ಸೂಚನಾಫಲಕದ ಮೇಲೆ ಪ್ರದರ್ಶಿಸತಕ್ಕದ್ದು.

## 07 – ನಾಮಪತ್ರಗಳ ಪರಿಶೀಲನೆ

**[ನಿಯಮ 14(ಬಿ)]**

1. ನಾಮಪತ್ರಗಳ ಪರಿಶೀಲನೆಗೆ ನಿಗದಿಪಡಿಸಿದ ದಿನಾಂಕದಂದು ಅಭ್ಯರ್ಥಿಗಳು ಅಥವಾ ಅವರ ಸೂಚಕರು ರಿಟರ್ನಿಂಗ್ ಅಧಿಕಾರಿಯು ನಿಗದಿಪಡಿಸಬಹುದಾದಂಥ ವೇಳೆ ಮತ್ತು ಸ್ಥಳದಲ್ಲಿ ಹಾಜರಿರಬಹುದು. ರಿಟರ್ನಿಂಗ್ ಅಧಿಕಾರಿಯು ನಿಗದಿಪಡಿಸಿದ ಅವಧಿಯೊಳಗೆ ಮತ್ತು ರೀತಿಯಲ್ಲಿ ಸಲ್ಲಿಸಲಾದ ಎಲ್ಲಾ ಅಭ್ಯರ್ಥಿಗಳ ನಾಮಪತ್ರಗಳನ್ನು ಪರಿಶೀಲಿಸುವುದಕ್ಕಾಗಿ ಮತ್ತು ನಾಮಪತ್ರ ಸರಿ ಇರುವ ಬಗ್ಗೆ, ಅರ್ಹತೆ ಮತ್ತು ಪೂರ್ಣತೆಯನ್ನು ಮನಗಾಣಲು ಎಲ್ಲಾ ಯುಕ್ತ ಸೌಲಭ್ಯಗಳನ್ನು ಕೊಡತಕ್ಕದ್ದು.

2. ಆಗ ರಿಟರ್ನಿಂಗ್ ಅಧಿಕಾರಿಯು ನಾಮಪತ್ರಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಯಾವುದೇ ನಾಮಪತ್ರಕ್ಕೆ ಮಾಡಿರಬಹುದಾದಂಥ ಎಲ್ಲಾ ಆಕ್ಷೇಪಣೆಗಳನ್ನು ತೀರ್ಮಾನಿಸತಕ್ಕದ್ದು ಮತ್ತು ಅಂಥ ಆಕ್ಷೇಪಣೆಗಳ ಮೇಲೆ ಆಗಲಿ ಅಥವಾ ಸ್ವಪ್ರೇರಣೆಯಿಂದಾಗಲಿ ತಾನು ಅವಶ್ಯವೆಂದು ಭಾವಿಸುವಂಥ ಸಂಗ್ರಹವಾದ ವಿಚಾರಣೆ ಯಾವುದಾದರೂ ಇದ್ದರೆ ಅದನ್ನು ಮಾಡಿದ ತರುವಾಯ ಯಾವುದೇ ನಾಮಪತ್ರವನ್ನು ಈ ಕೆಳಕಂಡ ಯಾವುದೇ ಕಾರಣದ ಮೇಲೆ ತಿರಸ್ಕರಿಸಬಹುದು, ಎಂದರೆ:

   i. ಅಭ್ಯರ್ಥಿಯು ಕಾಯ್ದೆಯ, ನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳ ಮೇರೆಗೆ ಆಡಳಿತ ಮಂಡಲಿಯ ನಿರ್ದೇಶಕನಾಗಿ ಚುನಾಯಿತನಾಗಲು ಅರ್ಹತೆ ಇಲ್ಲದಿರುವುದು ಅಥವಾ ಅನರ್ಹನಾಗಿರುವುದು;

   ii. ನಾಮಪತ್ರದ ಮೇಲೆ ಇರುವ ಅಭ್ಯರ್ಥಿಯ ಅಥವಾ ಸೂಚಕನ ರುಜು ನೈಜವಾದುದಲ್ಲವಾಗಿರುವುದು.

   ಪರಂತು, ಪ್ರಸಂಗಾನುಸಾರ ಅಭ್ಯರ್ಥಿಯ ಅಥವಾ ಆತನ ಸೂಚಕನ ಗುರುತು ಸಾಬೀತಾದಲ್ಲಿ, ಆತನ ಹೆಸರಿನ ಅಥವಾ ಆತನ ಸೂಚಕನ ಹೆಸರಿನ ಅಥವಾ ಮತದಾರರ ಪಟ್ಟಿ(ಸದಸ್ಯರ/ಪ್ರತಿನಿಧಿಗಳ/ ಡೆಲಿಗೇಟುಗಳ ಪಟ್ಟಿ) ಯಲ್ಲಿ ದಾಖಲಿಸಿರುವಂತೆ ಅಭ್ಯರ್ಥಿಗೆ ಅಥವಾ ಸೂಚಕನಿಗೆ ಸಂಬಂಧಪಟ್ಟ ಇತರ ಮಾಹಿತಿಗಳ ನಿಖರವಲ್ಲದ ವಿವರಣೆ ಇದೆ ಎಂಬ ಕಾರಣದ ಮೇಲೆ ಮಾತ್ರ ಯಾವುದೇ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ್ಲ. ಮತ್ತು ಪರಂತು, ರಿಟರ್ನಿಂಗ್ ಅಧಿಕಾರಿಯು ಗಣನಾರ್ಹ ಸ್ವರೂಪವಲ್ಲದ ಯಾವುದೇ ದೋಷದ ಕಾರಣದ ಮೇಲೆ ಯಾವುದೇ ನಾಮಪತ್ರವನ್ನು ತಿರಸ್ಕರಿಸತಕ್ಕದ್ದಲ್ಲ.

   iii. ನಾಮಪತ್ರಗಳನ್ನು ಸ್ವೀಕರಿಸಲು ನಿಗದಿಪಡಿಸಿದ ದಿನಾಂಕ ಮತ್ತು ಸಮಯದ ನಂತರ ನಾಮಪತ್ರವನ್ನು ತಲುಪಿಸಲಾಗಿದೆ ಅಥವಾ ಸ್ವೀಕರಿಸಲಾಗಿದೆ.

3. ರಿಟರ್ನಿಂಗ್ ಅಧಿಕಾರಿಯು ಪ್ರತಿಯೊಂದು ನಾಮಪತ್ರದ ಮೇಲೆ ಅದನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ತನ್ನ ತೀರ್ಮಾನವನ್ನು ಹಿಂಬರಹ ಮಾಡತಕ್ಕದ್ದು ಮತ್ತು ನಾಮಪತ್ರವನ್ನು ತಿರಸ್ಕರಿಸಿದರೆ ಅಂಥ ತಿರಸ್ಕರಣೆಯ ಬಗ್ಗೆ ಅವನಿಗೆ ಇರುವ ಕಾರಣಗಳ ಸಂಕ್ಷಿಪ್ತ ಹೇಳಿಕೆಯನ್ನು ಲಿಖಿತದಲ್ಲಿ ದಾಖಲು ಮಾಡತಕ್ಕದ್ದು.

4. ಎಲ್ಲಾ ನಾಮಪತ್ರಗಳನ್ನು ಪರಿಶೀಲಿಸಿ ಅವುಗಳನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ತೀರ್ಮಾನವನ್ನು ದಾಖಲು ಮಾಡಿದ ತರುವಾಯ ಕೂಡಲೇ ರಿಟರ್ನಿಂಗ್ ಅಧಿಕಾರಿಯು ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಅಂದರೆ ಯಾರ ನಾಮಪತ್ರಗಳು ಕ್ರಮಬದ್ಧವಾಗಿವೆ ಎಂದು ಕಂಡುಬಂದಿದೆಯೋ ಅಂಥ ಅಭ್ಯರ್ಥಿಗಳ ಪಟ್ಟಿಯನ್ನು ಕನ್ನಡ ಅಕ್ಷರಮಾಲೆಗೆ ಅನುಗುಣವಾಗಿ ಮತ್ತು ನಾಮಪತ್ರದಲ್ಲಿ ನೀಡಿರುವ ವಿಳಾಸದೊಂದಿಗೆ ನಮೂನೆ XIV ರಲ್ಲಿ ತಯಾರಿಸತಕ್ಕದ್ದು ಮತ್ತು ಅದನ್ನು ತನ್ನ ಕಛೇರಿಯ ಸೂಚನಾಫಲಕದ ಮೇಲೆ ಅಂಟಿಸತಕ್ಕದ್ದು. ಅಂಥ ಪಟ್ಟಿಯ ಒಂದು ಪ್ರತಿಯನ್ನು ಅದೇ ದಿನ ಸಹಕಾರ ಸಂಘದ ಸೂಚನಾಫಲಕದ ಮೇಲೆ ಪ್ರದರ್ಶಿಸತಕ್ಕದ್ದು.

## 08 – ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವಿಕೆ

**[ನಿಯಮ 14(ಸಿ)]**

1. ಯಾವನೇ ಅಭ್ಯರ್ಥಿಯು ನಮೂನೆ XV ರಲ್ಲಿ ಲಿಖಿತದಲ್ಲಿ ನೋಟೀಸು ನೀಡುವ ಮೂಲಕ ಮತ್ತು ಅದನ್ನು ನಾಮಪತ್ರ ಸಲ್ಲಿಸಿದ ನಂತರ ಆದರೆ ನಾಮಪತ್ರ ಪರಿಶೀಲನೆಗೆ ನಿಗದಿಮಾಡಿದ ದಿನಾಂಕದ ಮರುದಿನದ ಮೂರು ಗಂಟೆಯ ಒಳಗೆ ಯಾವುದೇ ಸಮಯದಲ್ಲಾದರೂ ಅಂಥ ಅಭ್ಯರ್ಥಿಯೇ ಖುದ್ದಾಗಿ ರಿಟರ್ನಿಂಗ್ ಅಧಿಕಾರಿಗೆ ನೀಡುವ ಮೂಲಕ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಬಹುದು.

2. (1)ನೇ ಉಪನಿಯಮದ ಮೇರೆಗೆ ಅಂಥ ನೋಟೀಸನ್ನು ಸ್ವೀಕರಿಸಿದ ಮೇಲೆ ರಿಟರ್ನಿಂಗ್ ಅಧಿಕಾರಿಯು ಅದರ ಮೇಲೆ ಅದನ್ನು ನೀಡಿದ ದಿನಾಂಕ ಮತ್ತು ವೇಳೆಯನ್ನು ಬರೆಯತಕ್ಕದ್ದು.

3. (1)ನೇ ಉಪನಿಯಮದ ಮೇರೆಗೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಕೊಟ್ಟಿರುವ ಯಾವನೇ ವ್ಯಕ್ತಿಗೆ ಸದರಿ ನೋಟೀಸನ್ನು ರದ್ದುಪಡಿಸಲು ಅವಕಾಶ ನೀಡತಕ್ಕದ್ದಲ್ಲ. ಒಬ್ಬ ಅಭ್ಯರ್ಥಿಯು ತನ್ನ ಉಮೇದುವಾರಿಕೆಯನ್ನು ಹಿಂತೆದುಕೊಳ್ಳುವ ಬಗ್ಗೆ ಒಮ್ಮೆ ನೀಡಿದ ನೋಟೀಸು ಮಾರ್ಪಡಿಸಲ್ಪಡತಕ್ಕದ್ದಲ್ಲ ಮತ್ತು ಅದು ಅಂತಿಮವಾಗಿರತಕ್ಕದ್ದು.

## 09 – ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ ತಯಾರಿಕೆ

**[ನಿಯಮ 14(ಡಿ)]**

1. ಉಮೇದುವಾರಿಕೆಗಳನ್ನು ಹಿಂದಕ್ಕೆ ಪಡೆಯಬಹುದಾದ ಅವಧಿಯು ಮುಕ್ತಾಯವಾದ ಕೂಡಲೇ ರಿಟರ್ನಿಂಗ್ ಅಧಿಕಾರಿಯು ಸ್ಪರ್ಧಿಸುವ ಅಭ್ಯರ್ಥಿಗಳ ಅಂದರೆ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯಲ್ಲಿ ಸೇರಿದ ಮತ್ತು ಸದರಿ ಅವಧಿಯೊಳಗೆ ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳದ ಅಭ್ಯರ್ಥಿಗಳ ಪಟ್ಟಿಯನ್ನು ನಮೂನೆ XVI ರಲ್ಲಿ ಕನ್ನಡ ಭಾಷೆಯಲ್ಲಿ ತಯಾರಿಸಿ ಪ್ರಕಟಿಸತಕ್ಕದ್ದು. ಅಂತಹ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯ ಪ್ರತಿಯನ್ನು ಸಹಕಾರ ಸಂಘದ ಸೂಚನಾಫಲಕದ ಮೇಲೆ ಅದೇ ದಿನ ಪ್ರದರ್ಶಿಸತಕ್ಕದ್ದು.
2. ಪರಂತು, ಸಹಕಾರ ಚುನಾವಣಾ ಆಯೋಗವು ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಕನ್ನಡೇತರ ಭಾಷೆಯಲ್ಲಿ ತಯಾರಿಸಬಹುದೆಂದು ನಿರ್ದೇಶಿಸಬಹುದು.
3. ಸದರಿ ಪಟ್ಟಿಯು ನಾಮಪತ್ರಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ನೀಡಿರುವಂತೆ ಕನ್ನಡ ಅಕ್ಷರಮಾಲೆಯ ಕ್ರಮದಲ್ಲಿ ಅಭ್ಯರ್ಥಿಗಳ ಹೆಸರು ಮತ್ತು ವಿಳಾಸಗಳನ್ನು ಒಳಗೊಂಡಿರತಕ್ಕದ್ದು.
4. ಮತದಾನವು ಅವಶ್ಯಕವಾದಲ್ಲಿ ರಿಟರ್ನಿಂಗ್ ಅಧಿಕಾರಿಯು ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರದಲ್ಲಿ ವ್ಯಕ್ತಪಡಿಸಿರುವ ಚಿಹ್ನೆಗಳ ಆಯ್ಕೆಯನ್ನು ಪರ್ಯಾಲೋಚಿಸತಕ್ಕದ್ದು ಮತ್ತು ನಿಯಮ 14ಇ ಅನುಸಾರವಾಗಿ ಚಿಹ್ನೆಗಳನ್ನು ಹಂಚಿಕೆ ಮಾಡತಕ್ಕದ್ದು.
5. ಅಭ್ಯರ್ಥಿಗೆ ನೀಡಲಾದ ಯಾವುದೇ ಚಿಹ್ನೆಯ ಬಗೆಗಿನ ಹಂಚುವಿಕೆಯು ಅಂತಿಮವಾಗಿರತಕ್ಕದ್ದು.
6. ಪ್ರತಿಯೊಬ್ಬ ಅಭ್ಯರ್ಥಿಗೆ ಅಥವಾ ಅವನ ಸೂಚಕನಿಗೆ ಅಭ್ಯರ್ಥಿಗೆ ಹಂಚಿಕೆ ಮಾಡಲಾದ ಚಿಹ್ನೆಯನ್ನು ಕೂಡಲೇ ತಿಳಿಸತಕ್ಕದ್ದು ಮತ್ತು ಅವರಿಗೆ ಅದರ ಒಂದು ಮಾದರಿಯನ್ನು ರಿಟರ್ನಿಂಗ್ ಅಧಿಕಾರಿಯು ಒದಗಿಸತಕ್ಕದ್ದು.

## 10 – ಅವಿರೋಧ ಆಯ್ಕೆ

**[ನಿಯಮ 14(ಜಿ)]**

ಯಾವುದೇ ಸ್ಥಾನ ಅಥವಾ ಮತಕ್ಷೇತ್ರದಿಂದ ಸ್ಪರ್ಧಿಸಿದ ಅಭ್ಯರ್ಥಿಗಳ ಸಂಖ್ಯೆಯು ಆ ಸ್ಥಾನ ಅಥವಾ ಮತಕ್ಷೇತ್ರದಿಂದ ಭರ್ತಿಮಾಡಬೇಕಾದ ಸ್ಥಾನಗಳಿಗೆ ಸಮನಾಗಿದ್ದರೆ / ಸಂಖ್ಯೆಗೆ ಕಡಿಮೆಯಾಗಿದ್ದರೆ, ನಾಮಪತ್ರ ಹಿಂತೆಗೆದ ನಂತರದಲ್ಲಿ ರಿಟರ್ನಿಂಗ್ ಅಧಿಕಾರಿಯು ಕೂಡಲೇ ಅಂಥ ಎಲ್ಲಾ ಅಭ್ಯರ್ಥಿಗಳು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು

ನಮೂನೆ XIX ರಲ್ಲಿ ಯುಕ್ತವೆನಿಸಬಹುದಾದಂತೆ ಘೋಷಿಸತಕ್ಕದ್ದು ಮತ್ತು ಜಿಲ್ಲಾ ಚುನಾವಣಾಧಿಕಾರಿಯು ಸಹಕಾರ ಚುನಾವಣಾ ಆಯೋಗದ ಅನುಮೋದನೆಯೊಡನೆ ಉಳಿದ ಸ್ಥಾನ ಅಥವಾ ಸ್ಥಾನಗಳಿಗೆ ಅರ್ಹ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಚುನಾಯಿಸಲು ಆ ಸಹಕಾರ ಸಂಘವನ್ನು ಕೋರತಕ್ಕದ್ದು. ಆ ಆಕಸ್ಮಿಕ ಸ್ಥಾನವನ್ನು ಭರ್ತಿ ಮಾಡಲು ಅಂಥ ಚುನಾವಣೆಯು ಮುಕ್ತಾಯವಾದ ತರುವಾಯ, ರಿಟರ್ನಿಂಗ್ ಅಧಿಕಾರಿಯು ಆ ಆಕಸ್ಮಿಕ ಖಾಲಿಸ್ಥಾನಗಳನ್ನು ಭರ್ತಿ ಮಾಡಲು ಅಂಥ ಅಭ್ಯರ್ಥಿಗಳು ಯುಕ್ತವಾಗಿ ಚುನಾಯಿತರಾಗಿದ್ದಾರೆಂದು ನಮೂನೆ XX ರಲ್ಲಿ ಕೂಡಲೇ ಘೋಷಿಸತಕ್ಕದ್ದು.

## 10–ಎ ಸ್ಪರ್ಧಿಸುವ ಚುನಾವಣೆ

### ನಿಯಮ 14(ಡಿ)

ಯಾವುದೇ ಸ್ಥಾನ ಅಥವಾ ಮತಕ್ಷೇತ್ರದಿಂದ ಸ್ಪರ್ಧಿಸಿದ ಅಭ್ಯರ್ಥಿಗಳ ಸಂಖ್ಯೆಯು ಆ ಸ್ಥಾನ ಅಥವಾ ಮತಕ್ಷೇತ್ರದಿಂದ ಭರ್ತಿಮಾಡಬೇಕಾದ ಸ್ಥಾನಗಳ ಸಂಖ್ಯೆಗಿಂತ ಹೆಚ್ಚಾಗಿದ್ದರೆ, ಅಂಥ ಸ್ಥಾನ /ಕ್ಷೇತ್ರಗಳಿಗೆ ಮತದಾನವನ್ನು ನಡೆಸತಕ್ಕದ್ದು.

## 11 – ಚಿಹ್ನೆಗಳ ಹಂಚಿಕೆ

### [ನಿಯಮ 14(ಇ)]

1. ಯಾವುದೇ ಅಭ್ಯರ್ಥಿಯು ರಾಜ್ಯದಲ್ಲಿ ಮನ್ನಣೆ ಪಡೆದ ರಾಜಕೀಯ ಪಕ್ಷಗಳಿಗೆ ಹಂಚಿಕೆ ಮಾಡಿದ ಚಿಹ್ನೆಗಳನ್ನು ಹೊರತುಪಡಿಸಿ ಉಳಿದ ಮುಕ್ತ ಚಿಹ್ನೆಗಳ ಪೈಕಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಳ್ಳತಕ್ಕದ್ದು.

   **ವಿವರಣೆ:** ಈ ಉಪನಿಯಮದ ಉದ್ದೇಶಕ್ಕಾಗಿ, 'ಮಾನ್ಯ ಮಾಡಿದ ರಾಜಕೀಯ ಪಕ್ಷ' ಎಂದರೆ ಚುನಾವಣಾ ಚಿಹ್ನೆಗಳ (ಮೀಸಲಾತಿ ಹಾಗೂ ಹಂಚಿಕೆ) ಆದೇಶ 1968ರಡಿ ಭಾರತದ ಚುನಾವಣಾ ಆಯೋಗದಿಂದ ಒಂದು ರಾಷ್ಟ್ರೀಯ ಪಕ್ಷ ಅಥವಾ ಕರ್ನಾಟಕದಲ್ಲಿ ರಾಜ್ಯ ಪಕ್ಷ ಎಂದು ಗುರುತಿಸಲ್ಪಟ್ಟ ಪ್ರತಿಯೊಂದು ರಾಜಕೀಯ ಪಕ್ಷ.

2. ಯಾವುದೇ ಒಂದು ಮುಕ್ತ ಚಿಹ್ನೆಯನ್ನು ಒಬ್ಬ ಅಭ್ಯರ್ಥಿಯು ಮಾತ್ರ ಆಯ್ಕೆ ಮಾಡಿಕೊಂಡಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿಯು ಆ ಚಿಹ್ನೆಯನ್ನು ಆ ಅಭ್ಯರ್ಥಿಗೆ ಹಂಚಿಕೆ ಮಾಡತಕ್ಕದ್ದು. ಅದೇ ಚಿಹ್ನೆಯನ್ನು ಬೇರೆ ಯಾರಿಗೂ ಹಂಚಿಕೆ ಮಾಡತಕ್ಕದ್ದಲ್ಲ.

3. ಒಂದೇ ಮುಕ್ತ ಚಿಹ್ನೆಯನ್ನು ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿಯು ಸದರಿ ಮುಕ್ತ ಚಿಹ್ನೆಯನ್ನು ಯಾವ ಅಭ್ಯರ್ಥಿಗೆ ಹಂಚಿಕೆ ಮಾಡತಕ್ಕದ್ದು ಎಂಬ ಬಗ್ಗೆ ಚೀಟಿ ಎತ್ತುವ ಮೂಲಕ ನಿರ್ಧರಿಸತಕ್ಕದ್ದು. ಯಾವ ಅಭ್ಯರ್ಥಿಯ ಪರವಾಗಿ ಚೀಟಿ ಬರುತ್ತದೋ ಆ ಅಭ್ಯರ್ಥಿಗೆ ಅಂಥ ಚಿಹ್ನೆಯನ್ನು ಹಂಚಿಕೆ ಮಾಡತಕ್ಕದ್ದು ಮತ್ತು ಬೇರೆ ಯಾರಿಗೂ ಹಂಚಿಕೆ ಮಾಡತಕ್ಕದ್ದಲ್ಲ.

4. ರಿಟರ್ನಿಂಗ್ ಅಧಿಕಾರಿಯು ನಮೂನೆ XVI ರಲ್ಲಿ ಚಿಹ್ನೆ ಸಹಿತ ಕನ್ನಡ ವರ್ಣಮಾಲೆಯ ಕ್ರಮದಲ್ಲಿ ಹೆಸರುಗಳನ್ನು ಜೋಡಿಸಿ ಕ್ರಮಬದ್ಧವಾಗಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಪ್ರಕಟಿಸತಕ್ಕದ್ದು.

## 12 – ಪ್ರಿಸೈಡಿಂಗ್ ಅಧಿಕಾರಿಗಳ ಮತ್ತು ಚುನಾವಣಾ ಸಿಬ್ಬಂದಿಯ ನೇಮಕಾತಿ

**[ನಿಯಮ 13 ಎಫ್]**

1. ಜಿಲ್ಲಾ ಚುನಾವಣಾಧಿಕಾರಿಯು ಪ್ರತಿಯೊಂದು ಮತದಾನದ ಕೇಂದ್ರಕ್ಕಾಗಿ ಒಬ್ಬ ಪ್ರಿಸೈಡಿಂಗ್ ಅಧಿಕಾರಿಯನ್ನು ಮತ್ತು ತಾನು ಅವಶ್ಯವೆಂದು ಭಾವಿಸುವಂಥ ಪೋಲಿಂಗ್ ಅಧಿಕಾರಿ ಅಥವಾ ಅಧಿಕಾರಿಗಳನ್ನು ನೇಮಕಮಾಡಬಹುದು.

2. ಪ್ರಿಸೈಡಿಂಗ್ ಅಧಿಕಾರಿಯು ಹಾಗೆ ನಿರ್ದೇಶಿಸಿದಲ್ಲಿ, ಪೋಲಿಂಗ್ ಅಧಿಕಾರಿಯು ಈ ನಿಯಮಗಳ ಅಡಿಯಲ್ಲಿ ಪ್ರಿಸೈಡಿಂಗ್ ಅಧಿಕಾರಿಯ ಎಲ್ಲ ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸತಕ್ಕದ್ದು.

3. ಪ್ರಿಸೈಡಿಂಗ್ ಅಧಿಕಾರಿಯು ಅನಾರೋಗ್ಯದಿಂದಾಗಿ ಅಥವಾ ಇತರ ಅನಿವಾರ್ಯ ಕಾರಣದಿಂದಾಗಿ ಮತದಾನ ಕೇಂದ್ರದಿಂದ ಗೈರುಹಾಜರಾಗಲೇಬೇಕಾದರೆ, ಯಾವುದೇ ಅಂಥ ಗೈರುಹಾಜರಿಯ ಕಾಲದಲ್ಲಿ ಅಂಥ ಪ್ರಕಾರ್ಯಗಳನ್ನು ನೆರವೇರಿಸಲು ರಿಟರ್ನಿಂಗ್ ಅಧಿಕಾರಿಯು ಈ ಹಿಂದೆಯೇ ಅಧಿಕೃತಗೊಳಿಸಿದಂಥ ಪೋಲಿಂಗ್ ಅಧಿಕಾರಿಯು ಅವನ ಪ್ರಕಾರ್ಯಗಳನ್ನು ನೇರವೇರಿಸಕ್ಕದ್ದು.

4. ಮತದಾನ ಕೇಂದ್ರದಲ್ಲಿ ಸುವ್ಯವಸ್ಥೆಯನ್ನು ಕಾಪಾಡುವುದು ಮತ್ತು ಮತದಾನವು ನ್ಯಾಯಯುತವಾಗಿ ನಡೆಯುವಂತೆ ನೋಡಿಕೊಳ್ಳುವುದು ಪ್ರಿಸೈಡಿಂಗ್ ಅಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರತಕ್ಕದ್ದು.

5. ಮತದಾನ ಕೇಂದ್ರದ ಪ್ರಿಸೈಡಿಂಗ್ ಅಧಿಕಾರಿಗೆ ಅವನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಸಹಾಯ ಮಾಡುವುದು ಆ ಮತದಾನ ಕೇಂದ್ರದ ಪೋಲಿಂಗ್ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

6. ಪ್ರತಿ ಸಹಾಯಕ ರಿಟರ್ನಿಂಗ್ ಅಧಿಕಾರಿಯು, ರಿಟರ್ನಿಂಗ್ ಅಧಿಕಾರಿಯ ನಿಯಂತ್ರಣಕ್ಕೊಳಪಟ್ಟು, ರಿಟರ್ನಿಂಗ್ ಅಧಿಕಾರಿಯು ಅಥವಾ ಸಹಕಾರ ಚುನಾವಣಾ ಆಯೋಗವು ವಹಿಸುವಂತೆ ರಿಟರ್ನಿಂಗ್ ಅಧಿಕಾರಿಯ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಸಕ್ಷಮನಾಗಿರತಕ್ಕದ್ದು.

7. ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣದಲ್ಲಿ ಸಾಮಾನ್ಯ ಚುನಾವಣೆಯ ದಿನದಂದು ಪ್ರಿಸೈಡಿಂಗ್ ಅಧಿಕಾರಿ ಮತ್ತು ಪೋಲಿಂಗ್ ಅಧಿಕಾರಿಗಳು ಮತದಾನವನ್ನು ನಡೆಸತಕ್ಕದ್ದು ಮತ್ತು ಮತದಾನ ಮುಕ್ತಾಯವಾದ ಕೂಡಲೇ ಸದಸ್ಯರು ಅಥವಾ ಪ್ರತಿನಿಧಿಗಳು/ಡೆಲಿಗೇಟುಗಳು ಹಾಕಿದ ಮತಗಳನ್ನು ಎಣಿಸತಕ್ಕದ್ದು ಮತ್ತು ನಿರ್ದೇಶಿಸಿದಂತೆ ವರದಿಗಳನ್ನು/ರಿಟರ್ನುಗಳನ್ನು ತಯಾರಿಸತಕ್ಕದ್ದು. ಅವರು ಚುನಾವಣೆಗೆ ಸಂಬಂಧಪಟ್ಟ ದಾಖಲೆಗಳನ್ನು ಅಥವಾ ಸಾಮಗ್ರಿಗಳನ್ನು ಸಂಬಂಧಪಟ್ಟ ರಿಟರ್ನಿಂಗ್ ಅಧಿಕಾರಿಗೆ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸತಕ್ಕದ್ದು."

## 13 – ಮತಪತ್ರ ಮತ್ತು ಮತಪೆಟ್ಟಿಗೆ

**[ನಿಯಮ 14(ಎಲ್)]**

1. ಪ್ರತಿಯೊಂದು ಮತಪತ್ರಕ್ಕೆ ಅದಕ್ಕೆ ಲಗತ್ತಿಸಿದ ಒಂದು ಪಕ್ಕಪ್ರತಿಯು (counterfoil) ನಮೂನೆ XVII ರಲ್ಲಿ ಇರತಕ್ಕದ್ದು.

2. ಮತಪತ್ರದ ಮತ್ತು ಅದರ ಪಕ್ಕಪ್ರತಿಯ ಕ್ರಮ ಸಂಖ್ಯೆಯನ್ನು ಮತಪತ್ರದ ಹಿಂಭಾಗದ ಎಡಗಡೆಯಲ್ಲಿ ಮುದ್ರಿಸತಕ್ಕದ್ದು.
3. ಎರಡು ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯರ್ಥಿಗಳ ಹೆಸರು ಒಂದೇ ಆಗಿದ್ದರೆ, ಅವರ ಉದ್ಯೋಗ ಅಥವಾ ವಾಸಸ್ಥಳವನ್ನು ಸೇರಿಸುವ ಮೂಲಕ ಅಥವಾ ಇತರೆ ಯಾವುದೇ ರೀತಿಯಲ್ಲಿ ಅವರನ್ನು ಗುರುತಿಸತಕ್ಕದ್ದು.
4. ಮತಪತ್ರವು ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರುಗಳನ್ನು ಕನ್ನಡ ಅಕ್ಷರಮಾಲಾ ಕ್ರಮದಲ್ಲಿ ಜೋಡಿಸತಕ್ಕದ್ದು. ಅದನ್ನು ಅನುಕೂಲಕ್ಕೆ ತಕ್ಕಂತೆ ಬೆರಳಚ್ಚಿಸತಕ್ಕದ್ದು ಅಥವಾ ಮುದ್ರಿಸತಕ್ಕದ್ದು. ಮತಪತ್ರದ ಹಿಂಭಾಗದಲ್ಲಿ ರಿಟರ್ನಿಂಗ್ ಅಧಿಕಾರಿಯು ಅಥವಾ ಪ್ರಿಸೈಡಿಂಗ್ ಅಧಿಕಾರಿಯು ತನ್ನ ಮೊಹರು ಮತ್ತು ಕಿರುಸಹಿ ಹಾಕಲು ಅವಕಾಶವಿರತಕ್ಕದ್ದು. ಒಬ್ಬ ಮತದಾರನು ತಾನು ಯಾವ ಅಭ್ಯರ್ಥಿಗೆ ಮತನೀಡಲು ಬಯಸುತ್ತಾನೋ ಅಂಥ ಅಭ್ಯರ್ಥಿಗಳ ಹೆಸರು ಅಥವಾ ಹೆಸರುಗಳ ಮುಂದೆ 卐 ಎಂಬ ಗುರುತನ್ನು ಹಾಕಲು ಮತಪತ್ರವು ಒಂದು ಅಂಕಣ ಒಳಗೊಂಡಿರತಕ್ಕದ್ದು.
5. ಮೀಸಲು ಸ್ಥಾನಗಳಿಗೆ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರುಗಳು ಸಾಮಾನ್ಯ ಅಭ್ಯರ್ಥಿಗಳ ಹೆಸರುಗಳೊಂದಿಗೆ ಕನ್ನಡ ಅಕ್ಷರಮಾಲೆಯ ಕ್ರಮದಲ್ಲಿ ಜೋಡಿಸತಕ್ಕದ್ದು ಹಾಗೂ ಮೀಸಲು ಸ್ಥಾನಕ್ಕೆ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರಿನ ಕೆಳಭಾಗದಲ್ಲಿ ನಮೂದಿಸತಕ್ಕದ್ದು.
6. ರಿಟರ್ನಿಂಗ್ ಅಧಿಕಾರಿಯು ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ಮತಪತ್ರವನ್ನು ಮುದ್ರಿಸುವ ಉದ್ದೇಶಕ್ಕಾಗಿ ಯಾವುದೇ ಸಮರ್ಥ ಮುದ್ರಣಾಲಯವನ್ನು ಆಯ್ಕೆಮಾಡಿಕೊಳ್ಳತಕ್ಕದ್ದು.
7. ರಿಟರ್ನಿಂಗ್ ಅಧಿಕಾರಿಯು ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ಸ್ಥಳೀಯವಾಗಿ ಮತಪೆಟ್ಟಿಗೆ / ಪೆಟ್ಟಿಗೆಗಳನ್ನು ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು.

## 14 – ಮತದಾನ ಕೇಂದ್ರಗಳಲ್ಲಿನ ವ್ಯವಸ್ಥೆ

**[ನಿಯಮ 14(ಎಮ್)]**

1. ಪ್ರತಿಯೊಂದು ಮತದಾನ ಕೇಂದ್ರದ ಹೊರಗೆ–
   (ಎ) ಮತದಾನ ಕೇಂದ್ರದಲ್ಲಿ ಮತ ನೀಡಲು ಹಕ್ಕುಳ್ಳ ಮತದಾರರ (ಸದಸ್ಯರ ಅಥವಾ ಪ್ರತಿನಿಧಿಗಳ ಅಥವಾ ಡೆಲಿಗೇಟುಗಳ) ವಿವರಗಳನ್ನು ಮತ್ತು ಮತದಾನ ಪ್ರದೇಶವನ್ನು ನಿರ್ದಿಷ್ಟಪಡಿಸುವ ನೋಟೀಸನ್ನು; ಮತ್ತು
   (ಬಿ) ಸ್ಪರ್ಧಿಸಿರುವ ಅಭ್ಯರ್ಥಿಗಳ ಪಟ್ಟಿಯ ಒಂದು ಪ್ರತಿಯನ್ನು ಎದ್ದು ಕಾಣುವಂತೆ ಪ್ರದರ್ಶಿಸತಕ್ಕದ್ದು.
2. ಪ್ರತಿಯೊಂದು ಮತದಾನ ಕೇಂದ್ರದಲ್ಲಿ ಮತದಾರರು ಬೇರೆಯವರಿಗೆ ಕಾಣದಂತೆ ತಮ್ಮ ಮತಗಳನ್ನು ಚಲಾಯಿಸಬಹುದಾದಂಥ ಒಂದು ಅಥವಾ ಹೆಚ್ಚು ಮತದಾನದ ಪ್ರತ್ಯೇಕ ವಿಭಾಗಗಳನ್ನು ಸ್ಥಾಪಿಸತಕ್ಕದ್ದು.
3. ರಿಟರ್ನಿಂಗ್ ಅಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರಕ್ಕೆ ಸಾಕಷ್ಟು ಸಂಖ್ಯೆಯ ಮತಪೆಟ್ಟಿಗೆಗಳು, ಮತದಾರರ ಪಟ್ಟಿಯ ಪ್ರತಿಗಳು, ಮತಪತ್ರಗಳು, ಮತಪತ್ರಗಳ ಮೇಲೆ ಗುರುತು ಮಾಡುವುದಕ್ಕಾಗಿ ವಿಭಿನ್ನ ಸೀಲುಗಳು ಮತ್ತು ಮತದಾನ ನಡೆಸುವುದಕ್ಕೆ ಅಗತ್ಯವಿರುವಂಥ ಇತರೆ ಸಾಮಗ್ರಿಗಳನ್ನು ಒದಗಿಸತಕ್ಕದ್ದು.
4. ಮತದಾನ ಕೇಂದ್ರ ಅಥವಾ ಸ್ಥಳದ ನೂರು ಮೀಟರ್ ಒಳಗೆ, ಚುನಾವಣೆ ನಡೆಯುತ್ತಿರುವಾಗ ಪ್ರಚಾರ ಮಾಡುವುದನ್ನು ಅಥವಾ ಮತ ಯಾಚಿಸುವುದನ್ನು ಪೂರ್ಣವಾಗಿ ನಿಷೇಧಿಸತಕ್ಕದ್ದು.

## 15 – ಮತದಾನ ಮಾಡುವ ರೀತಿ

**[ನಿಯಮ 14(ಕೆ)]**

ಮತದಾನವನ್ನು ನಡೆಸುವ ಪ್ರತಿಯೊಂದು ಚುನಾವಣೆಯಲ್ಲಿ ಮತಗಳನ್ನು ಮತಪತ್ರಗಳ ಮೂಲಕ ನೀಡತಕ್ಕದ್ದು ಮತ್ತು ಚುನಾವಣೆಯಲ್ಲಿ ಮತ ನೀಡುವ ಎಲ್ಲಾ ಮತದಾರರು (ಸದಸ್ಯರು ಅಥವಾ ಪ್ರತಿನಿಧಿಗಳು ಅಥವಾ ಡೆಲಿಗೇಟುಗಳು) ಮತದಾನ ಕೇಂದ್ರದಲ್ಲಿ ಖುದ್ದಾಗಿ ಮತ ನೀಡತಕ್ಕದ್ದು ಮತ್ತು ಯಾವ ಮತವನ್ನೂ ಪ್ರಾಕ್ಸಿ ಮೂಲಕ ದಾಖಲಿಸಲು ಅನುಮತಿಸತಕ್ಕದ್ದಲ್ಲ. ಮತಪತ್ರಗಳ ಮೇಲೆ ಮತದಾರನು ಯಾವ ಅಭ್ಯರ್ಥಿಗೆ / ಅಭ್ಯರ್ಥಿಗಳಿಗೆ ಮತ ಹಾಕಲು ಬಯಸುವನೋ ಆ ಅಭ್ಯರ್ಥಿಗೆ / ಅಭ್ಯರ್ಥಿಗಳ ಹೆಸರಿನ ಮುಂದೆ ಗುಪ್ತವಾಗಿ ಗುರುತು ಮಾಡುವುದರ ಮೂಲಕ ಮತದಾನ ಮಾಡುವುದು.

## 16 – ಮತದಾನ ಕೇಂದ್ರಗಳಿಗೆ ಪ್ರವೇಶ

**[ನಿಯಮ 14(ಎನ್)]**

ಪ್ರಿಸೈಡಿಂಗ್ ಅಧಿಕಾರಿಯು ಮತದಾನ ಕೇಂದ್ರದ ಒಳಗಡೆ ಯಾವುದೇ ಒಂದು ಕಾಲದಲ್ಲಿ ಪ್ರವೇಶ ಮಾಡತಕ್ಕ ಮತದಾರರ ಸಂಖ್ಯೆಯನ್ನು ನಿಯಂತ್ರಿಸತಕ್ಕದ್ದು ಮತ್ತು

a) ಪೋಲಿಂಗ್ ಅಧಿಕಾರಿಗಳನ್ನು;
b) ಚುನಾವಣೆಗೆ ಸಂಬಂಧಿಸಿದಂತೆ ಕರ್ತವ್ಯದ ಮೇಲಿರುವಂಥ ಸಾರ್ವಜನಿಕ ನೌಕರರನ್ನು;
c) ಜಿಲ್ಲಾ ಚುನಾವಣಾಧಿಕಾರಿಯಿಂದ ಮತ್ತು ಸಹಕಾರ ಚುನಾವಣಾ ಆಯೋಗದಿಂದ ಪ್ರಾಧಿಕೃತರಾದ ವ್ಯಕ್ತಿಗಳನ್ನು
d) ಅಭ್ಯರ್ಥಿಗಳನ್ನು ಅಥವಾ ಅವರ ಅಧಿಕೃತ ಏಜೆಂಟರನ್ನು;
e) ಮತದಾರರ ಸಂಗಡ ಇರುವ ಕೈಕೂಸನ್ನು;
f) ಸಹಾಯವಿಲ್ಲದೆ ಚಲಿಸಲು ಸಾಧ್ಯವಿಲ್ಲದಂಥ ಅಂಧ ಅಥವಾ ಅಶಕ್ತ ಮತದಾರರ ಜೊತೆಗೆ ಬರುವ ವ್ಯಕ್ತಿಯನ್ನು;
g) ಚುನಾವಣೆಯ ಉದ್ದೇಶಕ್ಕಾಗಿ ರಿಟರ್ನಿಂಗ್ ಅಧಿಕಾರಿಯು ಅಥವಾ ಪ್ರಿಸೈಡಿಂಗ್ ಅಧಿಕಾರಿಯು ನಿಯೋಜಿಸಬಹುದಾದಂಥ ಇತರ ವ್ಯಕ್ತಿಗಳನ್ನು–ಹೊರತುಪಡಿಸಿ ಇತರ ಎಲ್ಲ ವ್ಯಕ್ತಿಗಳಿಗೆ ಪ್ರವೇಶ ನಿರ್ಬಂಧಿಸತಕ್ಕದ್ದು.

## 17 – ಮತದಾನಕ್ಕಾಗಿ ಮತಪೆಟ್ಟಿಗೆಗಳ ಸಿದ್ಧತೆ:

**[ನಿಯಮ 14(ಪಿ)]**

(1) ಮತದಾನವು ಪ್ರಾರಂಭವಾಗುವ ಪೂರ್ವದಲ್ಲಿ, ಪ್ರಿಸೈಡಿಂಗ್ ಅಧಿಕಾರಿಯು, ಮತಪೆಟ್ಟಿಗೆಯು ಖಾಲಿ ಇದೆ ಮತ್ತು ಲೇಬಲ್ಲುಗಳನ್ನು ಹೊಂದಿದೆ ಎಂಬುದನ್ನು ಆ ಸಮಯದಲ್ಲಿ ಹಾಜರಿದ್ದ ಎಲ್ಲಾ ಅಭ್ಯರ್ಥಿಗಳಿಗೆ ತೋರಿಸತಕ್ಕದ್ದು.

(2) ಅಂಥ ಅಭ್ಯರ್ಥಿಗಳಿಗೆ ಪೂರ್ಣವಾಗಿ ಕಾಣುವಂತೆ ಮತಪೆಟ್ಟಿಗೆಯನ್ನು ಮುಚ್ಚಿ ಮೊಹರು ಮಾಡಿ ಭದ್ರಪಡಿಸತಕ್ಕದ್ದು.

(3) ಮತದಾನ ಕೇಂದ್ರದಲ್ಲಿ ಉಪಯೋಗಿಸಿದ ಪ್ರತಿಯೊಂದು ಮತಪೆಟ್ಟಿಗೆಯ ಒಳಗೆ ಮತ್ತು ಹೊರಗೆ ಎರಡೂ ಕಡೆಯಲ್ಲಿ:

i. ಕ್ರಮ ಸಂಖ್ಯೆ, ಇದ್ದಲ್ಲಿ, ಮತ್ತು ಮತಕ್ಷೇತ್ರದ ಹೆಸರು

ii. ಕ್ರಮ ಸಂಖ್ಯೆ ಮತ್ತು ಮತದಾನ ಕೇಂದ್ರದ ಹೆಸರು;

iii. ಮತಪೆಟ್ಟಿಗೆಯ ಕ್ರಮಸಂಖ್ಯೆ (ಮತದಾನದ ಕೊನೆಯಲ್ಲಿ ಮತಪೆಟ್ಟಿಗೆಯ ಹೊರಗಡೆ ಮಾತ್ರ ಲೇಬಲ್ಲಿನ ಮೇಲೆ ಭರ್ತಿ ಮಾಡತಕ್ಕದ್ದು); ಮತ್ತು

iv. ಮತದಾನದ ದಿನಾಂಕ–ಇವುಗಳನ್ನು ಗುರುತು ಮಾಡಿದ ಲೇಬಲ್ಲುಗಳನ್ನು ಹೊಂದಿರತಕ್ಕದ್ದು.

## 18 – ಮತದಾರರ ಗುರುತಿಸುವಿಕೆ

[ನಿಯಮ 14(ಓ)]

1. ಮತದಾನ ಮಾಡುವ ಸ್ಥಳದಲ್ಲಿ ಒಂದು ರಿಜಿಸ್ಟರನ್ನು ಇಟ್ಟಿರತಕ್ಕದ್ದು ಮತ್ತು ಪ್ರತಿಯೊಬ್ಬ ಮತದಾರನು ನಿಯಮ 13ಎ ಅಡಿ ನೀಡಲಾದ ಗುರುತಿನ ಕಾರ್ಡನ್ನು ಹಾಜರುಪಡಿಸಿ ರಿಜಿಸ್ಟರಿನಲ್ಲಿ ಸಹಿ ಮಾಡತಕ್ಕದ್ದು ಮತ್ತು ಗುರುತಿನ ಚೀಟಿಯನ್ನು ಪಡೆದುಕೊಳ್ಳತಕ್ಕದ್ದು.

2. ಪ್ರತಿಯೊಬ್ಬ ಮತದಾರನು ಮತದಾನ ಕೇಂದ್ರವನ್ನು ಪ್ರವೇಶಿಸುತ್ತಿದ್ದಂತೆ ಪ್ರಿಸೈಡಿಂಗ್ ಅಧಿಕಾರಿಯು ಅಥವಾ ಈ ಬಗ್ಗೆ ಅವನಿಂದ ಅಧಿಕೃತನಾದ ಪೋಲಿಂಗ್ ಅಧಿಕಾರಿಯು ಮತದಾರರ ಪಟ್ಟಿಯಲ್ಲಿ ಸುಸಂಗತ ನಮೂದುಗಳೊಂದಿಗೆ ಮತದಾರನ ಹೆಸರು ಮತ್ತು ಇತರ ವಿವರಗಳು ಇವೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು ಮತ್ತು ಆ ಮೇಲೆ ಕ್ರಮಸಂಖ್ಯೆ, ಹೆಸರು ಮತ್ತು ಇತರ ವಿವರಗಳನ್ನು ಕೂಗತಕ್ಕದ್ದು.

3. ಮತಪತ್ರವನ್ನು ಪಡೆಯಲು ವ್ಯಕ್ತಿಯ ಹಕ್ಕನ್ನು ತೀರ್ಮಾನಿಸುವಲ್ಲಿ, ಸಂದರ್ಭಾನುಸಾರ ಪ್ರಿಸೈಡಿಂಗ್ ಅಧಿಕಾರಿಯು ಅಥವಾ ಪೋಲಿಂಗ್ ಅಧಿಕಾರಿಯು ಅಂಥ ವ್ಯಕ್ತಿಯ ಗುರುತು ಅಂಥ ನಮೂದು ಸಂಬಂಧಪಡುವ ಮತದಾರನೊಂದಿಗೆ ಹೋಲುತ್ತದೆಂದು ಅವನಿಗೆ ಮನದಟ್ಟಾದರೆ ಮತದಾರರ ಪಟ್ಟಿಯಲ್ಲಿನ ನಮೂದಿನಲ್ಲಿರುವ ಕೇವಲ ಲಿಪಿಕ ಅಥವಾ ಬೆರಳಚ್ಚಿನ ಅಥವಾ ಮುದ್ರಣ ದೋಷಗಳನ್ನು ಕಡೆಗಣಿಸತಕ್ಕದ್ದು.

## 19 – ಮತದಾರರಿಗೆ ಮತಪತ್ರಗಳನ್ನು ಕೊಡುವುದು

[ನಿಯಮ 14(ಕ್ಯೂ)]

1. ಮತದಾರನಿಗೆ ಅದನ್ನು ಕೊಡುವುದಕ್ಕೆ ಮುಂಚೆ ಪ್ರತಿಯೊಂದು ಮತಪತ್ರ ಮತ್ತು ಅದಕ್ಕೆ ಲಗತ್ತಾದ ಪಕ್ಕಪ್ರತಿಗೆ (Counter foil) ಹಿಂಭಾಗದಲ್ಲಿ ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ವಿಭಿನ್ನತಾ ಗುರುತುಗಳನ್ನು ಮುದ್ರೆ ಹಾಕತಕ್ಕದ್ದು ಮತ್ತು ಪ್ರತಿಯೊಂದು ಮತಪತ್ರಕ್ಕೆ ಅದನ್ನು ಕೊಡುವುದಕ್ಕೆ ಮುಂಚೆ ಅದರ ಹಿಂಭಾಗದಲ್ಲಿ ಪ್ರಿಸೈಡಿಂಗ್ ಅಧಿಕಾರಿಯು ಪೂರ್ಣ ರುಜು ಮಾಡತಕ್ಕದ್ದು.

2. ಮತದಾರನಿಗೆ ಮತಪತ್ರವನ್ನು ಕೊಡುವ ಕಾಲದಲ್ಲಿ, ಪೋಲಿಂಗ್ ಅಧಿಕಾರಿಯು:

a. ಮತದಾರರ ಪಟ್ಟಿಯಲ್ಲಿ ನಮೂದಿಸಿರುವಂತೆ ಮತದಾರನ ಸಂಖ್ಯೆಯನ್ನು ಅದರ ಪಕ್ಕಪ್ರತಿಯ ಮೇಲೆ ದಾಖಲು ಮಾಡತಕ್ಕದ್ದು ಮತ್ತು ಮತದಾರನ ರುಜು ಅಥವಾ ಹೆಬ್ಬೆಟ್ಟಿನ ಗುರುತನ್ನು ಪಡೆಯತಕ್ಕದ್ದು.

b. ಆ ಮತದಾರನಿಗೆ ಕೊಟ್ಟ ಮತಪತ್ರದ ಕ್ರಮ ಸಂಖ್ಯೆಯನ್ನು ಅದರಲ್ಲಿ ದಾಖಲು ಮಾಡದೆ, ಅವನಿಗೆ ಮತಪತ್ರವನ್ನು ಕೊಡಲಾಗಿದೆಯೆಂಬುದನ್ನು ತೋರಿಸಲು ಮತದಾರರ ಪಟ್ಟಿಯಲ್ಲಿ ಆ ಮತದಾರನ ಹೆಸರಿಗೆ ಗುರುತು ಮಾಡತಕ್ಕದ್ದು.

ಪರಂತು, ಮತದಾರನಿಗೆ ಅವನು ಪಕ್ಕಪ್ರತಿಯ ಮೇಲೆ ತನ್ನ ರುಜು ಮಾಡಿದ ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕಿದ ಹೊರತು ಮತಪತ್ರವನ್ನು ಕೊಡತಕ್ಕದ್ದಲ್ಲ.

ಮತ್ತು ಪರಂತು, ಮತದಾನವನ್ನು ಮುಕ್ತಾಯಗೊಳಿಸಲು ನಿಗದಿಗೊಳಿಸಿದ ವೇಳೆಗೆ ಮುಂಚೆ ಗುರುತಿನ ಚೀಟಿಗಳನ್ನು ಹಾಜರುಪಡಿಸಿ ಚೀಟಿ ಪಡೆದಿರುವ ಮತ್ತು ಮತದಾನ ಕೇಂದ್ರದಲ್ಲಿ ಹಾಜರಿರುವ ಎಲ್ಲಾ ಮತದಾರರಿಗೆ ಮತಪತ್ರವನ್ನು ನೀಡತಕ್ಕದ್ದು ಮತ್ತು ಮತ ನೀಡಲು ಅನುಮತಿಸತಕ್ಕದ್ದು.

## 20 – ಮತದಾನ ಕೇಂದ್ರದೊಳಗೆ ಮತದಾನದ ಮತ್ತು ಮತದಾನ ಪ್ರಕ್ರಿಯೆಯ ರಹಸ್ಯವನ್ನು ಕಾಪಾಡುವುದು

**[ನಿಯಮ 14(ಆರ್)]**

ಮತಪತ್ರವನ್ನು ಕೊಡಲಾದ ಪ್ರತಿಯೊಬ್ಬ ಮತದಾರನು ಮತದಾನ ಕೇಂದ್ರದೊಳಗೆ ಮತದಾನ ಮಾಡುವಾಗ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಆ ಉದ್ದೇಶಕ್ಕಾಗಿ ಸಹಕಾರ ಚುನಾವಣಾ ಆಯೋಗವು ವಿಧಿಸಿದ ಮತದಾನದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

## 21 – ದೃಷ್ಟಿಹೀನ ಮತ್ತು ಅಶಕ್ತ ಮತದಾರರ ಮತಗಳನ್ನು ದಾಖಲು ಮಾಡುವುದು

**[ನಿಯಮ 14(ಎಸ್)]**

1. ಕುರುಡುತನ ಅಥವಾ ಇತರ ದೈಹಿಕ ಅಶಕ್ತತೆಯಿಂದಾಗಿ ಮತದಾರನು ಮತಪತ್ರದ ಮೇಲಿನ ಚಿಹ್ನೆಗಳನ್ನು ಗುರುತಿಸಲು ಅಥವಾ ಸಹಾಯವಿಲ್ಲದೆ ಅದರ ಮೇಲೆ ಗುರುತು ಮಾಡಲು ಅಸಮರ್ಥನೆಂದು ಪ್ರಿಸೈಡಿಂಗ್ ಅಧಿಕಾರಿಗೆ ಮನದಟ್ಟಾದರೆ, ಪ್ರಿಸೈಡಿಂಗ್ ಅಧಿಕಾರಿಯು ಅವನ ಪರವಾಗಿ ಮತ್ತು ಅವನ ಇಚ್ಛೆಗನುಸಾರವಾಗಿ ಮತಪತ್ರದ ಮೇಲೆ ಮತವನ್ನು ದಾಖಲು ಮಾಡುವುದಕ್ಕಾಗಿ ಮತ್ತು ಅವಶ್ಯವಾದರೆ ಮತವನ್ನು ಮುಚ್ಚುವ ಹಾಗೆ ಮತಪತ್ರವನ್ನು ಮಡಿಸುವುದಕ್ಕಾಗಿ ಮತ್ತು ಅದನ್ನು ಮತಪೆಟ್ಟಿಗೆಯೊಳಗೆ ಹಾಕುವುದಕ್ಕಾಗಿ ಮತದಾನದ ವಿಭಾಗಕ್ಕೆ ಹದಿನೆಂಟು ವರ್ಷಗಳ ವಯಸ್ಸಿಗೆ ಕಡಿಮೆಯಿಲ್ಲದ ಒಬ್ಬ ಜೊತೆಗಾರನನ್ನು ಅವನೊಂದಿಗೆ ಕರೆದುಕೊಂಡು ಹೋಗಲು ಅನುಮತಿ ನೀಡತಕ್ಕದ್ದು.

   ಪರಂತು, ಯಾವನೇ ವ್ಯಕ್ತಿಗೆ ಅದೇ ದಿನದಂದು ಯಾವುದೇ ಮತದಾನ ಕೇಂದ್ರದಲ್ಲಿ ಒಬ್ಬ ಮತದಾರನಿಗಿಂತ ಹೆಚ್ಚಿನವರಿಗೆ ಜೊತೆಗಾರನಾಗಿ ಕಾರ್ಯನಿರ್ವಹಿಸಲು ಅನುಮತಿ ನೀಡತಕ್ಕದ್ದಲ್ಲ.

   ಮತ್ತು ಪರಂತು, ಈ ನಿಯಮದ ಮೇರೆಗೆ ಯಾವುದೇ ದಿನದಂದು ಮತದಾರನ ಜೊತೆಗಾರನಾಗಿ ಕಾರ್ಯನಿರ್ವಹಿಸಲು ಯಾವನೇ ವ್ಯಕ್ತಿಗೆ ಅನುಮತಿ ನೀಡುವುದಕ್ಕೆ ಮುಂಚೆ ಆ ವ್ಯಕ್ತಿಯನ್ನು ಮತದಾರನ ಪರವಾಗಿ ಅವನು ದಾಖಲು ಮಾಡಿದ ಮತವನ್ನು ರಹಸ್ಯವಾಗಿ ಇಡುತ್ತೇನೆಂದು ಮತ್ತು ಆ ದಿನ ಯಾವುದೇ

ಮತದಾನ ಕೇಂದ್ರದಲ್ಲಿ ಯಾವನೇ ಇತರ ಮತದಾರನ ಜೊತೆಗಾರನಾಗಿ ಈಗಾಗಲೇ ಅವನು ಕಾರ್ಯನಿರ್ವಹಿಸಿಲ್ಲ ಎಂದು ಘೋಷಿಸಲು ಅಗತ್ಯಪಡಿಸತಕ್ಕದ್ದು.

2. ಪ್ರಿಸೈಡಿಂಗ್ ಅಧಿಕಾರಿಯು ಈ ಕೆಳಗಿನಂತೆ ದಾಖಲೆಯಿಡತಕ್ಕದ್ದು:–

**ಅನಕ್ಷರಸ್ಥ, ದೃಷ್ಟಿಹೀನ ಮತ್ತು ಅಶಕ್ತ ಮತದಾರರ ಪಟ್ಟಿ**

| ಮತದಾರನ ಕ್ರಮ ಸಂಖ್ಯೆ | ಮತದಾರನ ಪೂರ್ಣ ಹೆಸರು | ಜೊತೆಗಾರನ ಪೂರ್ಣ ಹೆಸರು | ಜೊತೆಗಾರನ ವಿಳಾಸ | ಜೊತೆಗಾರನ ಸಹಿ |
|---|---|---|---|---|
| | | | | |
| | | | | |
| | | | | |

........................ ಸಹಕಾರ ಸಂಘದ ನಿರ್ದೇಶಕರ/ಚುನಾವಣೆ

ಪ್ರಿಸೈಡಿಂಗ್ ಅಧಿಕಾರಿಯ ಸಹಿ

## 22 – ಮತದಾನದ ಮುಕ್ತಾಯ

**[ನಿಯಮ 14(ಟಿ)]**

ಮತದಾನವು ಮುಕ್ತಾಯವಾದ ನಂತರ,

i. ಪ್ರಿಸೈಂಡಿಗ್ ಅಧಿಕಾರಿಯು ಆ ಬಗ್ಗೆ ನಿಗದಿಪಡಿಸಿದ ವೇಳೆಗೆ ಮತದಾನವನ್ನು ಮುಕ್ತಾಯಗೊಳಿಸತಕ್ಕದ್ದು ಮತ್ತು ಆ ತರುವಾಯ ಯಾವುದೇ ಸದಸ್ಯನನ್ನು ಮತದಾನದ ಕೇಂದ್ರದೊಳಗೆ ಬಿಡತಕ್ಕದಲ್ಲ.

ಪರಂತು, ಮತದಾನ ಕೆಂದ್ರವನ್ನು ಮುಚ್ಚುವುದಕ್ಕೆ ಮುಂಚೆ ಅಲ್ಲಿ ಹಾಜರಿರುವ ಎಲ್ಲಾ ಸದಸ್ಯರಿಗೆ ಅವರ ಮತಗಳನ್ನು ಚಲಾಯಿಸಲು ಅವಕಾಶ ಕೊಡತಕ್ಕದ್ದು.

ii. ಯಾರೇ ಸದಸ್ಯನು ಮತದಾನ ಕೇಂದ್ರವನ್ನು ಮುಚ್ಚುವುದಕ್ಕೆ ಮುಂಚೆ ಅಲ್ಲಿ ಹಾಜರಿದ್ದನೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅದನ್ನು ಪ್ರಿಸೈಂಡಿಗ್ ಅಧಿಕಾರಿಯು ತೀರ್ಮಾನಿಸತಕ್ಕದ್ದು ಮತ್ತು ಅವನ ತೀರ್ಮಾನವು ಅಂತಿಮವಾಗಿರತಕ್ಕದ್ದು.

## 23 – ಮತದಾನದ ತರುವಾಯ ಮತಪೆಟ್ಟಿಗೆಗಳನ್ನು ಮೊಹರು ಮಾಡುವುದು

**[ನಿಯಮ 14(ಯು)]**

1. ಮತದಾನವು ಮುಕ್ತಾಯವಾದ ತರುವಾಯ ಸಾಧ್ಯವಾದಷ್ಟು ಬೇಗನೇ ಪ್ರಿಸೈಡಿಂಗ್ ಅಧಿಕಾರಿಯು ಮತಪೆಟ್ಟಿಗೆಯ ಸೀಳು ಜಾಗವನ್ನು ಮುಚ್ಚತಕ್ಕದ್ದು ಮತ್ತು ಸೀಳು ಜಾಗವನ್ನು ಮುಚ್ಚುವುದಕ್ಕಾಗಿ ಮೊಹರು ಮಾಡತಕ್ಕದ್ದು ಮತ್ತು ಆ ನಂತರ ಮತಪೆಟ್ಟಿಗೆಯನ್ನು ಮೊಹರು ಮಾಡತಕ್ಕದ್ದು ಮತ್ತು ಭದ್ರಪಡಿಸತಕ್ಕದ್ದು.
2. ಮೊದಲ ಮತಪೆಟ್ಟಿಗೆಯು ಭರ್ತಿಯಾದ ಕಾರಣದಿಂದ ಎರಡನೆಯ ಪೆಟ್ಟಿಗೆಯನ್ನು ಉಪಯೋಗಿಸುವುದು ಅವಶ್ಯವಾಗಿರುವಲ್ಲಿ, ಯಾವುದೇ ಇತರ ಮತಪೆಟ್ಟಿಗೆಯನ್ನು ಉಪಯೋಗಿಸುವುದಕ್ಕೆ ಮುಂಚೆ, ಮೊದಲನೆಯ ಪೆಟ್ಟಿಗೆಯನ್ನು ಮುಚ್ಚತಕ್ಕದ್ದು, ಮೊಹರು ಮಾಡತಕ್ಕದ್ದು ಮತ್ತು ಭದ್ರಪಡಿಸತಕ್ಕದ್ದು.

## 24 – ಮತಪತ್ರಗಳ ಲೆಕ್ಕ

**[ನಿಯಮ 14(ವಿ)]**

ಪ್ರಿಸೈಡಿಂಗ್ ಅಧಿಕಾರಿಯು ಮತದಾನವು ಮುಕ್ತಾಯವಾದ ಮೇಲೆ ಮತಪತ್ರಗಳ ಲೆಕ್ಕವನ್ನು ಫಾರಂ XVIII ರಲ್ಲಿ ತಯಾರಿಸತಕ್ಕದ್ದು ಮತ್ತು ಅದನ್ನು ಪ್ರತ್ಯೇಕ ಲಕೋಟೆಯಲ್ಲಿ ಅದರ ಮೇಲೆ 'ಮತಪತ್ರಗಳ ಲೆಕ್ಕ' ಎಂಬ ಪದಗಳಿಂದ ಮೇಲ್ಬರಹ ಮಾಡತಕ್ಕದ್ದು.

## 25 – ಇತರೆ ಪ್ಯಾಕೆಟ್ಟುಗಳನ್ನು ಮೊಹರು ಮಾಡುವುದು

**[ನಿಯಮ 14(ಡಬ್ಲ್ಯೂ)]**

(1) ಆ ತರುವಾಯ ಪ್ರಿಸೈಡಿಂಗ್ ಅಧಿಕಾರಿಯು:–

(ಎ) ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿ;

(ಬಿ) ಉಪಯೋಗಿಸಿದ ಮತಪತ್ರಗಳ ಪಕ್ಕಪ್ರತಿಗಳು;

(ಸಿ) ಪ್ರಿಸೈಡಿಂಗ್ ಅಧಿಕಾರಿಯು ಪೂರ್ಣವಾಗಿ ರುಜು ಮಾಡಿದ ಆದರೆ ಮತದಾರರಿಗೆ ಕೊಡದಿರುವ/ ಮತಪತ್ರಗಳು;

(ಡಿ) ಮತದಾರರಿಗೆ ಕೊಡದಿರುವ ಯಾವುದೇ ಇತರ ಮತಪತ್ರಗಳು;

(ಇ) ಮತದಾನ ಪ್ರಕ್ರಿಯೆಯ ಉಲ್ಲಂಘನೆಗಾಗಿ ರದ್ದುಪಡಿಸಿದ ಮತಪತ್ರಗಳು;

(ಎಫ್) ಯಾವುದೇ ಇತರ ರದ್ದುಪಡಿಸಿದ ಮತಪತ್ರಗಳು; ಮತ್ತು

(ಜಿ) ಮೊಹರು ಮಾಡಿದ ಲಕೋಟೆಯಲ್ಲಿಡತಕ್ಕದ್ದೆಂದು ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಿದ ಯಾವುದೇ ಕಾಗದ ಪತ್ರಗಳು.–ಇವುಗಳನ್ನು ಪ್ರತ್ಯೇಕ ಪ್ಯಾಕೆಟ್ಟುಗಳನ್ನಾಗಿ ಮಾಡತಕ್ಕದ್ದು.

(1) ಅಂಥ ಪ್ರತಿಯೊಂದು ಪ್ಯಾಕೆಟ್ಟನ್ನು ಪ್ರಿಸೈಡಿಂಗ್ ಅಧಿಕಾರಿಯ ಮೊಹರಿನಿಂದ ಮತ್ತು ಅಥವಾ ಅವುಗಳ ಮೇಲೆ ತನ್ನ ಮೊಹರನ್ನು ಹಾಕಲು ಇಚ್ಛಿಸುವ ಮತದಾನ ಕೇಂದ್ರದಲ್ಲಿ ಹಾಜರಿರಬಹುದಾದ ಅಭ್ಯರ್ಥಿಯ ಅಥವಾ ಅವನ ಅಧಿಕೃತ ಏಜೆಂಟನ ಮೊಹರುಗಳಿಂದ ಮೊಹರು ಮಾಡತಕ್ಕದ್ದು.

## 26 – ಮತಗಳ ಎಣಿಕೆ

[ನಿಯಮ 14(ಎಕ್ಸ್)]

1. ಮತದಾನ ಮುಕ್ತಾಯವಾದ ತರುವಾಯ, ಪ್ರಿಸೈಡಿಂಗ್ ಅಧಿಕಾರಿಯು/ ಮೊಹರು ಮಾಡಿದ ಮತಪೆಟ್ಟಿಗೆಯನ್ನು ರಿಟರ್ನಿಂಗ್ ಅಧಿಕಾರಿಗೆ ಒಪ್ಪಿಸತಕ್ಕದ್ದು ಮತ್ತು ಸದರಿ ಅಧಿಕಾರಿಯು ತಕ್ಷಣ ಮತ ಎಣಿಕೆಗೆ ವ್ಯವಸ್ಥೆ ಮಾಡತಕ್ಕದ್ದು. ಮತ ಎಣಿಕೆಯನ್ನು ರಿಟರ್ನಿಂಗ್ ಅಧಿಕಾರಿಯು ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ಅಥವಾ ಅವರ ಮೇಲ್ವಿಚಾರಣೆಯಲ್ಲಿ ಮಾಡತಕ್ಕದ್ದು. ಪ್ರತಿಯೊಬ್ಬ ಅಭ್ಯರ್ಥಿಯು ಅಥವಾ ಆತನ ಅಧಿಕೃತ ಏಜೆಂಟನು ಮತ ಎಣಿಕೆಯ ವೇಳೆಯಲ್ಲಿ ಹಾಜರಿರುವ ಹಕ್ಕುಳ್ಳವನಾಗಿರತಕ್ಕದ್ದು. ಆದರೆ ಮತ ಎಣಿಕೆಯ ಸಮಯದಲ್ಲಿ ಯಾವುದೇ ಅಭ್ಯರ್ಥಿಯ ಅಥವಾ ಏಜೆಂಟನ ಗೈರುಹಾಜರಿಯು ಮತ ಎಣಿಕೆಯನ್ನಾಗಲೀ ಅಥವಾ ರಿಟರ್ನಿಂಗ್ ಅಧಿಕಾರಿಯಿಂದ ಚುನಾವಣಾ ಫಲಿತಾಂಶ ಪ್ರಕಟಿಸುವುದನ್ನಾಗಲೀ ಊರ್ಜಿತವಾಗದಂತೆ ಮಾಡತಕ್ಕದ್ದಲ್ಲ. ಈ ಬಗ್ಗೆ ಸಹಕಾರ ಚುನಾವಣಾ ಆಯೋಗವು ಸೂಕ್ತ ಮಾರ್ಗಸೂಚಿಗಳನ್ನು ನೀಡತಕ್ಕದ್ದು.
2. ಯಾವುದೇ ಪ್ರದೇಶ ಅಥವಾ ಮತಕ್ಷೇತ್ರದಲ್ಲಿ ಉಪಯೋಗಿಸಿದ ಎಲ್ಲಾ ಮತಪೆಟ್ಟಿಗೆಗಳಲ್ಲಿ ಇರುವ ಎಲ್ಲಾ ಮತಪತ್ರಗಳ ಎಣಿಕೆಯು ಮುಕ್ತಾಯವಾದ ತರುವಾಯ, ರಿಟರ್ನಿಂಗ್ ಅಧಿಕಾರಿಯು ನಮೂನೆ XXI ರಲ್ಲಿನ ಫಲಿತಾಂಶ ಹಾಳೆಯಲ್ಲಿ ನಮೂದುಗಳನ್ನು ಮಾಡತಕ್ಕದ್ದು ಮತ್ತು ವಿವರಗಳನ್ನು ಪ್ರಕಟಿಸತಕ್ಕದ್ದು.

## 27 – ಚುನಾವಣಾ ಫಲಿತಾಂಶದ ಘೋಷಣೆ ಮತ್ತು ಸಹಕಾರ ಚುನಾವಣಾ ಆಯೋಗಕ್ಕೆ ರಿಟರ್ನುಗಳನ್ನು ಸಲ್ಲಿಸುವುದು

[ನಿಯಮ 14(ವೈ)]

(1) ಮತಗಳ ಎಣಿಕೆಯು ಮುಕ್ತಾಯವಾದ ನಂತರ:

i. ಅತ್ಯಂತ ಹೆಚ್ಚಿನ ಕ್ರಮಬದ್ಧ ಮತಗಳನ್ನು ಪಡೆದಿರುವ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು/ ಘೋಷಿಸತಕ್ಕದ್ದು.

ii. ಚುನಾಯಿತರಾಗಿದ್ದಾರೆಂದು ಘೋಷಿಸಬೇಕಾದ ಯಾರೇ ಅಭ್ಯರ್ಥಿಗಳ ನಡುವೆ ಸಮಾನ ಮತಗಳು ಇರುವುದು ಕಂಡು ಬಂದರೆ, ರಿಟರ್ನಿಂಗ್ ಅಧಿಕಾರಿಯು ಚೀಟಿ ಎತ್ತುವ ಮೂಲಕ ಕೂಡಲೇ ಅ ಅಭ್ಯರ್ಥಿಗಳ ನಡುವೆ ಆಯ್ಕೆಯನ್ನು ತೀರ್ಮಾನಿಸತಕ್ಕದ್ದು ಮತ್ತು ಯಾವ ಅಭ್ಯರ್ಥಿಯ ಹೆಸರಿನಲ್ಲಿ ಚೀಟಿ ಬರುವುದೋ ಅವನು ಒಂದು ಅಧಿಕ ಮತವನ್ನು ಪಡೆದಿದ್ದಾನೆಂದು ಪರಿಗಣಿಸತಕ್ಕದ್ದು.

(2) ಮತಗಳ ಎಣಿಕೆಯು ಮುಕ್ತಾಯವಾದ ತರುವಾಯ, ರಿಟರ್ನಿಂಗ್ ಅಧಿಕಾರಿಯು ಚುನಾವಣೆಯ ಫಲಿತಾಂಶಗಳನ್ನು ತಕ್ಷಣ ಘೋಷಿಸತಕ್ಕದ್ದು ಮತ್ತು ಚುನಾಯಿತ ಅಭ್ಯರ್ಥಿಗಳ ಪಟ್ಟಿಯನ್ನು ತನ್ನ ಕಚೇರಿಯ

ಸೂಚನಾ ಫಲಕದಲ್ಲಿ ಮತ್ತು ಸಹಕಾರ ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು ಹಾಗೂ ಅದರ ಒಂದು ಪ್ರತಿಯನ್ನು ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕನಿಗೆ ನಮೂನೆ XXII ರಲ್ಲಿ ಅದೇ ದಿನ ಕೊಡತಕ್ಕದ್ದು. ಜಿಲ್ಲಾ ಚುನಾವಣಾಧಿಕಾರಿಗೆ ಮತ್ತು ಸಹಕಾರ ಚುನಾವಣಾ ಆಯೋಗಕ್ಕೆ ಸಹಿ ಮಾಡಿದ ಪ್ರತಿಗಳನ್ನು ಅಂದೇ ಸಲ್ಲಿಸತಕ್ಕದ್ದು.

## 28 – ಚುನಾಯಿತ ಉಮೇದುವಾರರಿಗೆ ಚುನಾವಣೆ ಪ್ರಮಾಣ ಪತ್ರವನ್ನು ಕೊಡುವುದು

**[ನಿಯಮ 14(ಝಡ್)]**

ಯಾವುದೇ ಅಭ್ಯರ್ಥಿಯು ಚುನಾಯಿತನಾಗಿರುವುದಾಗಿ ಘೋಷಿಸಿದ ತರುವಾಯ ಆದಷ್ಟು ಬೇಗ ರಿಟರ್ನಿಂಗ್ ಅಧಿಕಾರಿಯು ನಮೂನೆ XXIII ರಲ್ಲಿ ಚುನಾವಣೆಯ ಪ್ರಮಾಣಪತ್ರವನ್ನು ಕೊಡತಕ್ಕದ್ದು ಮತ್ತು ಅದನ್ನು ಸ್ವೀಕರಿಸಿದ ಬಗ್ಗೆ ಅವನು ಕ್ರಮಬದ್ಧವಾಗಿ ರುಜು ಮಾಡಿದ ಸ್ವೀಕೃತಿಯನ್ನು ಆ ಅಭ್ಯರ್ಥಿಯಿಂದ ಪಡೆಯತಕ್ಕದ್ದು ಮತ್ತು ಅದನ್ನು ಜಿಲ್ಲಾ ಚುನಾವಣಾಧಿಕಾರಿಗೆ ಕಳುಹಿಸತಕ್ಕದ್ದು

## 29 – ಮತಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ಅಭಿರಕ್ಷೆ

**[ನಿಯಮ 14(ಎಬಿ)]**

1. ಚುನಾವಣೆಯಲ್ಲಿ ಉಪಯೋಗಿಸಿದ ಎಲ್ಲಾ ಮತಪೆಟ್ಟಿಗೆಗಳನ್ನು ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಅಭಿರಕ್ಷೆಯಲ್ಲಿ ಇಡತಕ್ಕದ್ದು.
2. ರಿಟರ್ನಿಂಗ್ ಅಧಿಕಾರಿಯು:–

   (ಎ) ಅವುಗಳೊಂದಿಗೆ ಲಗತ್ತಿಸಿದ ಪಕ್ಕಪ್ರತಿಗಳ ಸಹಿತ ಉಪಯೋಗಿಸಲಾಗದ ಮತಪತ್ರಗಳ ಪ್ಯಾಕೆಟ್ಟುಗಳನ್ನು;

   (ಬಿ) ಕ್ರಮಬದ್ಧವಾಗಿರುವ ಅಥವಾ ತಿರಸ್ಕರಿಸಿದ ಉಪಯೋಗಿಸಲಾದ ಮತಪತ್ರಗಳ ಪ್ಯಾಕೆಟ್ಟುಗಳನ್ನು;

   (ಸಿ) ಉಪಯೋಗಿಸಿದ ಮತಪತ್ರಗಳ ಪಕ್ಕಪ್ರತಿಗಳ ಪ್ಯಾಕೆಟ್ಟುಗಳನ್ನು;

   (ಡಿ) ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯ ಪ್ಯಾಕೆಟ್ಟುಗಳನ್ನು;

   (ಇ) ಮತದಾರರ ಘೋಷಣೆಗಳನ್ನು ಮತ್ತು ಅವರ ಅನುಪ್ರಮಾಣಿತ ರುಜುಗಳನ್ನು ಒಳಗೊಂಡ ಪ್ಯಾಕೆಟ್ಟುಗಳನ್ನು;

   (ಎಫ್) ಚುನಾವಣೆಗೆ ಸಂಬಂಧಪಟ್ಟ ಇತರ ಎಲ್ಲಾ ಕಾಗದ ಪತ್ರಗಳನ್ನು–ಸುರಕ್ಷಿತ ಅಭಿರಕ್ಷೆಯಲ್ಲಿಡತಕ್ಕದ್ದು.

## 30 – ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ

**[ನಿಯಮ 14(ಎಸಿ)]**

(1) ರಿಟರ್ನಿಂಗ್ ಅಧಿಕಾರಿಯ ಅಭಿರಕ್ಷೆಯಲ್ಲಿರುವಾಗ,–

(ಎ) ಅವುಗಳೊಂದಿಗೆ ಲಗತ್ತಿಸಿದ ಪಕ್ಕಪ್ರತಿಗಳ ಸಹಿತ ಉಪಯೋಗಿಸಲಾಗದ ಮತಪತ್ರಗಳ ಪ್ಯಾಕೆಟ್ಟುಗಳನ್ನು;

(ಬಿ) ಕ್ರಮಬದ್ಧವಾಗಿರುವ ಅಥವಾ ತಿರಸ್ಕರಿಸಿದ ಉಪಯೋಗಿಸಲಾದ ಮತಪತ್ರಗಳ ಪ್ಯಾಕೆಟ್ಟುಗಳನ್ನು;

(ಸಿ) ಉಪಯೋಗಿಸಿದ ಮತಪತ್ರಗಳ ಪಕ್ಕಪ್ರತಿಗಳ ಪ್ಯಾಕೆಟ್ಟುಗಳನ್ನು;

(ಡಿ) ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯ ಪ್ಯಾಕೆಟ್ಟುಗಳನ್ನು; ಮತ್ತು

(ಇ) ಮತದಾರರ ಘೋಷಣೆಗಳ ಮತ್ತು ಅವರ ಅನುಪ್ರಮಾಣಿತ ರುಜುಗಳನ್ನು ಒಳಗೊಂಡ ಪ್ಯಾಕೆಟ್ಟುಗಳನ್ನು– ಸಕ್ಷಮ ನ್ಯಾಯಾಲಯದ ಆದೇಶಗಳಿಲ್ಲದೆ ಯಾವನೇ ವ್ಯಕ್ತಿಯು ಅಥವಾ ಪ್ರಾಧಿಕಾರಿಯು ತೆರೆಯತಕ್ಕದ್ದಲ್ಲ ಮತ್ತು ಅವುಗಳ ಒಳಾಂಶಗಳನ್ನು ಪರಿಶೀಲಿಸತಕ್ಕದ್ದಲ್ಲ ಅಥವಾ ಯಾವನೇ ವ್ಯಕ್ತಿಯ ಅಥವಾ ಪ್ರಾಧಿಕಾರಿಯ ಮುಂದೆ ಅವುಗಳನ್ನು ಹಾಜರುಪಡಿಸತಕ್ಕದ್ದಲ್ಲ.

(2) ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಶುಲ್ಕದ ಸಂದಾಯಕ್ಕೆ ಒಳಪಟ್ಟು –

(ಎ) ಚುನಾವಣೆಗೆ ಸಂಬಂಧಪಟ್ಟ ಎಲ್ಲ ಇತರ ಕಾಗದ ಪತ್ರಗಳು ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು; ಮತ್ತು

(ಬಿ) ಲಿಖಿತ ಕೋರಿಕೆಯ ಮೇರೆಗೆ ಅವುಗಳ ಪ್ರತಿಗಳನ್ನು ಒದಗಿಸತಕ್ಕದ್ದು.

(3) ರಿಟರ್ನಿಂಗ್ ಅಧಿಕಾರಿಯು ಕಳುಹಿಸುವ ಅಧಿಕೃತ ವರದಿಗಳ ಪ್ರತಿಗಳನ್ನು ಅಂಥ ಪ್ರತಿ ಪ್ರತಿಗೆ ಎರಡು ರೂ.ಗಳ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ರಿಟರ್ನಿಂಗ್ ಅಧಿಕಾರಿಯು ಒದಗಿಸತಕ್ಕದ್ದು.

## 31 – ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ವಿಲೇವಾರಿ

**[ನಿಯಮ 14(ಎಡಿ)]**

(1) ಸಹಕಾರ ಚುನಾವಣಾ ಆಯೋಗವು ಅಥವಾ ಸಕ್ಷಮ ನ್ಯಾಯಾಲಯವು ತದ್ವಿರುದ್ಧವಾಗಿ ಕೊಟ್ಟ ಯಾವುದೇ ನಿರ್ದೇಶನಗಳಿಗೆ ಒಳಪಟ್ಟು–

a) ಉಪಯೋಗಿಸದ ಮತಪತ್ರಗಳ ಪ್ಯಾಕೆಟ್ಟುಗಳನ್ನು ಆರು ತಿಂಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಆ ತರುವಾಯ ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ವಿಧಾನದಿಂದ ನಾಶಪಡಿಸತಕ್ಕದ್ದು.

b) ಇತರೆ ಪ್ಯಾಕೆಟ್ಟುಗಳನ್ನು ಒಂದು ವರ್ಷದ ಅವಧಿಯವರೆಗೆ ವಶದಲ್ಲಿಟ್ಟುಕೊಳ್ಳತಕ್ಕದ್ದು ಮತ್ತು ಆ ತರುವಾಯ ಅವುಗಳನ್ನು ನಾಶಪಡಿಸತಕ್ಕದ್ದು.

ಪರಂತು, ಉಪಯೋಗಿಸಿದ ಮತಪತ್ರಗಳ ಪಕ್ಕಪ್ರತಿಗಳನ್ನು ಒಳಗೊಂಡ ಪ್ಯಾಕೆಟ್ಟುಗಳನ್ನು ಸಹಕಾರ ಚುನಾವಣಾ ಆಯೋಗದ ಪೂರ್ವಾನುಮೋದನೆ ಪಡೆಯದೆ ನಾಶಪಡಿಸತಕ್ಕದ್ದಲ್ಲ.

c. ಚುನಾವಣೆಗೆ ಸಂಬಂಧಪಟ್ಟ ಇತರ ಎಲ್ಲ ಕಾಗದ ಪತ್ರಗಳನ್ನು ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಅವಧಿಯವರೆಗೆ ವಶದಲ್ಲಿಟ್ಟುಕೊಳ್ಳತಕ್ಕದ್ದು.

## 32 – ಉಮೇದುವಾರರ ಠೇವಣಿಯನ್ನು ಹಿಂತಿರುಗಿಸುವುದು ಅಥವಾ ಮುಟ್ಟುಗೋಲು ಹಾಕಿಕೊಳ್ಳುವುದು.

[ನಿಯಮ 14(ಎಇ)]

1. 14ಎ ನಿಯಮದ ಮೇರೆಗೆ ಮಾಡಿದ ಠೇವಣಿಯನ್ನು ಅದನ್ನು ಇಟ್ಟ ವ್ಯಕ್ತಿ ಅಥವಾ ಅವನ ವಿಧಿಬದ್ಧ ಪ್ರತಿನಿಧಿಗೆ ಹಿಂದಿರುಗಿಸತಕ್ಕದ್ದು ಅಥವಾ ಸಹಕಾರ ಸಂಘಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.
2. ಈ ನಿಯಮದಲ್ಲಿ ನಮೂದಿಸಿದ ಪ್ರಕರಣದಲ್ಲಿರುವುದನ್ನು ಹೊರತುಪಡಿಸಿ ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ತರುವಾಯ ಸಾಧ್ಯವಾದಷ್ಟು ಬೇಗ ಠೇವಣಿಯನ್ನು ಹಿಂತಿರುಗಿಸತಕ್ಕದ್ದು.
3. ಸ್ಪರ್ಧಿಸುವ ಅಭ್ಯರ್ಥಿಯು ಮತದಾನವು ಪ್ರಾರಂಭವಾಗುವುದಕ್ಕೆ ಮುಂಚೆ ಮೃತನಾದರೆ, ಸಂದರ್ಭಾನುಸಾರ ಆ ಪಟ್ಟಿಯನ್ನು ಪ್ರಕಟಿಸಿದ ಅಥವಾ ಅವನ ಮರಣದ ತರುವಾಯ ಠೇವಣಿಯನ್ನು ಸಾಧ್ಯವಾದಷ್ಟು ಬೇಗನೆ ಹಿಂತಿರುಗಿಸತಕ್ಕದ್ದು.
4. (3)ನೇ ಉಪನಿಯಮದ ಉಪಬಂಧಗಳಿಗೆ ಒಳಪಟ್ಟು, ಯಾವುದೇ ಸ್ಪರ್ಧಿಸಿದ ಅಭ್ಯರ್ಥಿಯು ಚುನಾಯಿತನಾಗದಿದ್ದರೆ, ಚುನಾವಣೆಯಲ್ಲಿ ಎಲ್ಲ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿತವಾಗಬೇಕಾದ ಸದಸ್ಯರ ಸಂಖ್ಯೆಯಿಂದ ಭಾಗಿಸಿದಾಗ ಬರುವಷ್ಟರ ಸಂಖ್ಯೆಯ ಆರನೇ ಒಂದರಷ್ಟು ಕ್ರಮಬದ್ಧ ಮತಗಳನ್ನು ಅವನು ಪಡೆಯದಿದ್ದಲ್ಲಿ, ಆತನ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

   ಪರಂತು, ಪರಿಶಿಷ್ಟ ಜಾತಿಗಳಿಗೆ ಅಥವಾ ಪರಿಶಿಷ್ಟ ಪಂಗಡದವರಿಗೆ ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದ ಅಭ್ಯರ್ಥಿಯ ಅಥವಾ ಮಹಿಳಾ ಅಭ್ಯರ್ಥಿಯ ಸಂಬಂಧದಲ್ಲಿ, ಆತನು/ಅವಳು ಪಡೆದ ಕ್ರಮಬದ್ಧ ಮತಗಳ ಸಂಖ್ಯೆಯು ಚುನಾವಣೆಯಲ್ಲಿ ಮತದಾನವಾದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯ ಹತ್ತನೇ ಒಂದಕ್ಕಿಂತ ಕಡಿಮೆ ಇದ್ದಲ್ಲಿ, ಆತನ/ಅವಳ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

## 33 – ಚುನಾವಣಾ ವೆಚ್ಚಗಳು

[ನಿಯಮ 14(ಎಎ)]

ಯಾವುದೇ ಸಹಕಾರ ಸಂಘದ ಪ್ರತಿನಿಧಿಗಳ ಅಥವಾ ನಿರ್ದೇಶಕರ ಚುನಾವಣೆಗೆ ಸಂಬಂಧಪಟ್ಟಂತೆ ತಗಲುವ ಲೇಖನಸಾಮಗ್ರಿ, ಮುದ್ರಣ, ಅಂಚೆ, ಝೆರಾಕ್ಸ್, ಫ್ಯಾಕ್ಸ್, ಮತಪೆಟ್ಟಿಗೆಗಳ ಬಾಡಿಗೆ, ಅಳಿಸಲಾಗದ ಇಂಕು, ಪೊಲೀಸ್ ಭದ್ರತೆ ಮತ್ತು ಅಂಥ ಇತರ ಎಲ್ಲಾ ವೆಚ್ಚಗಳನ್ನು ಆ ಸಹಕಾರ ಸಂಘವು ಭರಿಸತಕ್ಕದ್ದು. ಸಹಕಾರ ಚುನಾವಣಾ ಆಯೋಗವು ಕಾಲಕಾಲಕ್ಕೆ ನಿಗದಿಪಡಿಸುವ ದರಗಳಲ್ಲಿ ಮತದಾರರ ಪಟ್ಟಿ ತಯಾರಿಕೆಗೆ, ರಿಟರ್ನಿಂಗ್ ಅಧಿಕಾರಿ, ಸಹಾಯಕ ರಿಟರ್ನಿಂಗ್ ಅಧಿಕಾರಿ, ಪ್ರಿಸೈಡಿಂಗ್ ಅಧಿಕಾರಿ ಮತ್ತು ಇತರ ಚುನಾವಣಾ ಸಿಬ್ಬಂದಿಗೆ ಕೊಡಬೇಕಾದ ಪ್ರಯಾಣ ಭತ್ಯೆ ಮತ್ತು ಇತರ ಭತ್ಯೆಗಳಿಗೆ ಮತ್ತು ಸಂಭಾವನೆಗೆ ಸಂಬಂಧಪಟ್ಟ ವೆಚ್ಚವನ್ನೂ ಸಹ ಸಹಕಾರ ಸಂಘವೇ ಭರಿಸತಕ್ಕದ್ದು.

# ಅಧ್ಯಾಯ – II

## ಚುನಾವಣೆಯ ರದ್ದುಪಡಿಸುವಿಕೆ ಅಥವಾ ಮತದಾನದ ಮುಂದೂಡುವಿಕೆ

### 1. ಮತದಾನಕ್ಕೆ ಮುಂಚೆ ಅಭ್ಯರ್ಥಿಯ ಮರಣ

[ನಿಯಮ 14(ಎಫ್)]

(1) ಯಾವುದೇ ಸ್ಥಾನ ಅಥವಾ ಮತಕ್ಷೇತ್ರದಿಂದ ಆಡಳಿತ ಮಂಡಲಿಯ ನಿರ್ದೇಶಕರ ಚುನಾವಣೆಯ ಯಾವುದೇ ಅಭ್ಯರ್ಥಿಯು;–

i. ನಾಮಪತ್ರ ಸಲ್ಲಿಸಲು ಗೊತ್ತುಪಡಿಸಿರುವ ಕೊನೆಯ ದಿನದಂದು ಪೂರ್ವಾಹ್ನ ಹನ್ನೊಂದು ಗಂಟೆಯ ತರುವಾಯ ಯಾವುದೇ ಸಮಯದಲ್ಲಿ ಮರಣ ಹೊಂದಿದ್ದು ಮತ್ತು ಆತನ ನಾಮಪತ್ರವು ಪರಿಶೀಲನೆಯ ನಂತರ ಸಕ್ರಮವಾಗಿದೆ ಎಂದು ಕಂಡುಬಂದಲ್ಲಿ; ಅಥವಾ

ii. ಪರಿಶೀಲನೆಯ ನಂತರ ಆತನ ನಾಮಪತ್ರವು ಕ್ರಮಬದ್ಧವಾಗಿ ಇರುವುದು ಕಂಡುಬಂದಿದ್ದು ಆತನು ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳದೇ ಮೃತನಾದಲ್ಲಿ; ಅಂಥ ಯಾವುದೇ ಸಂದರ್ಭದಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವುದಕ್ಕೆ ಮೊದಲು ಯಾವುದೇ ಕಾಲದಲ್ಲಿ ಆತನ ಮರಣದ ವರದಿಯು ಸ್ವೀಕೃತವಾಗಿದ್ದರೆ; ಅಥವಾ

iii. ಒಬ್ಬ ಸ್ಪರ್ಧಿಸುವ ಅಭ್ಯರ್ಥಿಯಾಗಿ ಮರಣ ಹೊಂದಿದ್ದು ಮತದಾನ ಪ್ರಾರಂಭವಾಗುವುದಕ್ಕೆ ಮೊದಲು ಆತನ ಮರಣದ ವರದಿಯು ಸ್ವೀಕೃತವಾಗಿದ್ದರೆ;

ರಿಟರ್ನಿಂಗ್ ಅಧಿಕಾರಿಯು ಅಭ್ಯರ್ಥಿಯ ಮರಣದ ಬಗ್ಗೆ ಮನದಟ್ಟಾದ ಮೇಲೆ ಆ ಮತದಾನವನ್ನು, ಸಹಕಾರ ಚುನಾವಣಾ ಆಯೋಗದ ಪೂರ್ವ ಅನುಮೋದನೆಯ ಮೇರೆಗೆ, ಮುಂದೆ ಪ್ರಕಟಿಸುವ ದಿನಾಂಕಕ್ಕೆ ಮತದಾನವನ್ನು ಮುಂದೂಡುವ ಆದೇಶವನ್ನು ಹೊರಡಿಸಿ ಮುಂದೂಡತಕ್ಕದ್ದು ಮತ್ತು ಸಹಕಾರ ಚುನಾವಣಾ ಆಯೋಗಕ್ಕೆ ವಾಸ್ತವಾಂಶಗಳ ಬಗ್ಗೆ ವಿವರವಾದ ವರದಿಯನ್ನು ಕಳಿಸತಕ್ಕದ್ದು.

ಪರಂತು, ಮರಣ ಹೊಂದಿದ ಅಭ್ಯರ್ಥಿಯ ನಾಮಪತ್ರವೂ ಸೇರಿದಂತೆ ಎಲ್ಲ ನಾಮಪತ್ರಗಳ ಪರಿಶೀಲನೆಯ ನಂತರದ ಹೊರತು, ಮತದಾನ ರದ್ದುಪಡಿಸಲು ಯಾವುದೇ ಆದೇಶ ಹೊರಡಿಸತಕ್ಕದ್ದಲ್ಲ.

(2) (1)ನೇ ಉಪನಿಯಮದಡಿ ರಿಟರ್ನಿಂಗ್ ಅಧಿಕಾರಿಯಿಂದ ವರದಿಯು ಸ್ವೀಕೃತವಾದ ನಂತರ, ಸಹಕಾರ ಚುನಾವಣಾ ಆಯೋಗವು ಅಂಥ ಆದೇಶ ಹೊರಡಿಸಿದ ಏಳು ದಿನಗಳೊಳಗೆ ಅಂಥ ಸ್ಥಾನ ಅಥವಾ ಮತಕ್ಷೇತ್ರದಿಂದ ಮತದಾನಕ್ಕಾಗಿ ಹೊಸ ನಾಮಪತ್ರವನ್ನು ಆಹ್ವಾನಿಸತಕ್ಕದ್ದು.

ಪರಂತು, ಮತದಾನ ಮುಂದೂಡುವುದಕ್ಕೆ ಮುಂಚೆ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಕೊಟ್ಟಿರುವ ಯಾವನೇ ವ್ಯಕ್ತಿಯು ಅಂಥ ಮುಂದೂಡಿಕೆಯ ತರುವಾಯ ಚುನಾವಣೆಗೆ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲು ಅನರ್ಹನಾಗಿರತಕ್ಕದ್ದಲ್ಲ.

(3) (1)ನೇ ಉಪನಿಯಮದಡಿ ಮತದಾನವನ್ನು ಮುಂದೂಡುವುದಕ್ಕೆ ಮುಂಚೆ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದ್ದ ಸಂದರ್ಭದಲ್ಲಿ, ರಿಟರ್ನಿಂಗ್ ಅಧಿಕಾರಿಯು ಆ ಮತಕ್ಷೇತ್ರದಿಂದ ಕ್ರಮಬದ್ಧವಾಗಿ ಸ್ಪರ್ಧಿಸುವ ಅಭ್ಯರ್ಥಿಯ ಹೆಸರನ್ನು ಸೇರಿಸಲು ಅನುವಾಗುವಂತೆ ಆ ಸ್ಥಾನ ಅಥವಾ ಮತಕ್ಷೇತ್ರದಿಂದ ಕ್ರಮಬದ್ಧವಾಗಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಹೊಸದಾಗಿ ತಯಾರಿಸಿ ಪ್ರಕಟಿಸತಕ್ಕದ್ದು.

## 2. ಮತಗಟ್ಟೆ ವಶಪಡಿಸುವ ಕಾರಣದ ಮೇಲೆ

**[ನಿಯಮ 14(ಜೆ)]**

**(1)** ಯಾವುದೇ ಚುನಾವಣೆಯಲ್ಲಿ:–

i. ಮತದಾನ ಕೇಂದ್ರದಲ್ಲಿ ಅಥವಾ ಮತದಾನಕ್ಕಾಗಿ ನಿಗದಿಪಡಿಸಿದ ಸ್ಥಳದಲ್ಲಿ ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲದೇ ಇರುವಂಥ ರೀತಿಯಲ್ಲಿ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡರೆ; ಅಥವಾ

ii. ಮತ ಎಣಿಕೆ ಮಾಡುವ ಯಾವುದೇ ಸ್ಥಳದಲ್ಲಿ ಮತ ಎಣಿಕೆ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲದೆ ಇರುವಂಥ ರೀತಿಯಲ್ಲಿ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡರೆ; ರಿಟರ್ನಿಂಗ್ ಅಧಿಕಾರಿಯು ಸಂಗತಿಯನ್ನು ಕೂಡಲೇ ಸಹಕಾರ ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು.

ಪರಂತು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಬಲವಂತವಾಗಿ ಮತಗಟ್ಟೆಯನ್ನು ವಶಪಡಿಸಿಕೊಂಡಿದ್ದರಿಂದ ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಬಗ್ಗೆ ತಹಶೀಲ್ದಾರನಿಂದ ಅಥವಾ ಪೊಲೀಸರಿಂದ ಒಂದು ವರದಿ ಅಥವಾ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

(2) ಸಹಕಾರ ಚುನಾವಣಾ ಆಯೋಗವು (1)ನೇ ಉಪನಿಯದಡಿಯಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ವರದಿಯನ್ನು ಸ್ವೀಕರಿಸಿದ ಮೇಲೆ ಮತ್ತು ಎಲ್ಲಾ ಮಹತ್ವದ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ:

i. ಆ ಮತದಾನ ಕೇಂದ್ರ ಆಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕದ್ದು. ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಹೊಸದಾಗಿ ಮತದಾನವನ್ನು ನಡೆಸಲು ದಿವಸವನ್ನು ಗೊತ್ತುಪಡಿಸತಕ್ಕದ್ದು ಮತ್ತು ವೇಳೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಹಾಗೆ ಗೊತ್ತು ಮಾಡಿದ ದಿನ ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ರಿಟರ್ನಿಂಗ್ ಅಧಿಕಾರಿಯ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ಸಹಕಾರ ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು; ಅಥವಾ

ii. ಹೆಚ್ಚಿನ ಸಂಖ್ಯೆಯ ಮತದಾನ ಕೇಂದ್ರಗಳಲ್ಲಿ ಅಥವಾ ಸ್ಥಳಗಳಲ್ಲಿ ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಂಡಿದ್ದು, ಅದು ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಬಹುದೆಂದು ಅಥವಾ ಮತಗಟ್ಟೆಯ ಸ್ವಾಧೀನತೆಯು ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರುವಂತಹ ರೀತಿಯಲ್ಲಿ ಮತಗಳ ಎಣಿಕೆಯನ್ನು ಬಾಧಿಸುವುದೆಂದು ಅಭಿಪ್ರಾಯಪಟ್ಟರೆ, ಆ ಚುನಾವಣೆಯನ್ನು ರದ್ದುಪಡಿಸತಕ್ಕದ್ದು.

**ವಿವರಣೆ:** ಈ ನಿಯಮದ ಉದ್ದೇಶಗಳಿಗಾಗಿ 'ಮತಗಟ್ಟೆಯನ್ನು ಬಲವಂತವಾಗಿ ವಶಪಡಿಸಿಕೊಳ್ಳುವುದು' ಎಂಬುದು ಇತರ ವಿಷಯಗಳೊಂದಿಗೆ ಈ ಮುಂದಿನ ಎಲ್ಲಾ ಅಥವಾ ಯಾವುದೇ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ, ಎಂದರೆ,

a) ಯಾವನೇ ವ್ಯಕ್ತಿಯು ಅಥವಾ ವ್ಯಕ್ತಿಗಳು ಮತದಾನ ಕೇಂದ್ರವನ್ನು ಆಥವಾ ಮತದಾನಕ್ಕಾಗಿ ಗೊತ್ತುಪಡಿಸಿರುವ ಸ್ಥಳವನ್ನು ಬಲಾತ್ಕಾರವಾಗಿ ಹಿಡಿದಿಟ್ಟುಕೊಳ್ಳುವುದು, ಮತದಾನ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತಪೆಟ್ಟಿಗೆಗಳನ್ನು ಬಲವಂತವಾಗಿ ವಶಕ್ಕೆ ಒಪ್ಪಿಸುವಂತೆ ಮಾಡುವುದು ಮತ್ತು ಚುನಾವಣೆಗಳು ಶಾಂತಿಯುತವಾಗಿ ನಡೆಯುವುದಕ್ಕೆ ಬಾಧಕವನ್ನು ಉಂಟುಮಾಡುವಂಥ ಇತರ ಯಾವುದೇ ಕೃತ್ಯಗಳನ್ನು ಮಾಡುವುದು;

b) ಯಾವನೇ ವ್ಯಕ್ತಿಯು ಅಥವಾ ವ್ಯಕ್ತಿಗಳು ಒಂದು ಮತದಾನ ಕೇಂದ್ರ ಅಥವಾ ಮತದಾನಕ್ಕೆ ಗೊತ್ತುಪಡಿಸಿರುವ ಸ್ಥಳವನ್ನು ಬಲವಂತವಾಗಿ ವಶಕ್ಕೆ ತೆಗೆದುಕೊಳ್ಳುವುದು ಮತ್ತು ಅವನ ಅಥವಾ ಅವರ ಬೆಂಬಲಿಗರು ಮಾತ್ರ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅವಕಾಶ ಮಾಡಿಕೊಟ್ಟು ಇತರರು ಮತ ಚಲಾಯಿಸದಂತೆ ತಡೆಯುವುದು;

c) ಯಾವನೇ ಮತದಾರನಿಗೆ ಬೆದರಿಕೆ ಹಾಕಿ ಅಥವಾ ಭಯಹುಟ್ಟಿಸಿ ಅಥವಾ ಬಲಾತ್ಕರಿಸಿ ಅವನು ತನ್ನ ಮತ ಚಲಾಯಿಸಲು ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕೆ ಗೊತ್ತುಪಡಿಸಿರುವ ಸ್ಥಳಕ್ಕೆ ಹೋಗದಂತೆ ತಡೆಯುವುದು;

d) ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆ ಮಾಡುವ ಸ್ಥಳವನ್ನು ಬಲಾತ್ಕಾರವಾಗಿ ಹಿಡಿದಿಟ್ಟುಕೊಳ್ಳುವುದು, ಎಣಿಕೆ ಮಾಡುವ ಪ್ರಾಧಿಕಾರಿಗಳು ಮತಪತ್ರಗಳನ್ನು ಅಥವಾ ಮತಪೆಟ್ಟಿಗೆಗಳನ್ನು ಬಲವಂತವಾಗಿ ಒಪ್ಪಿಸುವಂತೆ ಮಾಡುವುದು ಮತ್ತು ಮತಗಳನ್ನು ಶಾಂತಿಯುತವಾಗಿ ಎಣಿಸುವ ಕಾರ್ಯಕ್ಕೆ ಬಾಧಕವನ್ನು ಉಂಟುಮಾಡುವಂತೆ ಯಾವುದೇ ಕೃತ್ಯ ಮಾಡುವುದು;

## 3. ತುರ್ತುಸ್ಥಿತಿಯಲ್ಲಿ ಮತದಾನ ಮುಂದೂಡಿಕೆ:

**[ನಿಯಮ 14(ಹೆಚ್)]**

1. ಚುನಾವಣೆಯಲ್ಲಿ, ಯಾವುದೇ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ವ್ಯವಹರಣೆಗಳಿಗೆ ಯಾವುದೇ ದೊಂಬಿ ಅಥವಾ ಬಹಿರಂಗ ಹಿಂಸೆಯಿಂದಾಗಿ ತಡೆ ಅಥವಾ ಅಡ್ಡಿಯುಂಟಾದರೆ ಅಥವಾ ಚುನಾವಣೆಯಲ್ಲಿ ಯಾವುದೇ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಯಾವುದೇ ನೈಸರ್ಗಿಕ ವಿಪತ್ತಿನಿಂದಾಗಿ ಅಥವಾ ಇತರೆ ಯಾವುದೇ ಸಾಕಷ್ಟು ಕಾರಣದಿಂದಾಗಿ ಮತದಾನವನ್ನು ನಡೆಸುವುದು ಸಾಧ್ಯವಾಗದಿದ್ದರೆ, ಅಂಥ ಮತದಾನ ಕೇಂದ್ರ ಅಥವಾ ಸ್ಥಳದ ಕಾರ್ಯವ್ಯಾಪ್ತಿಯನ್ನು ಹೊಂದಿರುವ ರಿಟರ್ನಿಂಗ್ ಅಧಿಕಾರಿಯು, ಸಹಕಾರ ಚುನಾವಣಾ ಆಯೋಗದ ಪೂರ್ವಾನುಮೋದನೆಯೊಂದಿಗೆ, ಮುಂದೆ ಅಧಿಸೂಚಿಸತಕ್ಕಂಥ ದಿನಾಂಕದವರೆಗೆ ಅಂಥ ಮತದಾನ ಕೇಂದ್ರ ಅಥವಾ ಸ್ಥಳದ ಮತದಾನದ ಮುಂದೂಡುವಿಕೆಯನ್ನು ಪ್ರಕಟಿಸತಕ್ಕದ್ದು ಮತ್ತು ಮತದಾನವನ್ನು ಪ್ರಿಸೈಡಿಂಗ್ ಅಧಿಕಾರಿಯು ಮುಂದಕ್ಕೆ ಹಾಕಿದಲ್ಲಿ ಅವನು ರಿಟರ್ನಿಂಗ್ ಅಧಿಕಾರಿಗೆ ತಕ್ಷಣವೇ ತಿಳಿಸತಕ್ಕದ್ದು.

   ಪರಂತು, ಆ ಮತದಾನ ಕೇಂದ್ರ ಅಥವಾ ಸ್ಥಳದ ಮತದಾನಕ್ಕೆ ದೊಂಬಿ ಅಥವಾ ಬಹಿರಂಗ ಹಿಂಸೆಯಿಂದಾಗಿ ತಡೆ ಅಥವಾ ಅಡ್ಡಿ ಉಂಟಾಗಿದೆ ಎಂಬ ಬಗ್ಗೆ ತಹಶೀಲ್ದಾರನಿಂದ ಅಥವಾ ಪೋಲಿಸರಿಂದ ಒಂದು ವರದಿ ಅಥವಾ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

2. ಮತದಾನವನ್ನು (1)ನೇ ಉಪನಿಯಮದ ಮೇರೆಗೆ ಮುಂದೂಡಿದಾಗ, ರಿಟರ್ನಿಂಗ್ ಅಧಿಕಾರಿಯು ಕೂಡಲೇ ಜಿಲ್ಲಾ ಚುನಾವಣಾಧಿಕಾರಿಗೆ ಮತ್ತು ಸಹಕಾರ ಚುನಾವಣಾ ಆಯೋಗಕ್ಕೆ ಪರಿಸ್ಥಿತಿಗಳ ಬಗ್ಗೆ ವರದಿ ಮಾಡತಕ್ಕದ್ದು ಮತ್ತು ಸಹಕಾರ ಚುನಾವಣಾ ಆಯೋಗದ ಪೂರ್ವಾನುಮೋದನೆ ಪಡೆದು ಸಾಧ್ಯವಾದಷ್ಟು ಬೇಗ ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಮತದಾನವನ್ನು ಮುಂದೂಡುವುದಕ್ಕೆ ನಿಕಟಪೂರ್ವದಲ್ಲಿದ್ದಂಥ ಹಂತದಿಂದ ಮತದಾನವು ಪುನಃ ಪ್ರಾರಂಭವಾಗತಕ್ಕ ದಿನವನ್ನು ಮತ್ತು ಮತದಾನ ನಡೆಯುವ ಅವಧಿಯನ್ನು ಗೊತ್ತುಪಡಿಸಿ ನೋಟೀಸನ್ನು ಪ್ರಕಟಿಸತಕ್ಕದ್ದು. ರಿಟರ್ನಿಂಗ್ ಅಧಿಕಾರಿಯು ಮುಂದೆ ಹಾಕಿದ ಅಂಥ ಮತದಾನವನ್ನು ಪೂರ್ಣಗೊಳಿಸುವವರೆಗೆ ಆಡಳಿತ ಮಂಡಲಿಯ ಅಂಥ ಚುನಾವಣೆಯಲ್ಲಿ ಚಲಾಯಿಸಲಾದ ಮತಗಳ ಎಣಿಕೆಯನ್ನು ಮಾಡತಕ್ಕದ್ದಲ್ಲ.

3. ಹಿಂದೆ ಹೇಳಿದಂತೆ ಪ್ರತಿಯೊಂದು ಅಂಥ ಸಂದರ್ಭದಲ್ಲಿ, ರಿಟರ್ನಿಂಗ್ ಅಧಿಕಾರಿಯು (2)ನೇ ಉಪನಿಯಮದಡಿಯಲ್ಲಿ ನಿಗದಿಪಡಿಸಿದ ಮತದಾನದ ದಿನಾಂಕ, ಸ್ಥಳ ಮತ್ತು ವೇಳೆಯನ್ನು ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು.

4. ಯಾವುದೇ ಮತದಾನದ ಕೇಂದ್ರದಲ್ಲಿನ ಮತದಾನವನ್ನು (1)ನೇ ಉಪನಿಯಮದ ಮೇರೆಗೆ ಮುಂದೂಡಿದಾಗ, ರಿಟರ್ನಿಂಗ್ ಅಧಿಕಾರಿಯು ಅಂಥ ಮುಂದೂಡಿದ ಮತದಾನವು ನಡೆಯುವಂಥ ಮತದಾನ ಕೇಂದ್ರದ ಪ್ರಿಸೈಡಿಂಗ್

ಅಧಿಕಾರಿಗೆ ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯನ್ನು ಮೊಹರು ಮಾಡಿದ ಪ್ಯಾಕೆಟ್ಟಿನಲ್ಲಿ ಮತ್ತು ಒಂದು ಹೊಸ ಮತಪೆಟ್ಟಿಗೆಯನ್ನು ಒದಗಿಸತಕ್ಕದ್ದು.

5. 14ಎಲ್ ಯಿಂದ 14ಓ ಮತ್ತು 14ಕ್ಯೂ ಯಿಂದ 14ಎಕ್ಸ್ ವರೆಗಿನ ನಿಯಮಗಳ ಉಪಬಂಧಗಳು ಅಂಥ ಮುಂದೂಡಿದ ಮತದಾನ ನಡೆಸುವುದಕ್ಕೆ, ಅವು ಹಾಗೆ ಮುಂದೂಡುವ ಮುಂಚಿನ ಮತದಾನದ ಸಂಬಂಧದಲ್ಲಿ ಹೇಗೆ ಅನ್ವಯವಾಗುತ್ತವೋ ಹಾಗೆ ಅನ್ವಯವಾಗತಕ್ಕದ್ದು.

## 4. ಮತಪೆಟ್ಟಿಗೆಗಳ ನಾಶ ಇತ್ಯಾದಿ ಸಂದರ್ಭಗಳಲ್ಲಿ ಹೊಸ ಮತದಾನ

**[ನಿಯಮ 14(ಐ)]**

**(1)** ಯಾವುದೇ ಚುನಾವಣೆಯಲ್ಲಿ.

i. ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಉಪಯೋಗಿಸಿದ ಯಾವುದೇ ಮತಪೆಟ್ಟಿಗೆಯನ್ನು ಪ್ರಿಸೈಡಿಂಗ್ ಅಧಿಕಾರಿ ಅಥವಾ ರಿಟರ್ನಿಂಗ್ ಅಧಿಕಾರಿಯ ಅಭಿರಕ್ಷೆಯಿಂದ ಕಾನೂನು ಬಾಹಿರವಾಗಿ ತೆಗೆದುಕೊಂಡು ಹೋದರೆ ಅಥವಾ ಆಕಸ್ಮಿಕವಾಗಿ ಅಥವಾ ಉದ್ದೇಶಪೂರ್ವಕವಾಗಿ ನಾಶಪಡಿಸಿದರೆ ಅಥವಾ ಅದು ಕಳೆದುಹೋದರೆ ಅಥವಾ ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನದ ಫಲಿತಾಂಶವನ್ನು ಖಚಿತಪಡಿಸಿಕೊಳ್ಳಲು ಸಾಧ್ಯವಾಗದಷ್ಟು ಮಟ್ಟಿಗೆ ಅದನ್ನು ನಾಶಗೊಳಿಸಿದ್ದರೆ ಅಥವಾ ಕೆಡಿಸಿದ್ದರೆ; ಅಥವಾ

ii. ಮತದಾನ ಕೇಂದ್ರ ಅಥವಾ ಸ್ಥಳದಲ್ಲಿನ ಮತದಾನವನ್ನು ನಿರರ್ಥಕಗೊಳಿಸಲು ಸಂಭವವಿರುವ ಹಾಗೆ ಪ್ರಕ್ರಿಯೆಯಲ್ಲಿ ಯಾವುದೇ ತಪ್ಪು ಅಥವಾ ಅಕ್ರಮತೆಯನ್ನು ಮಾಡಿದ್ದರೆ, ರಿಟರ್ನಿಂಗ್ ಅಧಿಕಾರಿಯು ಆ ಸಂಗತಿಯನ್ನು ತಕ್ಷಣವೇ ಸಹಕಾರ ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು.

ಪರಂತು, ಆ ಮತದಾನ ಕೇಂದ್ರ ಅಥವಾ ಸ್ಥಳದಲ್ಲಿ ಮತದಾನವನ್ನು ಮುಂದುವರಿಸುವುದು ಸಾಧ್ಯವಿಲ್ಲ ಅಥವಾ ಮತ ಎಣಿಕೆಯು ಅಸಾಧ್ಯವಾಗಿ ಪರಿಣಮಿಸಿದೆ ಎಂಬ ಬಗ್ಗೆ ತಹಶೀಲ್ದಾರನಿಂದ ಅಥವಾ ಪೊಲೀಸರಿಂದ ಒಂದು ವರದಿ ಅಥವಾ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

**(2)** ಸಹಕಾರ ಚುನಾವಣಾ ಆಯೋಗವು ಎಲ್ಲಾ ಮಹತ್ವದ ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ–

i. ಆ ಮತದಾನ ಕೇಂದ್ರ ಆಥವಾ ಸ್ಥಳದಲ್ಲಿನ ಮತದಾನವನ್ನು ಶೂನ್ಯವೆಂದು ಘೋಷಿಸತಕ್ಕದ್ದು. ಆ ಮತದಾನ ಕೇಂದ್ರ ಆಥವಾ ಸ್ಥಳದಲ್ಲಿ ಹೊಸದಾಗಿ ಮತದಾನವನ್ನು ನಡೆಸಲು ದಿವಸವನ್ನು ಗೊತ್ತುಪಡಿಸತಕ್ಕದ್ದು ಮತ್ತು ವೇಳೆಯನ್ನು ನಿಗದಿಪಡಿಸತಕ್ಕದ್ದು ಮತ್ತು ಹಾಗೆ ಗೊತ್ತು ಮಾಡಿದ ದಿನ ಮತ್ತು ಹಾಗೆ ನಿಗದಿಪಡಿಸಿದ ವೇಳೆಯನ್ನು ರಿಟರ್ನಿಂಗ್ ಅಧಿಕಾರಿಯ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯ ಕಚೇರಿಯ ಸೂಚನಾ ಫಲಕದಲ್ಲಿ ಮತ್ತು ಸಹಕಾರ ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸತಕ್ಕದ್ದು; ಅಥವಾ

ii. ಆ ಮತದಾನ ಕೇಂದ್ರ ಆಥವಾ ಸ್ಥಳದಲ್ಲಿನ ಹೊಸ ಮತದಾನವು ಯಾವುದೇ ರೀತಿಯಲ್ಲಿ ಸಾಮಾನ್ಯ ಚುನಾವಣೆಯ ಫಲಿತಾಂಶದ ಮೇಲೆ ಯಾವುದೇ ಪರಿಣಾಮ ಉಂಟುಮಾಡುವುದಿಲ್ಲವೆಂದು ಅಥವಾ ಪ್ರಕ್ರಿಯೆಯಲ್ಲಿನ ತಪ್ಪು ಅಥವಾ ಅಕ್ರಮತೆಯು ಮಹತ್ವವಾದುದಲ್ಲವೆಂದು ಅಭಿಪ್ರಾಯಪಟ್ಟರೆ, ಚುನಾವಣೆ ನಡೆಸುವುದನ್ನು ಮುಂದುವರಿಸುವುದಕ್ಕಾಗಿ ಮತ್ತು ಪೂರ್ತಿಗೊಳಿಸುವುದಕ್ಕಾಗಿ ತಾನು ಉಚಿತವೆಂದು ಭಾವಿಸಬಹುದಾದಂಥ ನಿರ್ದೇಶನವನ್ನು ರಿಟರ್ನಿಂಗ್ ಅಧಿಕಾರಿಗೆ ನೀಡತಕ್ಕದ್ದು.

**(3)** ಕಾಯ್ದೆಯ ಮತ್ತು ನಿಯಮಗಳ ಉಪಬಂಧಗಳು ಮೂಲ ಮತದಾನಕ್ಕೆ ಅನ್ವಯವಾಗುವಂತೆಯೇ, ಅಂಥ ಪ್ರತಿಯೊಂದು ಹೊಸ ಮತದಾನಕ್ಕೂ ಅನ್ವಯವಾಗತಕ್ಕದ್ದು.

# ಅಧ್ಯಾಯ – III

## ಪದಾಧಿಕಾರಿಗಳ ಚುನಾವಣೆ

[ನಿಯಮ 14(ಎಜಿ)]

1. ಆಡಳಿತ ಮಂಡಲಿಯ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ನಡೆಸಲು ನೇಮಕವಾದ ರಿಟರ್ನಿಂಗ್ ಅಧಿಕಾರಿಯು ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲು ರಿಟರ್ನಿಂಗ್ ಅಧಿಕಾರಿಯಾಗಿರತಕ್ಕದ್ದು.

2. ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇತರ ಯಾವುದೇ ಪದಾಧಿಕಾರಿಯ ಪದದಲ್ಲಿ ಆಕಸ್ಮಿಕ ರಿಕ್ತತೆಯು ಉಂಟಾದಲ್ಲಿ, ಮುಖ್ಯಕಾರ್ಯನಿರ್ವಾಹಕನು ಅಂಥ ರಿಕ್ತತೆಯು ಉಂಟಾದ ಏಳು ದಿನಗಳೊಳಗೆ ಆಕಸ್ಮಿಕ ರಿಕ್ತತೆಯು ಉಂಟಾಗಿರುವ ಬಗ್ಗೆ ಸಹಕಾರ ಚುನಾವಣಾ ಆಯೋಗಕ್ಕೆ ವರದಿ ಕಳುಹಿಸತಕ್ಕದ್ದು. ಸಹಕಾರ ಚುನಾವಣಾ ಆಯೋಗವು ಪ್ರಸಂಗಾನುಸಾರ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇತರ ಯಾವುದೇ ಪದಾಧಿಕಾರಿಯ ಪದದಲ್ಲಿ ಉಂಟಾಗಿರುವ ಆಕಸ್ಮಿಕ ರಿಕ್ತತೆಯನ್ನು ಭರ್ತಿ ಮಾಡಲು ಚುನಾವಣೆಯನ್ನು ನಡೆಸಲು ಕ್ರಮ ಕೈಗೊಳ್ಳತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಒಬ್ಬ ರಿಟರ್ನಿಂಗ್ ಅಧಿಕಾರಿಯನ್ನು ನೇಮಿಸತಕ್ಕದ್ದು.

3. (1)ನೇ ಅಥವಾ (2)ನೇ ಉಪನಿಯಮದಡಿ ನೇಮಕವಾದ ರಿಟರ್ನಿಂಗ್ ಅಧಿಕಾರಿಯು ಸಾಮಾನ್ಯ ಚುನಾವಣೆಯ ನಂತರ ಆಡಳಿತ ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ಅಥವಾ (2)ನೇ ಉಪನಿಯಮದಡಿ ನೇಮಕವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಅಧ್ಯಕ್ಷ ಅಥವಾ ಸಭಾಪತಿ, ಉಪಾಧ್ಯಕ್ಷ ಅಥವಾ ಉಪಸಭಾಪತಿ ಮತ್ತು ಸಹಕಾರ ಸಂಘದ ಉಪವಿಧಿಗಳ ಮೇರೆಗೆ ಚುನಾಯಿಸಬೇಕಾದ ಇತರ ಯಾವುದೇ ಪದಾಧಿಕಾರಿಗಳನ್ನು ಚುನಾಯಿಸಲು ಆಡಳಿತ ಮಂಡಲಿಯ ಎಲ್ಲಾ ಮತದಾನದ ಹಕ್ಕುಳ್ಳ ನಿರ್ದೇಶಕರುಗಳ ಸಭೆಯನ್ನು ಕರೆಯತಕ್ಕದ್ದು. ಅಂಥ ಸಭೆಯನ್ನು ಸಭೆಯ ಸ್ಥಳ, ದಿನಾಂಕ ಮತ್ತು ವೇಳೆಯನ್ನುಳ್ಳ ಏಳು ಸ್ಪಷ್ಟ ದಿನಗಳ ನೋಟೀಸನ್ನು ರಿಜಿಸ್ಟರ್ಡ್ ಅಂಚೆಯ ಮೂಲಕ ನೀಡಿ ಕರೆಯತಕ್ಕದ್ದು.

4. ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇನ್ನಿತರ ಪದಾಧಿಕಾರಿಗಳ ಚುನಾವಣೆಗೆ ನಿಗದಿಪಡಿಸಿದ ಸಮಯದ ಎರಡು ಗಂಟೆಗೆ ಕಡಿಮೆಯಾಗದಂತೆ ಮೊದಲು, ಪ್ರಸಂಗಾನುಸಾರ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇನ್ನಿತರ ಯಾವುದೇ ಪದಾಧಿಕಾರಿಯಾಗಿ ಚುನಾಯಿತನಾಗಲು ಇಚ್ಛಿಸುವ ಆಡಳಿತ ಮಂಡಲಿಯ ಯಾವುದೇ ಅರ್ಹ ಸದಸ್ಯನು ತನ್ನ ನಾಮಪತ್ರವನ್ನು ನಮೂನೆ XXIV ರಲ್ಲಿ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸಬಹುದು. ಅಂಥ ನಾಮಪತ್ರವು ಆಡಳಿತ ಮಂಡಲಿಯ ಒಬ್ಬ ಸದಸ್ಯನಿಂದ ಸೂಚಿತವಾಗಿ ಮತ್ತು ಇನ್ನೊಬ್ಬ ಆಡಳಿತ ಮಂಡಲಿಯ ಸದಸ್ಯನಿಂದ ಅನುಮೋದಿತವಾಗಿರತಕ್ಕದ್ದು.

5. ಉಪನಿಯಮ (4)ರ ಮೇರೆಗೆ ಯಾವುದೇ ನಿರ್ದೇಶಕನು, ಸಹಕಾರ ಸಂಘದ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇನ್ನಿತರ ಯಾವುದೇ ಪದಾಧಿಕಾರಿಯ ಪದಕ್ಕೆ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ ಅಥವಾ ಅನುಮೋದಿಸತಕ್ಕದ್ದಲ್ಲ.

   ಪರಂತು, ಯಾವನೇ ನಿರ್ದೇಶಕನು ಸಹಕಾರ ಸಂಘದ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇನ್ನಿತರ ಯಾವುದೇ ಪದಾಧಿಕಾರಿಯ ಪದಕ್ಕೆ ಒಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳನ್ನು ಸೂಚಿಸಿದ್ದಲ್ಲಿ ಅಥವಾ ಅನುಮೋದಿಸಿದ್ದಲ್ಲಿ, ಮೊದಲು ಸ್ವೀಕೃತವಾದ ನಾಮಪತ್ರವನ್ನು ಪರಿಶೀಲನೆಗೆ ಪರಿಗಣಿಸತಕ್ಕದ್ದು.

6. (1)ನೇ ಉಪನಿಯಮದಡಿ ನೇಮಕವಾದ ರಿಟರ್ನಿಂಗ್ ಅಧಿಕಾರಿಯು, ಪದಾಧಿಕಾರಿಗಳನ್ನು ಚುನಾಯಿಸುವ ಅಥವಾ ಪ್ರಸಂಗಾನುಸಾರ ಸಹಕಾರ ಸಂಘದ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇನ್ನಿತರ ಯಾವುದೇ

ಪದಾಧಿಕಾರಿಯ ಪದದಲ್ಲಿ ಉಂಟಾಗಿರುವ ಆಕಸ್ಮಿಕ ರಿಕ್ತತೆಯನ್ನು ಭರ್ತಿ ಮಾಡುವ ಉದ್ದೇಶಕ್ಕಾಗಿ, ಕರೆದ ಆಡಳಿತ ಮಂಡಲಿಯ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

7. ಸಭೆಯು ಪ್ರಾರಂಭವಾದ ತರುವಾಯ, ರಿಟರ್ನಿಂಗ್ ಅಧಿಕಾರಿಯು ಅಂಥಹ ಎಲ್ಲಾ ನಾಮಪತ್ರಗಳನ್ನು ಪರಿಶೋಧಿಸತಕ್ಕದ್ದು ಮತ್ತು ಅಂಥ ಸಭೆಯಲ್ಲಿ ಹಾಜರಿದ್ದ ನಿರ್ದೇಶಕರುಗಳಿಗೆ ತನ್ನ ಅಭಿಪ್ರಾಯದಲ್ಲಿ ಸೂಕ್ತವಾಗಿ ನಾಮನಿರ್ದೇಶನ ಮಾಡಲ್ಪಟ್ಟ ನಿರ್ದೇಶಕರ ಮತ್ತು ಅವರ ಸೂಚಕರ ಮತ್ತು ಅನುಮೋದಕರ ಹೆಸರುಗಳನ್ನು ಓದಿ ತಿಳಿಸತಕ್ಕದ್ದು.

8. ನಾಮಪತ್ರಗಳ ಪರಿಶೋಧನೆಯು ಆದ ನಂತರ, ಯಾವುದೇ ಅಭ್ಯರ್ಥಿಯು ಲಿಖಿತ ನೋಟೀಸಿನಲ್ಲಿ ಸೂಕ್ತವಾಗಿ ಸಹಿ ಮಾಡಿ ರಿಟರ್ನಿಂಗ್ ಅಧಿಕಾರಿಗೆ ಮೂವತ್ತು ನಿಮಿಷಗಳೊಳಗೆ ಕೊಟ್ಟು ತನ್ನ ಉಮೇದುವಾರಿಕೆಯನ್ನು ವಾಪಸ್ಸು ತೆಗೆದುಕೊಳ್ಳಬಹುದು.

9. ಹಿಂದಕ್ಕೆ ಪಡೆಯುವ ನೋಟೀಸನ್ನು ಅಭ್ಯರ್ಥಿಯು ತನ್ನ ಲಿಖಿತದಲ್ಲಿ ಸ್ವತಃ ಕೊಡತಕದ್ದು

10. ಉಪನಿಯಮ (8)ರಡಿ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ಕೊಟ್ಟಿರುವ ಯಾವುದೇ ನಿರ್ದೇಶಕನು ಅಂಥ ಹಿಂತೆಗೆದುಕೊಳ್ಳುವ ನೋಟೀಸನ್ನು ರದ್ದುಮಾಡಲು ಅವಕಾಶ ನೀಡತಕದ್ದಲ್ಲ.

11. ರಿಟರ್ನಿಂಗ್ ಅಧಿಕಾರಿಯು, ಉಪನಿಯಮ (9)ರಡಿ ಹಿಂತೆಗೆದುಕೊಳ್ಳುವ ನೋಟೀಸಿನ ನೈಜತೆಯು ಮತ್ತು ಅದನ್ನು ಕೊಡುವ ನಿರ್ದೇಶಕನ ಗುರುತು ಮನದಟ್ಟಾದರೆ, ಅವನ/ಅವರ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ವ್ಯಕ್ತಿಯ/ವ್ಯಕ್ತಿಗಳ ಹೆಸರನ್ನು/ಹೆಸರುಗಳನ್ನು ಅಂಥ ಸಭೆಯಲ್ಲಿ ಹಾಜರಿದ್ದ ನಿರ್ದೇಶಕರುಗಳಿಗೆ ಓದಿ ತಿಳಿಸತಕ್ಕದ್ದು.

12. ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ನಿಗದಿಪಡಿಸಿದ ಸಮಯವು ಮುಗಿದ ತರುವಾಯ, ಚುನಾವಣೆ ನಡೆಸುವ ಯಾವುದೇ ಪದಕ್ಕೆ, ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಮತ್ತು ನಿರ್ದಿಷ್ಟಪಡಿಸಿದ ಸಮಯ ಮತ್ತು ರೀತಿಯಲ್ಲಿ ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳದಿರುವ ಅಭ್ಯರ್ಥಿಗಳ ಸಂಖ್ಯೆಯು, ಆ ಪದಕ್ಕೆ ಚುನಾಯಿಸಬೇಕಾದ ಅಭ್ಯರ್ಥಿಗಳ ಸಂಖ್ಯೆಯನ್ನು ಮೀರದಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿಯು ತಕ್ಷಣ ಆ ಪದಕ್ಕೆ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಭಾವಿಸತಕ್ಕದ್ದು ಎಂಬ ಘೋಷಣೆಯನ್ನು ಮಾಡತಕ್ಕದ್ದು.

13. ಯಾವುದೇ ಪದಕ್ಕೆ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಸಂಖ್ಯೆಯು, ಆ ಪದಕ್ಕೆ ಚುನಾಯಿಸಬೇಕಾದ ಅಭ್ಯರ್ಥಿಗಳ ಸಂಖ್ಯೆಯನ್ನು ಮೀರಿದ್ದಲ್ಲಿ, ರಿಟರ್ನಿಂಗ್ ಅಧಿಕಾರಿಯು ಈ ಮುಂದೆ ತಿಳಿಸಿದಂತೆ ರಹಸ್ಯ ಮತಪತ್ರದ ಮೂಲಕ ಮತದಾನವನ್ನು ನಡೆಸುವ ಕ್ರಮ ಜರುಗಿಸತಕ್ಕದ್ದು.

14. ಮತಗಳನ್ನು ರಹಸ್ಯ ಮತದಾನದ ಮೂಲಕ ಮಾಡತಕ್ಕದ್ದು ಮತ್ತು ಯಾವುದೇ ಅಭ್ಯರ್ಥಿಗೆ ಮತ ನೀಡುವ ನಿರ್ದೇಶಕರುಗಳು ಅವರಿಗೆ ಒದಗಿಸುವ ಮತಪತ್ರಗಳಲ್ಲಿ ಮತಗಳನ್ನು ದಾಖಲಿಸತಕ್ಕದ್ದು.

15. ಸಭೆಯಲ್ಲಿ ಹಾಜರಿದ್ದ ಯಾವುದೇ ನಿರ್ದೇಶಕನು ತಾನು ಹಾಗೆ ಇಚ್ಛೆಪಟ್ಟಲ್ಲಿ ಮತದಾನ ಮಾಡದಿರಬಹುದು.

16. ಹಾಜರಿದ್ದ ಮತ್ತು ಮತ ಹಾಕಲು ಇಚ್ಛೆಯುಳ್ಳ ನಿರ್ದೇಶಕರು ಮತದಾನ ಮಾಡಿದ ನಂತರ ರಿಟರ್ನಿಂಗ್ ಅಧಿಕಾರಿಯು ಮತಗಳನ್ನು ಎಣಿಸತಕ್ಕದ್ದು ಮತ್ತು ಅತ್ಯಂತ ಹೆಚ್ಚಿನ ಕ್ರಮಬದ್ಧ ಮತಗಳನ್ನು ಪಡೆದಿರುವ ಅಭ್ಯರ್ಥಿಗಳು ಸೂಕ್ತ ರೀತಿಯಲ್ಲಿ ಚುನಾಯಿತರಾಗಿದ್ದಾರೆ ಎಂದು ಘೋಷಿಸತಕ್ಕದ್ದು.

17. ಎರಡು ಅಥವಾ ಹೆಚ್ಚಿನ ಅಭ್ಯರ್ಥಿಗಳು ಗಳಿಸಿದ ಕ್ರಮಬದ್ಧ ಮತಗಳು ಸಮವಾಗಿದ್ದರೆ ರಿಟರ್ನಿಂಗ್ ಅಧಿಕಾರಿಯು ಚೀಟಿ ಎತ್ತುವ ಮೂಲಕ ಕೂಡಲೇ ಆ ಅಭ್ಯರ್ಥಿಗಳ ನಡುವೆ ಆಯ್ಕೆಯನ್ನು

ತೀರ್ಮಾನಿಸತಕ್ಕದ್ದು ಮತ್ತು ಯಾವ ಅಭ್ಯರ್ಥಿಯ ಹೆಸರಿನಲ್ಲಿ ಚೀಟಿ ಬರುವುದೋ ಅವನಿಗೆ ಒಂದು ಅಧಿಕ ಮತವನ್ನು ಸೇರಿಸುವುದರಿಂದ ಅಂತಹ ಅಭ್ಯರ್ಥಿಯು ಚುನಾಯಿತನಾಗಿದ್ದಾನೆಂದು ಘೋಷಿಸತಕ್ಕದ್ದು.

18. ರಿಟರ್ನಿಂಗ್ ಅಧಿಕಾರಿಯು ಸಭೆಯಲ್ಲಿ ಹಾಜರಿದ್ದ ಎಲ್ಲ ನಿರ್ದೇಶಕರ ಹೆಸರುಗಳನ್ನು ಒಳಗೊಂಡಿರುವ ಸಭಾ ನಡವಳಿಗಳನ್ನು ದಾಖಲಿಸುವಂತೆ ಮಾಡತಕ್ಕದ್ದು. ಅಂಥ ನಡವಳಿಗಳನ್ನು ರಿಟರ್ನಿಂಗ್ ಅಧಿಕಾರಿಯು, ಮುಖ್ಯಕಾರ್ಯನಿರ್ವಾಹಕನು ಮತ್ತು ಹಾಜರಿದ್ದ ಎಲ್ಲ ನಿರ್ದೇಶಕರು ಸಹಿ ಮಾಡತಕ್ಕದ್ದು. ಸದರಿ ನಡವಳಿಯು ಯಾವುದೇ ಸದಸ್ಯನಿಗೆ ಪರಿಶೀಲನೆಗೆ ಲಭ್ಯವಾಗತಕ್ಕದ್ದು.

19. ರಿಟರ್ನಿಂಗ್ ಅಧಿಕಾರಿಯು ಚುನಾವಣೆಯ ನಡವಳಿಗಳನ್ನು ದಾಖಲಿಸಿ ಒಂದು ಸಮಗ್ರ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅಂಥ ವರದಿಯು ಚುನಾವಣೆಯ ದಾಖಲೆಗಳ ಭಾಗವಾಗಿರತಕ್ಕದ್ದು. ರಿಟರ್ನಿಂಗ್ ಅಧಿಕಾರಿಯು ಅಂಥ ವರದಿಯ ಪ್ರತಿಯನ್ನು ಚುನಾವಣೆಯ ಫಲಿತಾಂಶದ ಪ್ರತಿಯ ಸಹಿತ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕನಿಗೆ ಕೊಡತಕ್ಕದ್ದು ಹಾಗೂ ಜಿಲ್ಲಾ ಚುನಾವಣಾಧಿಕಾರಿಗೆ ಮತ್ತು ಸಹಕಾರ ಚುನಾವಣಾ ಆಯೋಗಕ್ಕೆ ವರದಿಯನ್ನು ಕಳುಹಿಸತಕ್ಕದ್ದು.

20. ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ತರುವಾಯ, ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟ ಮತಪತ್ರಗಳನ್ನು ಮತ್ತು ದಾಖಲೆಗಳನ್ನುಳ್ಳ ಮೊಹರಾದ ಲಕೋಟೆಯನ್ನು ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕನಿಗೆ ಕೊಡತಕ್ಕದ್ದು. ಚುನಾವಣೆಯ ದಿನಾಂಕದಿಂದ ಆರು ತಿಂಗಳ ಅವಧಿಯವರೆಗೆ ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಸಲ್ಲಿಸಲಾದ ವ್ಯಾಜ್ಯ ಅಥವಾ ಅಪೀಲು ವಿಲೇವಾರಿ ಆಗುವವರೆಗೆ, ಇವೆರಡರಲ್ಲಿ ಯಾವುದು ಕೊನೆಯದೋ ಅಲ್ಲಿಯವರೆಗೆ ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕನು ಸದರಿ ದಾಖಲೆಗಳನ್ನುಳ್ಳ ಮೊಹರಾದ ಲಕೋಟೆಯನ್ನು ಸುರಕ್ಷಿತವಾಗಿ ಅಭಿರಕ್ಷಿಸತಕ್ಕದ್ದು ಮತ್ತು ಆ ನಂತರ ನಾಶಪಡಿಸತಕ್ಕದ್ದು.

# ಅಧ್ಯಾಯ – IV

## ಭ್ರಷ್ಟಾಚಾರಗಳು / ಅಪರಾಧಗಳು ಹಾಗೂ ದಂಡನೆಗಳು

[ಪ್ರಕರಣ 39ಸಿ]

ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಮುಂದಿನವುಗಳನ್ನು ಭ್ರಷ್ಟಾಚಾರಗಳೆಂದು ಭಾವಿಸತಕ್ಕದ್ದು, ಎಂದರೆ,

i. ತತ್ಕಾಲದಲ್ಲಿ ಜಾರಿಯಲ್ಲಿರುವ, 1951ರ ಜನತಾ ಪ್ರಾತಿನಿಧ್ಯ ಅಧಿನಿಯಮದ (1951ರ ಕೇಂದ್ರಾಧಿನಿಯಮ ಸಂಖ್ಯೆ 43)ರ 123ನೇ ಪ್ರಕರಣದ (1)ನೇ ಖಂಡದಲ್ಲಿ ಪರಿಭಾಷಿಸಲಾದಂತೆ 'ಲಂಚಗುಳಿತನ'.

ii. ತತ್ಕಾಲದಲ್ಲಿ ಜಾರಿಯಲ್ಲಿರುವ, ಮೇಲಿನ ಪ್ರಕರಣದ (2)ನೇ ಖಂಡದಲ್ಲಿ ಪರಿಭಾಷಿಸಲಾದಂತೆ ಅನುಚಿತ ಪ್ರಭಾವ.

iii. ಅಭ್ಯರ್ಥಿಯ ಚುನಾವಣೆಯ ಭವಿಷ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ ಯಾರೇ ವ್ಯಕ್ತಿಗೆ, ಆತನ ಧರ್ಮ, ಮೂಲ ವಂಶ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಮತದಾನ ಮಾಡಲು ಅಥವಾ ಮತದಾನ ಮಾಡದೆ ಇರಲು ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ವ್ಯಕ್ತಿಯು ಮಾಡಿಕೊಳ್ಳುವ ಮನವಿ ಅಥವಾ ರಾಷ್ಟ್ರ ಧ್ವಜ ಅಥವಾ ರಾಷ್ಟ್ರೀಯ ಲಾಂಛನಗಳಂಥ ರಾಷ್ಟ್ರೀಯ ಚಿಹ್ನೆಗಳ ಬಳಕೆ ಅಥವಾ ಅವುಗಳತ್ತ ಗಮನ ಸೆಳೆಯುವುದು.

iv. ಅಭ್ಯರ್ಥಿಯ ಚುನಾವಣೆಯ ಭವಿಷ್ಯವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಅಥವಾ ಯಾರೇ ಅಭ್ಯರ್ಥಿಯ ಚುನಾವಣೆಯ ಮೇಲೆ ಪ್ರತಿಕೂಲವಾಗಿ ಪ್ರಭಾವ ಬೀರುವುದಕ್ಕಾಗಿ, ಧರ್ಮ, ಮೂಲ ವಂಶ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರಗಳ ಮೇಲೆ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು, ಭಾರತದ ನಾಗರಿಕರ ಭಿನ್ನಭಿನ್ನ ವರ್ಗಗಳ ನಡುವೆ ಹಗೆತನದ ಅಥವಾ ದ್ವೇಶದ ಭಾವನೆಗಳನ್ನು ಬೆಳೆಸುವುದು ಅಥವಾ ಬೆಳೆಸಲು ಪ್ರಯತ್ನಿಸುವುದು.

v. ಯಾರೇ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯಕ್ಕೆ ಅಥವಾ ನಡತೆಗೆ ಸಂಬಂಧಪಟ್ಟಂತೆ ಅಥವಾ ಯಾರೇ ಅಭ್ಯರ್ಥಿಯ ಉಮೇದುವಾರಿಕೆಗೆ ಅಥವಾ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಸುಳ್ಳಿನ ಅಥವಾ ಸುಳ್ಳೆಂದು ತಾನು ನಂಬುವ ಅಥವಾ ನಿಜವೆಂದು ತಾನು ನಂಬದಿರುವ ಮತ್ತು ಆ ಅಭ್ಯರ್ಥಿಯ ಚುನಾವಣಾ ಭವಿಷ್ಯದ ಮೇಲೆ ಪ್ರತಿಕೂಲ ಪ್ರಭಾವ ಬೀರಲು ಯುಕ್ತವಾಗಿ ಉದ್ದೇಶಿಸಿರುವ ಸಂಗತಿಯ ಯಾವುದೇ ನಿರೂಪಣೆಯನ್ನು ಅಭ್ಯರ್ಥಿಯು ಅಥವಾ ಏಜೆಂಟನು ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು ಪ್ರಕಟಿಸುವುದು.

vi. ಒಬ್ಬ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾರೇ ಇತರ ವ್ಯಕ್ತಿಯು ಈ ಅಧಿನಿಯಮದ ಮೇರೆಗೆ ರಚಿಸಿರುವ ನಿಯಮಗಳ ಅನುಸಾರ ವ್ಯವಸ್ಥೆ ಮಾಡಿದ ಯಾವುದೇ ಮತದಾನ ಕೇಂದ್ರಕ್ಕೆ (ಸ್ವತಃ ಅಭ್ಯರ್ಥಿ, ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟ್ ಇವರನ್ನು ಹೊರತುಪಡಿಸಿ) ಯಾರೇ ಮತದಾರನನ್ನು

ಉಚಿತವಾಗಿ ಕರೆದೊಯ್ಯಲು ಅಥವಾ ಅಲ್ಲಿಂದ ಕರೆತರಲು ಯಾವುದೇ ವಾಹನ ಅಥವಾ ದೋಣಿಯನ್ನು ಹಣ ಸಂದಾಯದ ಮೇಲೆ ಅಥವಾ ಅನ್ಯಥಾ ಬಾಡಿಗೆಗೆ ತೆಗೆದುಕೊಳ್ಳುವುದು ಅಥವಾ ಪಡೆದುಕೊಳ್ಳುವುದು ಅಥವಾ ಅಂಥ ವಾಹನ ಅಥವಾ ದೋಣಿಯನ್ನು ಬಳಸುವುದು.

ಪರಂತು, ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಿರುವ ಸ್ಥಳಕ್ಕೆ ಹೋಗುವುದು ಅಥವಾ ಅಲ್ಲಿಂದ ಬರುವ ಉದ್ದೇಶಕ್ಕಾಗಿ ಯಾರೇ ಮತದಾರನು ತನ್ನ ಸ್ವಂತ ಖರ್ಚಿನಲ್ಲಿ ಯಾವುದೇ ಸಾರ್ವಜನಿಕ ಸಾರಿಗೆ ವಾಹನ ಅಥವಾ ದೋಣಿ ಅಥವಾ ರೈಲು ಭೋಗಿಯನ್ನು ಬಳಸುವುದನ್ನು ಭ್ರಷ್ಟಾಚಾರವೆಂದು ಭಾವಿಸತಕ್ಕದ್ದಲ್ಲ.

**ವಿವರಣೆ;**

ಈ ಖಂಡದಲ್ಲಿ **"ವಾಹನ"** ಎಂಬ ಪದಕ್ಕೆ, ರಸ್ತೆ ಸಾರಿಗೆ ಉದ್ದೇಶಕ್ಕಾಗಿ ಬಳಸಿದ ಅಥವಾ ಬಳಸಲು ಸಮರ್ಥವಾಗಿರುವ ಯಾವುದೇ ವಾಹನ ಎಂದು ಅರ್ಥ. ಆ ವಾಹನವು ಯಂತ್ರಚಾಲಿತ ಅಥವಾ ಅನ್ಯಥಾ ಚಾಲಿತವಾದುದಾಗಿರಬಹುದು ಮತ್ತು ಅದು ಇತರ ವಾಹನಗಳನ್ನು ಎಳೆಯಲು ಅಥವಾ ಅನ್ಯಥಾ ಉಪಯೋಗಿಸುವಂಥದಾಗಿರಬಹುದು.

i. ಅಮಲೇರಿಸುವ ಮದ್ಯಗಳು ಸರಬರಾಜಾಗುವ ಯಾವುದೇ ಸಭೆಯನ್ನು ನಡೆಸುವುದು.
ii. ಚುನಾವಣೆಗೆ ಉಲ್ಲೇಖ ಇರುವ, ಮುದ್ರಕನ ಮತ್ತು ಪ್ರಕಾಶಕನ ಹೆಸರು ಮತ್ತು ವಿಳಾಸ ಇಲ್ಲದಿರುವ ಯಾವುದೇ ಸುತ್ತೋಲೆ, ಜಾಹೀರಾತು ಪತ್ರಗಳು, ಬಿತ್ತಿಪತ್ರಗಳನ್ನು ಹೊರಡಿಸುವುದು.
iii. ರಾಜ್ಯ ಸರ್ಕಾರವು, ನಿಯಮದ ಮೂಲಕ ಭ್ರಷ್ಟಾಚಾರವೆಂದು ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಆಚರಣೆ.

## 01 – ಮತದಾನದ ರಹಸ್ಯವನ್ನು ಕಾಪಾಡುವುದು

**[ಪ್ರಕರಣ 39ಡಿ]**

1. ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದಕ್ಕೆ ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನಿರ್ವಹಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ವ್ಯಕ್ತಿಯು ಮತದಾನದ ರಹಸ್ಯವನ್ನು ಕಾಪಾಡುವುದು ಮತ್ತು ಹಾಗೆ ಕಾಪಾಡುವಲ್ಲಿ ನೆರವಾಗುವುದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಅಧಿಕೃತಗೊಳಿಸಲಾದ ಯಾವುದೇ ಉದ್ದೇಶಕ್ಕಾಗಿ ಹೊರತು) ಅಂಥ ರಹಸ್ಯವನ್ನು ಭಂಗಗೊಳಿಸಲು ಉದ್ದೇಶಿಸುವ ಯಾವುದೇ ಮಾಹಿತಿಯನ್ನು ಯಾರೇ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ.

2. (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದಾಗ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

## 02 – ಅಧಿಕಾರಿಗಳು, ಮುಂತಾದವರು ಚುನಾವಣೆಗಳಲ್ಲಿ ಅಭ್ಯರ್ಥಿಗಳ ಪರವಾಗಿ ಕಾರ್ಯನಿರ್ವಹಿಸಕೂಡದು ಅಥವಾ ಮತದಾನದ ಮೇಲೆ ಪ್ರಭಾವ ಬೀರಕೂಡದು

**[ಪ್ರಕರಣ39(ಇ)]**

1. ಚುನಾವಣೆಯಲ್ಲಿ ರಿಟರ್ನಿಂಗ್ ಆಫೀಸರ್ ಆಗಿರುವ ಅಥವಾ ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್ ಆಗಿರುವ ಅಥವಾ ಚುನಾವಣೆಗೆ ಸಂಬಂಧಿಸಿದ ಯಾವುದೇ ಕರ್ತವ್ಯ ನಿರ್ವಹಿಸಲು ರಿಟರ್ನಿಂಗ್ ಆಫೀಸರ್‌ರಿಂದ ಅಥವಾ ಪ್ರಿಸೈಡಿಂಗ್ ಆಫೀಸರ್‌ರಿಂದ ನೇಮಕಗೊಂಡಿರುವ ಅಧಿಕಾರಿಯು ಅಥವಾ ಗುಮಾಸ್ತನು ಚುನಾವಣೆಯ ಪ್ರಕ್ರಿಯೆಗಳನ್ನು ಹೊರತುಪಡಿಸಿ (ಮತ ನೀಡುವುದರ ಹೊರತಾಗಿ) ಯಾವುದೇ ಕಾರ್ಯವನ್ನು ಮಾಡತಕ್ಕದ್ದಲ್ಲ.
2. ಮೇಲೆ ಹೇಳಲಾದಂಥ ಯಾರೇ ವ್ಯಕ್ತಿಯು ಮತ್ತು ಪೊಲೀಸ್ ಪಡೆಯ ಯಾರೇ ಸದಸ್ಯನು,

   (ಎ) ಚುನಾವಣೆಯಲ್ಲಿ ತನ್ನ ಮತವನ್ನು ನೀಡುವಂತೆ ಯಾರೇ ವ್ಯಕ್ತಿಯನ್ನು ಪ್ರೇರೇಪಿಸಲು, ಅಥವಾ

   (ಬಿ) ಚುನಾವಣೆಯಲ್ಲಿ ತನ್ನ ಮತವನ್ನು ನೀಡದಿರುವಂತೆ ಯಾರೇ ವ್ಯಕ್ತಿಯನ್ನು ವಿಮುಖಗೊಳಿಸಲು, ಅಥವಾ

   (ಸಿ) ಚುನಾವಣೆಯಲ್ಲಿ ಯಾವುದೇ ರೀತಿಯಲ್ಲಿ ಯಾರೇ ವ್ಯಕ್ತಿಯನ್ನು ವಿಮುಖಗೊಳಿಸಲು ಪ್ರಯತ್ನಿಸತಕ್ಕದ್ದಲ್ಲ.
3. (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.
4. (3)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾದವು ಸಂಜ್ಞೇಯರಾಗಿರತಕ್ಕದ್ದು.

## 03 – ಮತದಾನ ಕೇಂದ್ರಗಳಲ್ಲಿ ಅಥವಾ ಸಮೀಪದಲ್ಲಿ ಮತ ಕೋರಿಕೆಯ ನಿಷೇಧ

**[ಪ್ರಕರಣ 39(ಎಫ್)]**

1. ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕದಂದು ಅಥವಾ ದಿನಾಂಕಗಳಂದು ಯಾರೇ ವ್ಯಕ್ತಿಯು ಮತದಾನ ಕೇಂದ್ರದೊಳಗೆ ಅಥವಾ ಮತದಾನ ಕೇಂದ್ರದ ಒಂದು ನೂರು ಮೀಟರ್ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಈ ಕೆಳಕಂಡ ಯಾವುದೇ ಕಾರ್ಯಗಳನ್ನು ಮಾಡತಕ್ಕದ್ದಲ್ಲ. ಎಂದರೆ,

   (ಎ) ಮತಗಳಿಗಾಗಿ ಬೇಡುವುದು, ಅಥವಾ

   (ಬಿ) ಯಾರೇ ಮತದಾರನ ಮತವನ್ನು ಯಾಚಿಸುವುದು, ಅಥವಾ

   (ಸಿ) ಯಾರೇ ನಿರ್ದಿಷ್ಟ ಅಭ್ಯರ್ಥಿಗೆ ಮತ ನೀಡದಂತೆ ಯಾರೇ ಮತದಾರನನ್ನು ಮನವೊಲಿಸುವುದು, ಅಥವಾ

   (ಡಿ) ಚುನಾವಣೆಯಲ್ಲಿ ಮತ ನೀಡದಂತೆ ಯಾರೇ ಮತದಾರನನ್ನು ಮನವೊಲಿಸುವುದು, ಅಥವಾ

   (ಇ) ಚುನಾವಣೆಗೆ ಸಂಬಂಧಿಸಿದ (ಅಧಿಕೃತ ನೋಟೀಸಿನ ಹೊರತು) ಯಾವುದೇ ನೋಟೀಸು ಅಥವಾ ಚಿಹ್ನೆಯನ್ನು ಪ್ರದರ್ಶಿಸುವುದು.

(2) (1)ನೇ ಉಪಪ್ರಕರಣದ ಉಪಬಂದಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಅಪರಾಧ ನಿರ್ಣಯವಾದಾಗ ಇನ್ನೂರೈವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಂಜ್ಞೇಯವಾಗಿರತಕ್ಕದ್ದು.

## 04 – ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿನ ಅವ್ಯವಸ್ಥಿತ ವರ್ತನೆಗೆ ದಂಡ

**[ಪ್ರಕರಣ 39(ಜಿ)]**

1. ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕ ಅಥವಾ ದಿನಾಂಕಗಳ ಯಾರೇ ವ್ಯಕ್ತಿಯು,

   a) ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ಸ್ಥಳದಲ್ಲಿ ಅಥವಾ ಅದರ ಆಸುಪಾಸಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮಾನವ ಧ್ವನಿಯನ್ನು ವರ್ಧಿಸುವುದಕ್ಕಾಗಿ ಅಥವಾ ಪುನರುಚ್ಚರಿಸುವುದಕ್ಕಾಗಿ ಮೆಗಾಫೋನ್ ಅಥವಾ ಧ್ವನಿವರ್ಧಕದಂಥ ಯಾವುದೇ ಸಲಕರಣೆಯನ್ನು ಬಳಸತಕ್ಕದ್ದಲ್ಲ ಅಥವ ನಡೆಸತಕ್ಕದ್ದಲ್ಲ. ಅಥವಾ

   b) ಮತದಾನ ಮಾಡಲು ಮತದಾನ ಕೇಂದ್ರಕ್ಕೆ ಭೇಟಿ ನೀಡುವ ಯಾರೇ ವ್ಯಕ್ತಿಗೆ ಕಿರುಕುಳ ಉಂಟುಮಾಡುವಂತೆ ಅಥವಾ ಮತದಾನ ಕೇಂದ್ರದಲ್ಲಿ ಕರ್ತವ್ಯ ನಿರತರಾಗಿರುವ ಅಧಿಕಾರಿಗಳ ಮತ್ತು ಇತರ ವ್ಯಕ್ತಿಗಳ ಕೆಲಸಕ್ಕೆ ಅಡ್ಡಿಯುಂಟಾಗುವಂತೆ, ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ಸ್ಥಳದಲ್ಲಿ ಅಥವಾ ಅದರ ಆಸುಪಾಸಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಕೂಗತಕ್ಕದ್ದಲ್ಲ ಅಥವಾ ಅನ್ಯಥಾ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸತಕ್ಕದ್ದಲ್ಲ.

2. (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಅಂಥ ಉಲ್ಲಂಘನೆಗೆ ಉದ್ದೇಶಪೂರ್ವಕವಾಗಿ ಸಹಾಯ ಮಾಡುವ ಅಥವಾ ಅದನ್ನು ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು, ಅಪರಾಧ ನಿರ್ಣಯದ ತರುವಾಯ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

3. ಯಾರೇ ವ್ಯಕ್ತಿಯು ಈ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡುತ್ತಿದ್ದಾನೆ ಅಥವಾ ಮಾಡಿದ್ದಾನೆ ಎಂದು ಮತದಾನ ಕೇಂದ್ರದ ಪ್ರಿಸೈಡಿಂಗ್ ಆಫೀಸರ್‌ನಿಗೆ ನಂಬಲು ಕಾರಣ ಇದ್ದರೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಲು ಅವನು ಯಾರೇ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅನಂತರ ಪೊಲೀಸ್ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡತಕ್ಕದ್ದು.

4. ಯಾರೇ ಪೊಲೀಸ್ ಅಧಿಕಾರಿಯು (1)ನೇ ಉಪಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯವೆನಿಸಬಹುದಾದಂತ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಅಂತ ಬಲವನ್ನು ಉಪಯೋಗಿಸಬಹುದು ಮತ್ತು ಅಂಥ ಉಲ್ಲಂಘನೆಗಾಗಿ ಬಳಸಿದ ಯಾವುದೇ ಸಲಕರಣೆಯನ್ನು ವಶಕ್ಕೆ ತೆಗೆದುಕೊಳ್ಳಬಹುದು.

## 05 – ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡ

**[ಪ್ರಕರಣ–39(ಹೆಚ್)]**

1. ಯಾವುದೇ ಮತದಾನ ಕೇಂದ್ರದಲ್ಲಿ ಮತದಾನಕ್ಕೆ ನಿಗದಿಪಡಿಸಲಾದ ಸಮಯದಲ್ಲಿ ಸ್ವತಃ ದುರ್ವರ್ತಿಸುವ ಅಥವಾ ಪ್ರಿಸೈಡಿಂಗ್ ಆಫೀಸರ್‌ರ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ತಪ್ಪುವ ವ್ಯಕ್ತಿಯನ್ನು ಪ್ರಿಸೈಡಿಂಗ್ ಆಫೀಸರ್‌ರವರು ಅಥವಾ ಕರ್ತವ್ಯನಿರತ ಯಾರೇ ಪೊಲೀಸ್ ಅಧಿಕಾರಿಯು ಅಥವಾ ಈ ಬಗ್ಗೆ ಅಂಥ ಪ್ರಿಸೈಡಿಂಗ್ ಆಫೀಸರ್‌ರು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು ಮತದಾನ ಕೇಂದ್ರದಿಂದ ಹೊರಹಾಕಬಹುದು.

2. (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು, ಮತದಾನ ಕೇಂದ್ರದಲ್ಲಿ ಮತದಾನ ಮಾಡಲು ಅನ್ಯಥಾ ಹಕ್ಕುಳ್ಳ ಯಾರೇ ಮತದಾರನು ಆ ಕೇಂದ್ರದಲ್ಲಿ ಮತದಾನ ಮಾಡುವ ಅವಕಾಶವು ತಪ್ಪುವ ಹಾಗೆ ಚಲಾಯಿಸತಕ್ಕದ್ದಲ್ಲ.

3. ಒಂದು ಮತದಾನ ಕೇಂದ್ರದಿಂದ ಹಾಗೆ ಹೊರಹಾಕಲಾದ ಯಾರೇ ವ್ಯಕ್ತಿಯು, ಪ್ರಿಸೈಡಿಂಗ್ ಆಫೀಸರ್‌ರ ಅನುಮತಿ ಇಲ್ಲದೆ ಮತದಾನ ಕೇಂದ್ರವನ್ನು ಪುನಃ ಪ್ರವೇಶಿಸಿದರೆ, ಅವನು ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

4. (3)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

## 06 – ಚುನಾವಣೆಗೆ ಸಂಬಂಧಿಸಿದಂತೆ ಪದೀಯ ಕರ್ತವ್ಯದ ಉಲ್ಲಂಘನೆಗಳು

**[ಪ್ರಕರಣ 39(ಐ)]**

1. ಈ ಪ್ರಕರಣವು ಅನ್ವಯವಾಗುವ ಯಾರೇ ವ್ಯಕ್ತಿಯು ಯುಕ್ತ ಕಾರಣವಿಲ್ಲದೆ ತನ್ನ ಪದೀಯ ಕರ್ತವ್ಯದ ಉಲ್ಲಂಘನೆಯಾಗುವ ಯಾವುದೇ ಕಾರ್ಯದ ಅಥವಾ ಲೋಪದ ತಪ್ಪಿತಸ್ಥನಾಗಿದ್ದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

2. (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

3. ಮೇಲೆ ಹೇಳಿರುವ ಅಂಥ ಯಾವುದೇ ಕೃತ್ಯಕ್ಕೆ ಅಥವಾ ಲೋಪಕ್ಕೆ ಸಂಬಂಧಪಟ್ಟಂತೆ ಹಾನಿ ಪರಿಹಾರಕ್ಕಾಗಿ ಯಾರೇ ಅಂಥ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

4. ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳೆಂದರೆ, ರಿಟರ್ನಿಂಗ್ ಆಫೀಸರ್‌ಗಳು, ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್‌ಗಳು, ಪ್ರಿಸೈಡಿಂಗ್ ಆಫೀಸರ್‌ಗಳು, ಪೊಲಿಂಗ್ ಆಫೀಸರ್‌ಗಳು ಮತ್ತು ನಾಮನಿರ್ದೇಶನ ಪತ್ರಗಳ ಸ್ವೀಕಾರಕ್ಕೆ ಅಥವಾ ಉಮೇದುವಾರಿಕೆಯ ಹಿಂತೆಗೆದುಕೊಳ್ಳುವುದಕ್ಕೆ ಅಥವಾ ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದಕ್ಕೆ ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ನೇಮಕಗೊಂಡಿರುವ ಯಾರೇ ಇತರ ವ್ಯಕ್ತಿ, ಮತ್ತು "ಪದೀಯ ಕರ್ತವ್ಯ" ಎಂಬ ಪದಾವಳಿಯನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ತದನುಸಾರವಾಗಿ ಅರ್ಥೈಸತಕ್ಕದ್ದು., ಆದರೆ ಅದು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಕರ್ತವ್ಯಗಳನ್ನು ಒಳಗೊಂಡಿರತಕ್ಕದ್ದಲ್ಲ.

## 07 – ಮತದಾನ ಕೇಂದ್ರದಿಂದ ಮತಪತ್ರಗಳನ್ನು ಸ್ಥಳಾಂತರಿಸುವುದು ಅಪರಾಧ

**[ಪ್ರಕರಣ–39(ಜೆ)]**

1. ಯಾವುದೇ ಚುನಾವಣೆಯಲ್ಲಿ ಮತದಾನ ಕೇಂದ್ರದಿಂದ ಮತಪತ್ರವನ್ನು ಅನಧಿಕೃತವಾಗಿ ತೆಗೆದುಕೊಂಡು ಹೋಗುವ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸುವ ಅಥವಾ ಯಾವುದೇ ಅಂಥ ಕಾರ್ಯವನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡುವ ಅಥವಾ ಅದಕ್ಕೆ ದುಷ್ಪ್ರೇರಣೆ ಮಾಡುವ ಯಾರೇ ವ್ಯಕ್ತಿಯು ಆ

ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷದ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

2. ಮತದಾನ ಕೇಂದ್ರದ ಪ್ರಿಸ್ಯೈಡಿಂಗ್ ಆಫೀಸರ್‌ರಿಗೆ (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಯಾರೇ ವ್ಯಕ್ತಿಯು ಮಾಡುತ್ತಿದ್ದಾನೆಂದು ಅಥವಾ ಮಾಡಿದ್ದಾನೆಂದು ನಂಬಲು ಕಾರಣ ಇದ್ದರೆ, ಅಂಥ ಅಧಿಕಾರಿಯು, ಅಂಥ ವ್ಯಕ್ತಿಯು ಆ ಮತದಾನ ಕೇಂದ್ರವನ್ನು ಬಿಡುವ ಮೊದಲು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡುವಂತೆ ಪೊಲೀಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಅಥವಾ ಅವನನ್ನು ಪೊಲೀಸ್ ಅಧಿಕಾರಿಯು ಶೋಧನೆ ಮಾಡುವಂತೆ ಮಾಡಬಹುದು.

   ಪರಂತು, ಮಹಿಳೆಯನ್ನು ಶೋಧನೆ ಮಾಡುವ ಅಗತ್ಯವಿದ್ದರೆ, ಮತ್ತೊಬ್ಬ ಮಹಿಳೆಯಿಂದ ಶೋಧನೆಯನ್ನು ಕಟ್ಟುನಿಟ್ಟಾಗಿ ಸಭ್ಯತೆಯಿಂದ ಮಾಡಿಸತಕ್ಕದ್ದು.

3. ಶೋಧನೆಯ ಬಳಿಕ ದಸ್ತಗಿರಿಯಾದ ವ್ಯಕ್ತಿಯ ಬಳಿ ಕಂಡುಬಂದ ಯಾವುದೇ ಮತಪತ್ರವನ್ನು, ಪ್ರಿಸ್ಯೈಡಿಂಗ್ ಆಫೀಸರ್‌ರು ಪೊಲೀಸ್ ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ ಪೊಲೀಸ್ ಅಧಿಕಾರಿಯು ಶೋಧನೆಯನ್ನು ಮಾಡಿದ್ದರೆ ಅದನ್ನು ಅಂಥ ಅಧಿಕಾರಿಯು ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕದ್ದು.

4. (1)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

## 08 – ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡಗಳು

**[ಪ್ರಕರಣ 39(ಕೆ)]**

1. ಯಾವುದೇ ಚುನಾವಣೆಯಲ್ಲಿ ವ್ಯಕ್ತಿಯು,
   a) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ, ಅಥವಾ
   b) ರಿಟರ್ನಿಂಗ್ ಆಫೀಸರ್‌ರ ಪ್ರಕಾರ ಅಥವಾ ಮೇರೆಗೆ ಅಂಟಿಸಲಾದ ಯಾವುದೇ ಪಟ್ಟಿ, ನೋಟೀಸು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ, ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ, ಅಥವಾ
   c) ಯಾವುದೇ ಮತಪತ್ರವನ್ನು ಅಥವಾ ಯಾವುದೇ ಮತಪ್ರದ ಮೇಲಿನ ಅಧಿಕೃತ ಚಿಹ್ನೆಯನ್ನು ಮೋಸದಿಂದ ವಿರೂಪಗೊಳಿಸಿದರೆ, ಅಥವಾ
   d) ಯುಕ್ತ ಅಧಿಕಾರವಿಲ್ಲದೆ ಯಾವುದೇ ಮತಪತ್ರವನ್ನು ಯಾವುದೇ ವ್ಯಕ್ತಿಗೆ ಸರಬರಾಜು ಮಾಡಿದರೆ ಅಥವಾ ಯಾವುದೇ ಮತಪತ್ರವನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದರೆ, ಅಥವಾ
   e) ಮತ ಪೆಟ್ಟಿಗೆಯೊಳಕ್ಕೆ ಹಾಕಲು ಕಾನೂನಿನ ಮೂಲಕ ಅಧಿಕೃತವಾಗಿರುವ ಮತಪತ್ರವನ್ನು ಹೊರತುಪಡಿಸಿ ಇತರ ಯಾವುದೇ ವಸ್ತುವನ್ನು ಯಾವುದೇ ಪೆಟ್ಟಿಗೆಯಲ್ಲಿ ಮೋಸದಿಂದ ಹಾಕಿದರೆ, ಅಥವಾ (ಎಫ್) ಚುನಾವಣಾ ಉದ್ದೇಶಗಳಿಗಾಗಿ ಆಗ ಬಳಕೆಯಲ್ಲಿರುವ ಯಾವುದೇ ಮತ ಪೆಟ್ಟಿಗೆಯನ್ನು ಮತಪತ್ರಗಳನ್ನು ಯುಕ್ತ ಅಧಿಕಾರವಿಲ್ಲದೆ ನಾಶಪಡಿಸಿದರೆ, ತೆಗೆದುಕೊಂಡರೆ, ತೆರೆದರೆ ಅಥವಾ ಅನ್ಯಥಾ ಅವುಗಳಲ್ಲಿ ಹಸ್ತಕ್ಷೇಪ ಮಾಡಿದರೆ, ಅಥವಾ
   f) ಸಂದರ್ಭಾನುಸಾರ ಮೋಸದಿಂದ ಅಥವಾ ಯುಕ್ತ ಅಧಿಕಾರವಿಲ್ಲದೆ ಮೇಲೆ ಹೇಳಿದ ಯಾವುದೇ ಕೃತ್ಯಗಳನ್ನು ಮಾಡಲು ಪ್ರಯತ್ನಿಸಿದರೆ ಅಥವಾ ಯಾವುದೇ ಅಂಥ ಕೃತ್ಯಗಳನ್ನು ಮಾಡಲು ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ದುಷ್ಪ್ರೇರಿಸಿದರೆ, ಅವನು ಚುನಾವಣಾ ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

2. ಈ ಪ್ರಕರಣದ ಮೇರೆಗಿನ ಚುನಾವಣಾ ಅಪರಾಧದ ತಪ್ಪಿತಸ್ಥನಾದ ಮೇಲೆ ಯಾರೇ ವ್ಯಕ್ತಿಯು,
   a) ಮತದಾನ ಕೇಂದ್ರದಲ್ಲಿ ರಿಟರ್ನಿಂಗ್ ಆಫಿಸರ್ ಆಗಿದ್ದರೆ ಅಥವಾ ಅಸಿಸ್ಟೆಂಟ್ ರಿಟರ್ನಿಂಗ್ ಆಫಿಸರ್ ಅಥವಾ ಪ್ರಿಸೈಡಿಂಗ್ ಅಫೀಸರ್‌ರಾಗಿದ್ದರೆ ಅಥವಾ ಚುನಾವಣೆಗೆ ಸಂಬಂಧಿಸಿದ ಪದೀಯ ಕರ್ತವ್ಯದ ಮೇಲೆ ನಿಯೋಜಿತನಾಗಿರುವ ಯಾವುದೇ ಇತರ ಅಧಿಕಾರಿ ಅಥವಾ ಗುಮಾಸ್ತನಾಗಿದ್ದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.
   b) ಯಾರೇ ಇತರ ವ್ಯಕ್ತಿಯಾಗಿದ್ದರೆ, ಅವನು ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.
3. ಈ ಪ್ರಕರಣದ ಉದ್ದೇಶಗಳಿಗಾಗಿ ಮತಗಳ ಎಣಿಕೆಯೂ ಸೇರಿದಂತೆ ಚುನಾವಣೆ ನಡೆಸುವಲ್ಲಿ ಅಥವಾ ಚುನಾವಣೆಯ ಒಂದು ಭಾಗವನ್ನು ನಡೆಸುವುದರಲ್ಲಿ ಭಾಗವಹಿಸುವುದು ಒಬ್ಬ ವ್ಯಕ್ತಿಯ ಕರ್ತವ್ಯವಾಗಿದ್ದರೆ, ಅವನು ಪದೀಯ ಕರ್ತವ್ಯದ ಮೇಲಿರುವನೆಂದು ಅಥವಾ ಅಂಥ ಚುನಾವಣೆಗೆ ಸಂಬಂಧಿಸಿದಂತೆ ಬಳಸಿದ್ದ ಮತಪತ್ರಗಳು ಮತ್ತು ಇತರ ದಸ್ತಾವೇಜುಗಳಿಗೆ ಚುನಾವಣೆಯ ತರುವಾಯ ಜವಾಬ್ದಾರನಾಗಿರುವನೆಂದು ಭಾವಿಸತಕ್ಕದ್ದು. ಆದರೆ "ಪದೀಯ ಕರ್ತವ್ಯ" ಎಂಬ ಪದಾವಳಿಯು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅನ್ಯಥಾ ವಿಧಿಸಲಾದ ಯಾವುದೇ ಕರ್ತವ್ಯವನ್ನು ಒಳಗೊಂಡಿರತಕ್ಕದ್ದಲ್ಲ.
4. (2)ನೇ ಉಪಪ್ರಕರಣದ ಮೇರೆಗೆ ದಂಡನೀಯವಾದ ಒಂದು ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

ವಿವಾದಗಳ ಇತ್ಯರ್ಥ

## 09 – ಅಪರಾಧಗಳು ಮತ್ತು ದಂಡನೆಗಳು

**[ಪ್ರಕರಣ 109]**

(1) 39ಎಎ ಪ್ರಕರಣದಡಿಯಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಚುನಾವಣೆಗಳನ್ನು ನಡೆಸಲು ಅವಶ್ಯಕವಾದ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಸಕಾಲದಲ್ಲಿ ಒದಗಿಸಿ ನೆರವು ನೀಡಲು, ತಪ್ಪಿದ ಆಡಳಿತ ಮಂಡಲಿಯ ಪ್ರತಿಯೊಬ್ಬ ಸದಸ್ಯನು ಮತ್ತು ಮುಖ್ಯ ಕಾರ್ಯನಿರ್ವಾಹಕನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತರಾಗತಕ್ಕದ್ದು.

(2) ಯಾವೊಬ್ಬ ವ್ಯಕ್ತಿಯು ಮಂಡಲಿಯ ಸದಸ್ಯರ ಅಥವಾ ಪದಾಧಿಕಾರಿಗಳ ಚುನಾವಣೆಗೆ ಮೊದಲು, ಚುನಾವಣೆಯು ನಡೆಯುವಾಗ ಅಥವಾ ಚುನಾವಣೆಯ ತರುವಾಯದಲ್ಲಿ 39ಸಿ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಭ್ರಷ್ಟ ಆಚರಣೆಯನ್ನು ಅಳವಡಿಸಿದರೆ ಅಥವಾ 39ಕೆ ಪ್ರಕರಣದ ಅಡಿಯಲ್ಲಿನ ಯಾವುದೇ ಚುನಾವಣೆ ಅಪರಾಧಗಳನ್ನು ಎಸಗಿದಲ್ಲಿ, ಅವನು ಆರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

# ನಮೂನೆ – XI

{ನಿಯಮ 14(1)ಅನ್ನು ನೋಡಿ}

## ಅಧಿಸೂಚನೆ

ನಂ. ದಿನಾಂಕ:

ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ಉಪಬಂಧಗಳ ಅಡಿಯಲ್ಲಿ ಜಿಲ್ಲೆಯಲ್ಲಿ ನೋಂದಾಯಿತ ಕಚೇರಿಗಳನ್ನುಳ್ಳ ಸಹಕಾರ ಸಂಘಗಳ ಆಡಳಿತ ಮಂಡಲಿಗಳಿಗೆ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿರುವಂತೆ ವಿವಿಧ ಪ್ರದೇಶಗಳಿಂದ ಅಥವಾ ಮತಕ್ಷೇತ್ರಗಳಿಂದ ಚುನಾವಣೆಗಳನ್ನು ನಡೆಸಬೇಕಾಗಿರುವುದರಿಂದ;

*(1) ದಿನಾಂಕ __________ ಕ್ಕೆ ಪದಾವಧಿಯು ಮುಕ್ತಾಯವಾಗಲಿರುವ ____________ ಪ್ರಾಥಮಿಕ / ಮಾಧ್ಯಮಿಕ/ಫೆಡರಲ್/ಅಪೆಕ್ಸ್/ಸಹಕಾರ ಸಂಘಗಳ ಆಡಳಿತ ಮಂಡಲಿಗೆ ನಿರ್ದೇಶಕರುಗಳ ಸ್ಥಾನಗಳನ್ನು ತುಂಬಲು ಚುನಾವಣೆಗಳನ್ನು ನಡೆಸಬೇಕಾಗಿರುವುದರಿಂದ;

*(2) __________ ಇವರ ಮರಣ/ರಾಜೀನಾಮೆ/ಅನರ್ಹತೆ/ಅಥವಾ ಇನ್ನಿತರ ಕಾರಣದಿಂದಾಗಿ __________ ಪ್ರದೇಶ / ಮತಕ್ಷೇತ್ರದ ಸ್ಥಾನವು ಖಾಲಿಯಾಗಿರುವುದರಿಂದ / ಖಾಲಿಯಾಗಿರುವುದಾಗಿ ಘೋಷಿಸಿರುವುದರಿಂದಾಗಿ ಉಂಟಾದ ಚುನಾವಣೆಯನ್ನು ನಡೆಸಬೇಕಾಗಿರುವುದರಿಂದ

ಆದುದರಿಂದ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14(1)ಕ್ಕೆ ಅನುಸಾರವಾಗಿ __________ ಜಿಲ್ಲೆಯ ಜಿಲ್ಲಾ ಚುನಾವಣಾಧಿಕಾರಿಯಾದ __________ ಎಂಬ ಹೆಸರಿನ ನಾನು ಸದರಿ ಚುನಾವಣೆಗೆ ಸಂಬಂಧಿಸಿದ ಈ ಕೆಳಕಂಡ ಕಾರ್ಯಕ್ರಮಗಳ ವೇಳಾಪಟ್ಟಿಯನ್ನು ಈ ಮೂಲಕ ನಿಗದಿಪಡಿಸುತ್ತೇನೆ.

| ಕ್ರಮ ಸಂಖ್ಯೆ | ಸಹಕಾರ ಸಂಘಗಳ ವರ್ಗೀಕರಣ | ಚುನಾವಣೆಗಳ ಅವಧಿ |
|---|---|---|
| 1 | ಪ್ರಾಥಮಿಕ ಸಂಘಗಳು | ರಿಟರ್ನಿಂಗ್ ಅಧಿಕಾರಿಗಳು ಚುನಾವಣೆಗಳ ಸ್ಥಳ, ದಿನ ಮತ್ತು ದಿನಾಂಕವನ್ನು ನಿಗದಿಪಡಿಸಿ ಪ್ರತ್ಯೇಕವಾಗಿ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸತಕ್ಕದ್ದು. |
| 2 | ಮಾಧ್ಯಮಿಕ ಸಂಘಗಳು | |
| 3 | ಫೆಡರಲ್ ಸಂಘಗಳು | |
| 4 | ಅಪೆಕ್ಸ್ ಸಂಘಗಳು | |

ಜಿಲ್ಲಾ ಚುನಾವಣಾಧಿಕಾರಿ

---

* ಅನ್ವಯವಾಗದಿರುವುದನ್ನು ಹೊಡೆದು ಹಾಕಿ

# ನಮೂನೆ - XII

{ನಿಯಮ 14(3)ಅನ್ನು ನೋಡಿ}

## ಚುನಾವಣಾ ನೋಟೀಸು

___________ ಸಹಕಾರ ಸಂಘದ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು / ................ ಸಹಕಾರ ಸಂಘದ ಆಡಳಿತ ಮಂಡಲಿಯಲ್ಲಿನ ಆಕಸ್ಮಿಕ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು _________________ (ಸ್ಥಳ) _______________ (ದಿನಾಂಕ) _______________ ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 4 ಗಂಟೆಯವರೆಗೆ *[1][ಹಿಂದುಳಿದ ವರ್ಗ / ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಮಹಿಳೆಯರಿಗಾಗಿ ಮತ್ತು **ಸಾಮಾನ್ಯ ಸ್ಥಾನಗಳಿಗಾಗಿ** ಮೀಸಲಿಟ್ಟ ___________ ಪ್ರದೇಶ/ಮತಕ್ಷೇತ್ರದಲ್ಲಿ/ಗಳಲ್ಲಿ ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ.

ಸದರಿ ಚುನಾವಣಾ ವೇಳಾಪಟ್ಟಿಯು ಈ ಕೆಳಗಿನಂತೆ ಇರತಕ್ಕದೆಂದೂ ನೋಟೀಸು ನೀಡಲಾಗಿದೆ.

| | | |
|---|---|---|
| (ಎ) | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಪಡೆಯಲು ಕೊನೆಯ ದಿನಾಂಕ (ನಿಯಮ 14ಎ) | ಚುನಾವಣಾ ದಿನಾಂಕದ ನಿಕಟಪೂರ್ವದ ಏಳನೇ ಸ್ಪಷ್ಟ ದಿನದಂದು<br>(ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಬಿ) | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14ಬಿ) | ಚುನಾವಣಾ ದಿನಾಂಕದ ನಿಕಟಪೂರ್ವದ ಆರನೇ ಸ್ಪಷ್ಟ ದಿನದಂದು (ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಸಿ) | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ಮತಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14ಬಿ(4)) | ಚುನಾವಣಾ ದಿನಾಂದ ನಿಕಟಪೂರ್ವದ ಆರನೇ ಸ್ಪಷ್ಟ ದಿನದಂದು<br>(ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಡಿ) | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳ ಹಿಂತೆಗೆದುಕೊಳ್ಳಲು ಕೊನೆಯ ದಿನ. (ನಿಯಮ 14ಸಿ) | ಚುನಾವಣಾ ದಿನಾಂಕದ ನಿಕಟಪೂರ್ವದ ಐದನೇ ಸ್ಪಷ್ಟ ದಿನದಂದು<br>(ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಇ) | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14ಡಿ) | ಚುನಾವಣಾ ದಿನಾಂಕದ ನಿಕಟಪೂರ್ವದ ಐದನೇ ಸ್ಪಷ್ಟ ದಿನದಂದು<br>(ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಎಫ್) | ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳು ಅಪೇಕ್ಷಿಸಿದಲ್ಲಿ ಚಿಹ್ನೆಗಳ ಹಂಚಿಕೆ (ನಿಯಮ 14ಇ) | ಚುನಾವಣಾ ದಿನಾಂಕದ ನಿಕಟಪೂರ್ವದ ಐದನೇ ಸ್ಪಷ್ಟ ದಿನದಂದು<br>(ದಿನಾಂಕ ಮತ್ತು ಸಮಯವನ್ನು ತಿಳಿಸತಕ್ಕದ್ದು) |
| (ಜಿ) | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ: _______________<br>ಸಮಯ: ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ |
| (ಹೆಚ್) | ಮತ ಎಣಿಕೆಯ ದಿನ ಮತ್ತು ದಿನಾಂಕ | ಮತದಾನದ ದಿನದಂದು ಮತದಾನದ ಅವಧಿ ಮುಗಿದ ತಕ್ಷಣ |

| | | |
|---|---|---|
| (ಐ) | ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ | ಮತದಾನದ ದಿನದಂದು ಎಣಿಕೆ ಮುಗಿದ ತಕ್ಷಣ |

(a) ಚುನಾವಣೆಯಲ್ಲಿ ಭರ್ತಿ ಮಾಡಬೇಕಾಗಿರುವ ಖಾಲಿ ಸ್ಥಾನಗಳ ಸಂಖ್ಯೆ;

(b) ನಿರ್ದೇಶಕರನ್ನು ಚುನಾಯಿಸಬೇಕಾದ ಪ್ರದೇಶ/ಮತಕ್ಷೇತ್ರ (ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ);

(c) ಆಡಳಿತ ಮಂಡಲಿಯ ನಿರ್ದೇಶಕರಾಗಿ ಚುನಾಯಿತರಾಗಲು ಕಾಯಿದೆಯಲ್ಲಿ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆಗಳು;

(d) ಆಡಳಿತ ಮಂಡಲಿಯ ನಿರ್ದೇಶಕರಾಗಿ ಚುನಾಯಿತರಾಗಲು ಕಾಯಿದೆಯಲ್ಲಿ, ನಿಯಮಗಳಲ್ಲಿ ಮತ್ತು ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಅನರ್ಹತೆಗಳು.

ಸ್ಥಳ: ____________

ದಿನಾಂಕ : ____________

**ರಿಟರ್ನಿಂಗ್ ಅಧಿಕಾರಿ**

* ಅನ್ವಯವಾಗದಿರುವುದನ್ನು ಹೊಡೆದು ಹಾಕಿ

ಇತ್ತೀಚಿನ
ಭಾವಚಿತ್ರ

## ನಮೂನೆ - XIII

{ನಿಯಮ 14ಎ(1)ನ್ನು ನೋಡಿ}

## ನಾಮಪತ್ರ

__________ ಸಹಕಾರ ಸಂಘ __________ ಇದರ ಆಡಳಿತ ಮಂಡಲಿಗೆ ನಿರ್ದೇಶಕರ ಚುನಾವಣೆ __________ * ಸಾಮಾನ್ಯ __________ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರಿಗೆ ಮೀಸಲಿರಿಸಿದ __________ ಪ್ರದೇಶ/ಮತಕ್ಷೇತ್ರದಿಂದ __________ ಸಹಕಾರ ಸಂಘದ ಆಡಳಿತ ಮಂಡಲಿಯ ನಿರ್ದೇಶಕರ ಚುನಾವಣೆಗೆ ಅಭ್ಯರ್ಥಿಯಾಗಿ ಶ್ರೀ / ಶ್ರೀಮತಿ ____________________ ಅವರನ್ನು ನಾನು ನಾಮಕರಣ ಮಾಡುತ್ತೇನೆ.

*ಅಭ್ಯರ್ಥಿಯ ಹೆಸರು :

ಅವನ / ಅವಳ ತಂದೆಯ/ ಗಂಡನ ಹೆಸರು :

ಅಂಚೆಯ ವಿಳಾಸ:

ಅವನು ಡೆಲಿಗೇಟ್ ಆಗಿರುವ ಸಹಕಾರ ಸಂಘದ ಹೆಸರು:

ಅವನ / ಅವಳ ಹೆಸರನ್ನು . ಪ್ರದೇಶ/ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿರುವ __________ **ಭಾಗದಲ್ಲಿ __________ ಕ್ರಮ ಸಂಖ್ಯೆಯಲ್ಲಿ ನಮೂದಿಸಲಾಗಿದೆ.

ನನ್ನ ಹೆಸರು ____________________ ಮತ್ತು ಅದನ್ನು . ಪ್ರದೇಶ/ಮತಕ್ಷೇತ್ರದ ಮತದಾರರ ಪಟ್ಟಿಯಲ್ಲಿರುವ __________ **ಭಾಗದಲ್ಲಿ __________ ಕ್ರಮಸಂಖ್ಯೆಯಲ್ಲಿ ನಮೂದಿಸಲಾಗಿದೆ.

ದಿನಾಂಕ : **ಸೂಚಕನ ಸಹಿ**

---

***ಅಭ್ಯರ್ಥಿಯು :**

(i) ಸಹಕಾರ ಸಂಘದ ಬಿಡಿವ್ಯಕ್ತಿ ಸದಸ್ಯ; ಅಥವಾ

(ii) ಸಹಕಾರ ಸಂಘದ ಒಂದು ಗುಂಪಿನ ಸದಸ್ಯರ ಪ್ರತಿನಿಧಿ; ಅಥವಾ

(iii) ಸದಸ್ಯ ಸಹಕಾರ ಸಂಘದ ಡೆಲಿಗೇಟ್

– ಆಗಿರಬಹುದು

**ಭಾಗ I: – A: ಪ್ರಾಥಮಿಕ ಸಹಕಾರ ಸಂಘದ ಮತದಾನದ ಹಕ್ಕುಳ್ಳ ಬಿಡಿವ್ಯಕ್ತಿ ಸದಸ್ಯರು

B: ಪ್ರಾಥಮಿಕ ಸಹಕಾರ ಸಂಘದ ಒಂದು ಗುಂಪಿನ ಸದಸ್ಯರ ಮತದಾನದ ಹಕ್ಕುಳ್ಳ ಪ್ರತಿನಿಧಿಗಳು

**ಭಾಗ II: A : ಮಾಧ್ಯಮಿಕ ಸಹಕಾರ ಸಂಘದ ಮತದಾನದ ಹಕ್ಕುಳ್ಳ ಬಿಡಿವ್ಯಕ್ತಿ ಸದಸ್ಯರು ಮತ್ತು ಸದಸ್ಯ ಸಹಕಾರ ಸಂಘಗಳ ಡೆಲಿಗೇಟುಗಳು

B : ಮಾಧ್ಯಮಿಕ ಸಹಕಾರ ಸಂಘದ ಒಂದು ಗುಂಪಿನ ಸದಸ್ಯರ ಮತದಾನದ ಹಕ್ಕುಳ್ಳ ಪ್ರತಿನಿಧಿಗಳು ಮತ್ತು ಸದಸ್ಯ ಸಹಕಾರ ಸಂಘಗಳ ಮತದಾನದ ಹಕ್ಕುಳ್ಳ ಡೆಲಿಗೇಟುಗಳು

**ಭಾಗ III: – ಫೆಡರಲ್/ಅಪೆಕ್ಸ್ ಸಹಕಾರ ಸಂಘದ ಸದಸ್ಯ ಸಹಕಾರ ಸಂಘಗಳ ಡೆಲಿಗೇಟುಗಳು

**ಅಭ್ಯರ್ಥಿಯಿಂದ ಘೋಷಣೆ**

ಮೇಲೆ ಹೇಳಿದ ಅಭ್ಯರ್ಥಿಯಾದ ನಾನು, ಈ ನಾಮನಿರ್ದೇಶನಕ್ಕೆ ಒಪ್ಪಿದ್ದೇನೆ ಹಾಗೂ

(ಎ) ನನಗೆ __________ ವರ್ಷ ವಯಸ್ಸು ತುಂಬಿದೆ,

(ಬಿ) ನಾನೊಬ್ಬ ಮಹಿಳೆಯಾಗಿದ್ದೇನೆ,

(ಸಿ) ಕರ್ನಾಟಕ ರಾಜ್ಯದ ಅನುಸೂಚಿತ ಜಾತಿ/ ಅನುಸೂಚಿತ ಪಂಗಡ, ಹಿಂದುಳಿದ ವರ್ಗವಾಗಿರುವ __________ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದ ಸದಸ್ಯನಾಗಿದ್ದೇನೆ. ಸಕ್ರಮ ಪ್ರಾಧಿಕಾರವು ನೀಡಿದ ಅನುಸೂಚಿತ ಜಾತಿ / ಅನುಸೂಚಿತ ಪಂಗಡ / ಹಿಂದುಳಿದ ವರ್ಗದ ಪ್ರಮಾಣ ಪತ್ರದ ಪ್ರತಿಯನ್ನು ಇದಕ್ಕೆ ಲಗತ್ತಿಸಲಾಗಿದೆ, :

(ಡಿ) ಕಾಯಿದೆಯಲ್ಲಿ, ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ಸಹಕಾರ ಸಂಘದ ಆಡಳಿತ ಮಂಡಲಿಯ ನಿರ್ದೇಶಕನಾಗಿ ಚುನಾಯಿತನಾಗಲು ನಿರ್ದಿಷ್ಟಪಡಿಸಿರುವ ಯಾವುದೇ ಅನರ್ಹತೆಗಳನ್ನು ಹೊಂದಿಲ್ಲ,

(ಇ) ಕಾಯಿದೆಯಲ್ಲಿ, ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ಸಹಕಾರ ಸಂಘದ ಆಡಳಿತ ಮಂಡಲಿಯ ನಿರ್ದೇಶಕನಾಗಿ ಚುನಾಯಿತನಾಗಲು ನಿರ್ದಿಷ್ಟಪಡಿಸಿರುವ ಯಾವುದೇ ಅಗತ್ಯ ಅರ್ಹತೆಗಳನ್ನು ಹೊಂದಿದ್ದೇನೆ,

(ಎಫ್) ನಾನು ಆಯ್ಕೆ ಮಾಡಿದ ಚಿಹ್ನೆಗಳು, ಆದ್ಯತೆ ಕ್ರಮದಲ್ಲಿ ಹೀಗಿವೆ,

1. __________

2. __________ ಮತ್ತು

3. __________,

– ಎಂದು ಈ ಮೂಲಕ ನನ್ನ ಉತ್ತಮ ತಿಳುವಳಿಕೆ ಮತ್ತು ನಂಬಿಕೆಯಿರುಷ್ಟರ ಮಟ್ಟಿಗೆ ಘೋಷಿಸುತ್ತೇನೆ.

ದಿನಾಂಕ ........................ **ಅಭ್ಯರ್ಥಿಯ ಸಹಿ**

---

**(ರಿಟರ್ನಿಂಗ್ ಅಧಿಕಾರಿಯಿಂದ ಭರ್ತಿ ಮಾಡಬೇಕಾದುದು)**

ನಾಮಪತ್ರದ ಕ್ರಮಸಂಖ್ಯೆ __________

ಅಭ್ಯರ್ಥಿಯಾದ ಶ್ರೀ/ಶ್ರೀಮತಿ ____________________ ಈ ನಾಮಪತ್ರವನ್ನು ____________ ದಿನಾಂಕದಂದು __________ ಗಂಟೆಗೆ ನನ್ನ ಕಚೇರಿಯಲ್ಲಿ ನನಗೆ ಒಪ್ಪಿಸಿದ್ದಾನೆ / ಳೆ.

**ರಿಟರ್ನಿಂಗ್ ಅಧಿಕಾರಿ**

ದಿನಾಂಕ __________]

* ಅನ್ವಯವಾಗದಿರುವುದನ್ನು ಹೊಡೆದು ಹಾಕಿ

# ನಮೂನೆ - XIV

{ನಿಯಮ 14ಬಿ(4)ಅನ್ನು ನೋಡಿ}

## ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿ

__________ *ಸಾಮಾನ್ಯ __________ ಅನುಸೂಚಿತ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರಿಗೆ ಮೀಸಲಿರಿಸಿದ __________ ಪ್ರದೇಶ/ಮತಕ್ಷೇತ್ರದಿಂದ __________ ಸಹಕಾರ ಸಂಘ ಇದರ ಆಡಳಿತ ಮಂಡಲಿಯ ನಿರ್ದೇಶಕರ ಚುನಾವಣೆ.

| ಕ್ರಮ ಸಂಖ್ಯೆ | ವರ್ಗೀಕರಣ | ಅಭ್ಯರ್ಥಿಯ ಹೆಸರು | ಅಭ್ಯರ್ಥಿಯ ತಂದೆ/ ಗಂಡನ ಹೆಸರು | ಅಭ್ಯರ್ಥಿಯ ವಿಳಾಸ |
|---|---|---|---|---|
| 1 | 2 | 3 | 4 | 5 |
| | ಸಾಮಾನ್ಯ | | | |
| | ಹಿಂದುಳಿದ ವರ್ಗ | | | |
| | ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ | | | |
| | ಮಹಿಳೆಯರು | | | |
| | | | | |

ಸ್ಥಳ: __________

ದಿನಾಂಕ : __________

**ರಿಟರ್ನಿಂಗ್ ಅಧಿಕಾರಿ**

* ಅನ್ವಯವಾಗದಿರುವುದನ್ನು ಹೊಡೆದು ಹಾಕಿ

# ನಮೂನೆ – XV

{ನಿಯಮ 14ಸಿ(1)ಅನ್ನು ನೋಡಿ}

## ನಾಮಪತ್ರವನ್ನು ಹಿಂತೆಗೆದುಕೊಳ್ಳುವ ಬಗ್ಗೆ ನೋಟೀಸು

__________________ *ಸಾಮಾನ್ಯ ________________ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ ಮಹಿಳೆಯರು ಮೀಸಲಿರಿಸಿದ ________________ ಪ್ರದೇಶ/ಮತಕ್ಷೇತ್ರದಿಂದ ________________ ಸಹಕಾರ ಸಂಘದ ____________ ಇದರ ಆಡಳಿತ ಮಂಡಲಿಯ ನಿರ್ದೇಶಕರ ಚುನಾವಣೆ.

ಗೆ :

ರಿಟರ್ನಿಂಗ್ ಅಧಿಕಾರಿ,

_______________________

_______________________

_______________________

ನಾನು, -------------------------- ಮೇಲಿನ ಚುನಾವಣೆಯಲ್ಲಿ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಯಾಗಿದ್ದು ನನ್ನ ಉಮೇದುವಾರಿಕೆ / ಅಭ್ಯರ್ಥಿತನವನ್ನು ಹಿಂತೆಗೆದುಕೊಳ್ಳುತ್ತೇನೆಂದು ಈ ಮೂಲಕ ನೋಟೀಸು ನೀಡುತ್ತೇನೆ.

ಸ್ಥಳ :

ದಿನಾಂಕ :

**ಅಭ್ಯರ್ಥಿಯ ಸಹಿ**

----------------------------------

## ಹಿಂತೆಗೆದುಕೊಳ್ಳುವ ನೋಟೀಸಿನ ಸ್ವೀಕೃತಿ

(ನೋಟೀಸನ್ನು ನೀಡುವ ವ್ಯಕ್ತಿಗೆ ಕೊಡತಕ್ಕುದಾದದ್ದು)

________ ಸಹಕಾರ ಸಂಘ ________ ಇದರ ಆಡಳಿತ ಮಂಡಲಿಯ ಚುನಾವಣೆಗೆ ________ ಮತಕ್ಷೇತ್ರದಿಂದ ಕ್ರಮಬದ್ಧವಾಗಿ ನಾಮಪತ್ರವನ್ನು ಸಲ್ಲಿಸಿರುವ ಅಭ್ಯರ್ಥಿ ಆದ ಶ್ರೀ / ಶ್ರೀಮತಿ ________________________________ ತನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ನೋಟೀಸನ್ನು ನನ್ನ ಕಚೇರಿಯಲ್ಲಿ __________________ ದಿನಾಂಕಕ್ಕೆ ___________ ಗಂಟೆಗೆ ನನಗೆ ಸಲ್ಲಿಸಿದ್ದಾನೆ/ಳೆ.

ಸ್ಥಳ : ______________________

ದಿನಾಂಕ : ______________________

**ರಿಟರ್ನಿಂಗ್ ಅಧಿಕಾರಿ**

* ಅನ್ವಯವಾಗದಿರುವುದನ್ನು ಹೊಡೆದು ಹಾಕಿ

## ನಮೂನೆ - XVI

{ನಿಯಮ 14ಡಿ(1) ಮತ್ತು 14ಇ(4)ನ್ನು ನೋಡಿ}

### ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ

__________ *ಸಾಮಾನ್ಯ __________ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ಮಹಿಳೆಯರು ಮೀಸಲಿರಿಸಿದ __________ ಪ್ರದೇಶ / ಮತಕ್ಷೇತ್ರದಿಂದ __________ ಸಹಕಾರ ಸಂಘ ಇದರ ಆಡಳಿತ ಮಂಡಲಿಯ ನಿರ್ದೇಶಕರ ಸಾಮಾನ್ಯ ಚುನಾವಣೆ.

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಅಭ್ಯರ್ಥಿಯ ವಿಳಾಸ | ಸಾಮಾನ್ಯ / ಮೀಸಲು ಸ್ಥಾನ | ಹಂಚಿಕೆ ಮಾಡಿದ ಚಿಹ್ನೆ |
|---|---|---|---|---|
| **1** | **2** | **3** | **4** | **5** |
| 1 | | | | |
| 2 | | | | |
| 3 | | | | |
| 4 | | | | |
| 5 | | | | |
| 6 | | | | |
| 7 | | | | |
| 8 | | | | |
| 9 | | | | |
| 10 | | | | |
| 11 | | | | |

ಸ್ಥಳ: __________

ದಿನಾಂಕ : __________

**ರಿಟರ್ನಿಂಗ್ ಅಧಿಕಾರಿ**

* ಅನ್ವಯವಾಗದಿರುವುದನ್ನು ಹೊಡೆದು ಹಾಕಿ

# ನಮೂನೆ – XIX

**(ನಿಯಮ 14ಜಿ(2) ಮತ್ತು (3) ಅನ್ನು ನೋಡಿ)**

**(ಸ್ಥಾನಕ್ಕೆ ಸ್ಪರ್ಧೆಯಿಲ್ಲದಿದ್ದಾಗ ಉಪಯೋಗಿಸಬೇಕಾದುದು)**

**ಚುನಾವಣಾ ಫಲಿತಾಂಶ ಘೋಷಣೆ**

ದಿನಾಂಕ: ------------ ರಂದು ನಡೆದ ಆಡಳಿತ ಮಂಡಳಿ ಚುನಾವಣೆಯಲ್ಲಿ, ಸಾಮಾನ್ಯ, ಅನುಸೂಚಿತ ಜಾತಿ / ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಹಾಗೂ ಮಹಿಳೆಯರಿಗೆ ಮೀಸಲಿರಿಸಿದ ಸ್ಥಾನಗಳು / ಮತಕ್ಷೇತ್ರದಿಂದ --------- --------------- ಸಹಕಾರ ಸಂಘ -------------- ಇದರ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಗೆ ಸ್ಪರ್ಧಿಸಿ, ಈ ಕೆಳಕಂಡ ಅಭ್ಯರ್ಥಿಗಳು ಅವಿರೋಧವಾಗಿ ಸಹಕಾರ ಸಂಘಗಳ ನಿಯಮಗಳು 1960, ನಿಯಮ 14ಜಿ ನಲ್ಲಿನ ಉಪಬಂಧಾನುಸಾರ ನಾನು ಈ ಕೆಳಕಂಡ ಅಭ್ಯರ್ಥಿಗಳು ಅವರ ಹೆಸರಿನ ಎದುರಿನಲ್ಲಿ ತೋರಿಸಿರುವ ಮತಸ್ಥಾನ /ಕ್ಷೇತ್ರ ದಿಂದ ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಘೋಷಿಸಿರುತ್ತೇನೆ.

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಅಭ್ಯರ್ಥಿಯ ವಿಳಾಸ | ಆಯ್ಕೆಗೊಂಡ ಸ್ಥಾನ / ಕ್ಷೇತ್ರ |
|---|---|---|---|
| 1 | | | ಸಾಮಾನ್ಯ |
| 2 | | | ಸಾಮಾನ್ಯ |
| 3 | | | ಸಾಮಾನ್ಯ |
| 4 | | | ಸಾಮಾನ್ಯ |
| 5 | | | ಸಾಮಾನ್ಯ |
| 6 | | | ಸಾಮಾನ್ಯ |
| 7 | | | ಸಾಮಾನ್ಯ |
| 8 | | | ಅನುಸೂಚಿತ ಜಾತಿ/ಪರಿಶಿಷ್ಟ ಪಂಗಡ |
| 9 | | | ಹಿಂದುಳಿದ ವರ್ಗ |
| 10 | | | ಮಹಿಳೆ |
| 11 | | | ಮಹಿಳೆ |

ಸಹಿ

(ಹೆಸರು)

**ರಿಟರ್ನಿಂಗ್ ಅಧಿಕಾರಿ**

ಸ್ಥಳ:–

ದಿನಾಂಕ:

# ನಮೂನೆ - XVII

**[ನಿಯಮ 14ಎಲ್(1) ಅನ್ನು ನೋಡಿ]**

**ಮಾದರಿ ಮತ ಪತ್ರ**

**(ಮತಪತ್ರದ ಪಕ್ಕ ಪ್ರತಿ / Counter file)**

**------------------- ಸಹಕಾರ ಸಂಘ ನಿ., ---------------**

**2014 ರಿಂದ 5 ವರ್ಷ ಅವಧಿಗೆ ಆಡಳಿತ ಮಂಡಳಿಯ ಸದಸ್ಯರ ಚುನಾವಣೆ**

**ದಿನಾಂಕ----------------**

**ಮತಪತ್ರ**

**ಮತದಾರ/ಡೆಲಿಗೇಟ್/ಪ್ರತಿನಿಧಿ ಪಟ್ಟಿಯಲ್ಲಿನ ಕ್ರ. ಸಂ. ------------ ಮತದಾರನ ಸಹಿ**

---

**------------------- ಸಹಕಾರ ಸಂಘ ನಿ., ---------------**

**2014 ರಿಂದ 5 ವರ್ಷ ಅವಧಿಗೆ ಆಡಳಿತ ಮಂಡಳಿಯ ಸದಸ್ಯರ ಚುನಾವಣೆ ದಿನಾಂಕ----------------**

**ಮತಪತ್ರ**

**ವಿ.ಸೂ. ಕೆಳಗಿನ ಅಭ್ಯರ್ಥಿಗಳ ಪೈಕಿ ಯಾರಿಗಾದರೂ 09 ಅಭ್ಯರ್ಥಿಗೆ ಗುರುತು ಮಾಡುವುದರ ಮೂಲಕ ಚುನಾಯಿಸಬಹುದು.**

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ |
|---|---|---|
| 1 | | |
| 2 | | |
| 3 | | |
| 4 | | |
| 5 | | |
| 6 | | |
| 7 | | |
| 8 | (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮೀಸಲು) | |
| 9 | (ಹಿಂದುಳಿದ ವರ್ಗ ಮೀಸಲು) | |
| 10 | (ಮಹಿಳೆ ಮೀಸಲು) | |
| 11 | | |

**---------------- ಸಹಕಾರ ಸಂಘ -------------- ತಾಲ್ಲೂಕು --------------**

**ಇದರ ಆಡಳಿತ ಮಂಡಳಿ ಚುನಾವಣೆ – 2014**

## "ಮಹಜರ್ – 01"

ದಿನಾಂಕ: **--------** ರಂದು ನಡೆಯಲಿರುವ ಆಡಳಿತ ಮಂಡಳಿ ಚುನಾವಣೆಗೆ ಬೆಳಿಗ್ಗೆ **-----** ಗಂಟೆಯಲ್ಲಿ ಖಾಲಿ ಮತಪೆಟ್ಟಿಗೆಯನ್ನು ಮತಗಟ್ಟೆ ಅಧಿಕಾರಿಗಳು ಈ ಕೆಳಕಂಡ ಅಭ್ಯರ್ಥಿಗಳಾದ /ಏಜೆಂಟರ್‌ಗಳಾದ ನಮ್ಮ ಸಮಕ್ಷಮದಲ್ಲಿ ಮತದಾನಕ್ಕೆ ಅಣಿಗೊಳಿಸಿ ಮೊಹರು ಮಾಡಿರುತ್ತಾರೆಂದು ದೃಢೀಕರಿಸಿರುತ್ತೇವೆ.

**ಹಾಜರಿದ್ದ ಅಭ್ಯರ್ಥಿಗಳು / ಏಜೆಂಟರುಗಳು**

| ಕ್ರ. ಸಂ. | **ಹೆಸರು** | **ಸಹಿ** |
|---|---|---|
| | | |
| | | |
| | | |
| | | |
| | | |
| | | |
| | | |

**ಮತಗಟ್ಟೆ ಅಧಿಕಾರಿ**

**----------------- ಸಹಕಾರ ಸಂಘ --------------- ತಾಲ್ಲೂಕು ---------------**

**ಇದರ ಆಡಳಿತ ಮಂಡಳಿ ಚುನಾವಣೆ – 2014**

## "ಮಹಜರ್ – 02"

ದಿನಾಂಕ: **---------** ರಂದು ನಡೆದ ಆಡಳಿತ ಮಂಡಳಿ ಚುನಾವಣೆ ಸಾಯಂಕಾಲ **----** ಗಂಟೆಯಲ್ಲಿ ಮತ ಪತ್ರಗಳು ತುಂಬಿದ ಮತಪೆಟ್ಟಿಗೆಯನ್ನು ಮತಗಟ್ಟೆ ಅಧಿಕಾರಿಗಳು ಈ ಕೆಳಕಂಡ ಅಭ್ಯರ್ಥಿಗಳಾದ / ಏಜೆಂಟರ್‌ಗಳಾದ ನಮ್ಮ ಸಮಕ್ಷಮದಲ್ಲಿ ಸೀಲು ಮಾಡಿ ಮೊಹರು ಮಾಡಿರುತ್ತಾರೆಂದು ದೃಢೀಕರಿಸಿರುತ್ತೇವೆ.

**ಹಾಜರಿದ್ದ ಅಭ್ಯರ್ಥಿಗಳು / ಏಜೆಂಟರುಗಳು**

| ಕ್ರ. ಸಂ. | ಹೆಸರು | ಸಹಿ |
|---|---|---|
| | | |
| | | |
| | | |
| | | |
| | | |
| | | |
| | | |

**ಮತಗಟ್ಟೆ ಅಧಿಕಾರಿ**

# ನಮೂನೆ – XVIII

**(ನಿಯಮ 14V)**

## ಮತ ಪತ್ರದ ಲೆಕ್ಕ

**-------------- ಸಂಘದ ಆಡಳಿತ ಮಂಡಳಿಯ ಚುನಾವಣೆ –2014**

| ಕ್ರ. ಸಂ. | ವಿವರ | ಕ್ರ.ಸಂ. ಯಿಂದ | ಕ್ರ.ಸಂ. ಗೆ | ಒಟ್ಟು |
|---|---|---|---|---|
| 1 | ಮತಗಟ್ಟೆಗೆ ನೀಡಿದ ಮತ ಪತ್ರಗಳು | | | |
| 2 | **ಉಳಿದ ಮತ ಪತ್ರಗಳು**<br>a. ಮತಗಟ್ಟೆ ಅಧಿಕಾರಿಗಳ ಸಹಿ ಇರುವ ಮತ ಪತ್ರಗಳು<br>b. ಮತಗಟ್ಟೆ ಅಧಿಕಾರಿಗಳ ಸಹಿ ಇಲ್ಲದೆ ಇರುವ ಮತ ಪತ್ರಗಳು | | | |
| | | **ಒಟ್ಟು (a+b)** | | |
| 3 | ಉಪಯೋಗಿಸಿದ ಮತ ಪತ್ರಗಳು | **ಒಟ್ಟು (1-2=3)** | | |
| 4 | **ಮತ ಪೆಟ್ಟಿಗೆ ಹಾಕದೆ ಇರುವ ಮತ ಪತ್ರಗಳು.**<br>a. ಮತದಾನದ ನಿಯಮಗಳ ಉಲ್ಲಂಘನೆ ಮಾಡಿದ ಕಾರಣ ರದ್ದುಪಡಿಸಿದ ಮತ ಪತ್ರಗಳು.<br>b. ಇತರೆ ಕಾರಣಗಳಿಂದ ರದ್ದಾದ ಮತಪತ್ರಗಳು (ಹಾಳಾದ) | | | |
| | | **ಒಟ್ಟು a+b** | | |
| 5. | ಮತಪೆಟ್ಟಿಗೆಯಲ್ಲಿ ಇರುವ ಮತ ಪತ್ರಗಳು | **(3–4=5)** | | |

ಸ್ಥಳ: __________

ದಿನಾಂಕ : __________ **ರಿಟರ್ನಿಂಗ್ ಅಧಿಕಾರಿ**

* ಅನ್ವಯವಾಗದಿರುವುದನ್ನು ಹೊಡೆದು ಹಾಕಿ

**-----------------ಸಹಕಾರ ಸಂಘ --------------- ತಾಲ್ಲೂಕು --------------- ಇದರ ಆಡಳಿತ ಮಂಡಳಿ ಚುನಾವಣೆ –2014**

## "ಮಹಜರ್–03"

ದಿನಾಂಕ: --------- ರಂದು ನಡೆದ ಆಡಳಿತ ಮಂಡಳಿ ಚುನಾವಣೆ ಸಂಜೆ ---- ಗಂಟೆಯಲ್ಲಿ ಮತ ಪತ್ರಗಳು ತುಂಬಿದ ಮೊಹರು ಮಾಡಿದ ಮತಪೆಟ್ಟಿಗೆಯನ್ನು ಮತ ಎಣಿಕೆಗಾಗಿ ಈ ಕೆಳಕಂಡ ಅಭ್ಯರ್ಥಿಗಳಾದ/ಏಜೆಂಟರ್‌ಗಳಾದ ನಮ್ಮ ಸಮಕ್ಷಮದಲ್ಲಿ ಮೊಹರು ತೆಗೆದು ಮತ ಎಣಿಕೆಯನ್ನು ಪ್ರಾರಂಭ ಮಾಡಿರುತ್ತಾರೆಂದು ದೃಢೀಕರಿಸಿರುತ್ತೇವೆ.

**ಹಾಜರಿದ್ದ ಅಭ್ಯರ್ಥಿಗಳು / ಏಜೆಂಟರುಗಳು**

| ಕ್ರ. ಸಂ. | **ಹೆಸರು** | **ಸಹಿ** |
|---|---|---|
| | | |
| | | |
| | | |
| | | |
| | | |
| | | |
| | | |

**ಮತಗಟ್ಟೆ ಅಧಿಕಾರಿ**

-------------- ಸಹಕಾರ ಸಂಘ --------------ತಾಲ್ಲೂಕು--------------

**ಟೇಬಲ್‌ವಾರು / ಅಭ್ಯರ್ಥಿವಾರು ಮತ ಎಣಿಕೆ ಹಾಳೆ**

ಟೇಬಲ್ ಸಂಖ್ಯೆ: ----------

ಸುತ್ತು ಸಂಖ್ಯೆ: -----------

| ಕ್ರಸ | ಅಭ್ಯರ್ಥಿಯ ಹೆಸರು | ಮತಗಳು | | | | | | | | | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 |
| | | 31 | 32 | 33 | 34 | 35 | 36 | 37 | 38 | 39 | 40 | 41 | 42 | 43 | 44 | 45 | 46 | 47 | 48 | 49 | 50 | 51 | 52 | 53 | 54 | 55 | 56 | 57 | 58 | 59 | 60 |
| 1 | | 61 | 62 | 63 | 64 | 65 | 66 | 67 | 68 | 69 | 70 | 71 | 72 | 73 | 74 | 75 | 76 | 77 | 78 | 79 | 80 | 81 | 82 | 83 | 84 | 85 | 86 | 87 | 88 | 89 | 90 |
| | | 91 | 92 | 93 | 94 | 95 | 96 | 97 | 98 | 99 | 100 | 101 | 102 | 103 | 104 | 105 | 106 | 107 | 108 | 109 | 110 | 111 | 112 | 113 | 114 | 115 | 116 | 117 | 118 | 119 | 120 |
| | | 121 | 122 | 123 | 124 | 125 | 126 | 127 | 128 | 129 | 130 | 131 | 132 | 133 | 134 | 135 | 136 | 137 | 138 | 139 | 140 | 141 | 142 | 143 | 144 | 145 | 146 | 147 | 148 | 149 | 150 |
| | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 |
| | | 31 | 32 | 33 | 34 | 35 | 36 | 37 | 38 | 39 | 40 | 41 | 42 | 43 | 44 | 45 | 46 | 47 | 48 | 49 | 50 | 51 | 52 | 53 | 54 | 55 | 56 | 57 | 58 | 59 | 60 |
| 2 | | 61 | 62 | 63 | 64 | 65 | 66 | 67 | 68 | 69 | 70 | 71 | 72 | 73 | 74 | 75 | 76 | 77 | 78 | 79 | 80 | 81 | 82 | 83 | 84 | 85 | 86 | 87 | 88 | 89 | 90 |
| | | 91 | 92 | 93 | 94 | 95 | 96 | 97 | 98 | 99 | 100 | 101 | 102 | 103 | 104 | 105 | 106 | 107 | 108 | 109 | 110 | 111 | 112 | 113 | 114 | 115 | 116 | 117 | 118 | 119 | 120 |
| | | 121 | 122 | 123 | 124 | 125 | 126 | 127 | 128 | 129 | 130 | 131 | 132 | 133 | 134 | 135 | 136 | 137 | 138 | 139 | 140 | 141 | 142 | 143 | 144 | 145 | 146 | 147 | 148 | 149 | 150 |
| | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 |
| | | 31 | 32 | 33 | 34 | 35 | 36 | 37 | 38 | 39 | 40 | 41 | 42 | 43 | 44 | 45 | 46 | 47 | 48 | 49 | 50 | 51 | 52 | 53 | 54 | 55 | 56 | 57 | 58 | 59 | 60 |
| 3 | | 61 | 62 | 63 | 64 | 65 | 66 | 67 | 68 | 69 | 70 | 71 | 72 | 73 | 74 | 75 | 76 | 77 | 78 | 79 | 80 | 81 | 82 | 83 | 84 | 85 | 86 | 87 | 88 | 89 | 90 |
| | | 91 | 92 | 93 | 94 | 95 | 96 | 97 | 98 | 99 | 100 | 101 | 102 | 103 | 104 | 105 | 106 | 107 | 108 | 109 | 110 | 111 | 112 | 113 | 114 | 115 | 116 | 117 | 118 | 119 | 120 |
| | | 121 | 122 | 123 | 124 | 125 | 126 | 127 | 128 | 129 | 130 | 131 | 132 | 133 | 134 | 135 | 136 | 137 | 138 | 139 | 140 | 141 | 142 | 143 | 144 | 145 | 146 | 147 | 148 | 149 | 150 |
| | | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 | 21 | 22 | 23 | 24 | 25 | 26 | 27 | 28 | 29 | 30 |
| 4 | | 31 | 32 | 33 | 34 | 35 | 36 | 37 | 38 | 39 | 40 | 41 | 42 | 43 | 44 | 45 | 46 | 47 | 48 | 49 | 50 | 51 | 52 | 53 | 54 | 55 | 56 | 57 | 58 | 59 | 60 |
| | | 61 | 62 | 63 | 64 | 65 | 66 | 67 | 68 | 69 | 70 | 71 | 72 | 73 | 74 | 75 | 76 | 77 | 78 | 79 | 80 | 81 | 82 | 83 | 84 | 85 | 86 | 87 | 88 | 89 | 90 |
| | | 91 | 92 | 93 | 94 | 95 | 96 | 97 | 98 | 99 | 100 | 101 | 102 | 103 | 104 | 105 | 106 | 107 | 108 | 109 | 110 | 111 | 112 | 113 | 114 | 115 | 116 | 117 | 118 | 119 | 120 |

ಮತ ಎಣಿಕೆ ಮೇಲ್ವಿಚಾರಕರ ಸಹಿ

# ನಮೂನೆ - XXI

{ನಿಯಮ 14ಎಕ್ಸ್(2)ಅನ್ನು ನೋಡಿ}

**---------------------------- ಸಹಕಾರ ಸಂಘದ ಆಡಳಿತ ಮಂಡಳಿಯ**

**ಚುನಾವಣೆಯ ಅಂತಿಮ ಫಲಿತಾಂಶದ ಹಾಳೆ**

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಟೇಬಲ್–1 | ಟೇಬಲ್–2 | ಟೇಬಲ್–3 | ಟೇಬಲ್–4 | ಟೇಬಲ್–5 | ಗಳಿಸಿದ ಒಟ್ಟು ಮೊತ್ತಗಳು |
|---|---|---|---|---|---|---|---|
| 1 | | | | | | | |
| 2 | | | | | | | |
| 3 | | | | | | | |
| 4 | | | | | | | |
| 5 | | | | | | | |
| 6 | | | | | | | |
| 7 | | | | | | | |
| 8 | | | | | | | |
| 9 | | | | | | | |
| 10 | | | | | | | |
| 11 | | | | | | | |

ಸ್ಥಳ: __________

ದಿನಾಂಕ : __________ **ರಿಟರ್ನಿಂಗ್ ಅಧಿಕಾರಿ**

* ಅನ್ವಯವಾಗದಿರುವುದನ್ನು ಹೊಡೆದು ಹಾಕಿ

---------------- ಸಹಕಾರ ಸಂಘ -------------- ತಾಲ್ಲೂಕು ------------- ಜಿಲ್ಲೆ

## ದಾಖಲಾದ ಮತ ಪತ್ರಗಳ ಲೆಕ್ಕ

| ಕ್ರ. ಸಂ. | ಮತದಾನ ಕೇಂದ್ರದ ಸಂಖ್ಯೆ | ಮತಪೆಟ್ಟಿಗೆಯಲ್ಲಿ ದಾಖಲಾದ ಒಟ್ಟು ಮೊತ್ತುಗಳು | ಸಿಂಧುವಾದ ಒಟ್ಟು ಮತ ಪತ್ರಗಳು | ತಿರಸ್ಕೃತವಾದ ಮತ ಪತ್ರಗಳು |
|---|---|---|---|---|
| **1** | | | | |
| **2** | | | | |
| **3** | | | | |
| **4** | | | | |
| **5** | | | | |
| **ಒಟ್ಟು ಮತಗಳು** | | | | |

ರಿಟರ್ನಿಂಗ್ ಅಧಿಕಾರಿ

ಸ್ಥಳ:

ದಿನಾಂಕ:

# ನಮೂನೆ - XXII

**(ನಿಯಮ 14ವೈ(2)ನ್ನು ನೋಡಿ)**

(ಸ್ಪರ್ಧೆ ಇದ್ದಾಗ ಉಪಯೋಗಿಸಬೇಕಾದುದು)

**ಚುನಾವಣಾ ಫಲಿತಾಂಶದ ಘೋಷಣೆ**

ದಿನಾಂಕ: ------------ ರಂದು ನಡೆದ ಆಡಳಿತ ಮಂಡಳಿ ಚುನಾವಣೆಯಲ್ಲಿ, ಸಾಮಾನ್ಯ, ಅನುಸೂಚಿತ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಹಾಗೂ ಮಹಿಳೆಯರಿಗೆ ಮೀಸಲಿರಿಸಿದ ಸ್ಥಾನಗಳು/ಮತಕ್ಷೇತ್ರದಿಂದ ------ ----------------- ಸಹಕಾರ ಸಂಘ -------------- ಇದರ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಗೆ ಸ್ಪರ್ಧಿಸಿ, ಈ ಕೆಳಕಂಡ ಅಭ್ಯರ್ಥಿಗಳು ಚುನಾವಣೆಯಲ್ಲಿ ಸಹಕಾರ ಸಂಘಗಳ ನಿಯಮಗಳು 1960, ನಿಯಮ 14ವೈ(2) ನಲ್ಲಿನ ಉಪಬಂಧಾನುಸಾರ ನಾನು ಈ ಕೆಳಕಂಡ ಅಭ್ಯರ್ಥಿಗಳು ಅವರ ಹೆಸರಿನ ಎದುರಿನಲ್ಲಿ ತೋರಿಸಿರುವ ಮತಸ್ಥಾನ/ಕ್ಷೇತ್ರದಿಂದ ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಘೋಷಿಸಿರುತ್ತೇನೆ.

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಅಭ್ಯರ್ಥಿಯ ವಿಳಾಸ | ಆಯ್ಕೆಗೊಂಡ ಸ್ಥಾನ/ಕ್ಷೇತ್ರ |
|---|---|---|---|
| 1 | | | ಸಾಮಾನ್ಯ |
| 2 | | | ಸಾಮಾನ್ಯ |
| 3 | | | ಸಾಮಾನ್ಯ |
| 4 | | | ಸಾಮಾನ್ಯ |
| 5 | | | ಸಾಮಾನ್ಯ |
| 6 | | | ಸಾಮಾನ್ಯ |
| 7 | | | ಸಾಮಾನ್ಯ |
| 8 | | | ಅನುಸೂಚಿತ ಜಾತಿ/ಪರಿಶಿಷ್ಟ ಪಂಗಡ |
| 9 | | | ಹಿಂದುಳಿದ ವರ್ಗ |
| 10 | | | ಮಹಿಳೆ |
| 11 | | | ಮಹಿಳೆ |

ಸಹಿ

(ಹೆಸರು)

**ರಿಟರ್ನಿಂಗ್ ಅಧಿಕಾರಿ**

ಸ್ಥಳ:

ದಿನಾಂಕ:

# ನಮೂನೆ - XXIII

**(ನಿಯಮ 14ಝುಡ್ ಅನ್ನು ನೋಡಿ)**

**ಚುನಾವಣಾ ಪ್ರಮಾಣ ಪತ್ರ**

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ನಿಯಮ 14ಝುಡ್ ನಲ್ಲಿ ಉಪಬಂಧಾನುಸಾರ ರಿಟರ್ನಿಂಗ್ ಅಧಿಕಾರಿಯಾದ ಆದ ನಾನು ಶ್ರೀ /ಶ್ರೀಮತಿ --------------- ಇವರು ------------ ದಿನಾಂಕದಂದು ನಡೆದ ಚುನಾವಣೆಯಲ್ಲಿ ------------------ ಸಹಕಾರ ಸಂಘ / ಬ್ಯಾಂಕಿನ ಆಡಳಿತ ಮಂಡಳಿಯ ನಿರ್ದೇಶಕರಾಗಿ ಸಾಮಾನ್ಯ/ಅನುಸೂಚಿತ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ/ಮಹಿಳೆಯ ಮೀಸಲಿರಿಸಿದ ಸ್ಥಾನದಿಂದ ಕ್ರಮಬದ್ದವಾಗಿ ಚುನಾಯಿತರಾಗಿದ್ದಾರೆಂದು ಮತ್ತು ಅದರ ಗುರುತಾಗಿ ಅವರಿಗೆ ಈ ಚುನಾವಣಾ ಪ್ರಮಾಣ ಪತ್ರವನ್ನು ಕೊಟ್ಟಿದ್ದೇನೆಂದು ಈ ಮೂಲಕ ಪ್ರಮಾಣೀಕರಿಸಿದ್ದೇನೆ.

**ರಿಟರ್ನಿಂಗ್ ಅಧಿಕಾರಿ**

ಸ್ಥಳ:

ದಿನಾಂಕ:

# ಅಧ್ಯಕ್ಷರ/ಉಪಾಧ್ಯಕ್ಷ ಚುನಾವಣಾ ನೋಟೀಸ್

[ನಿಯಮ 14(ಎಜಿ)]

----------------------- ಸಹಕಾರ ಸಂಘದ ಅಧ್ಯಕ್ಷರ/ಉಪಾಧ್ಯಕ್ಷರ ಸ್ಥಾನವನ್ನು ಭರ್ತಿ ಮಾಡಲು ಚುನಾವಣೆಯನ್ನು ------------------------ ಸ್ಥಳದಲ್ಲಿ ---------------------- ದಿನಾಂಕದಂದು ನಡೆಸಲಾಗುವುದೆಂದು ಈ ನೋಟೀಸು ನೀಡಲಾಗಿದೆ.

ಚುನಾವಣಾ ವೇಳಾಪಟ್ಟಿಯು ಈ ಕೆಳಗಿನಂತೆ ಇರತಕ್ಕದೆಂದೂ ನೋಟೀಸ್ ನೀಡಲಾಗಿದೆ.

| | | |
|---|---|---|
| I. | ಅಭ್ಯರ್ಥಿಗಳಿಂದ ನಾಮಪತ್ರಗಳ ಸಲ್ಲಿಸುವ ವೇಳೆ<br>[ನಿಯಮ 14(ಎಜಿ) (4)] | ಬೆಳಿಗ್ಗೆ 09 ರಿಂದ 11 ವರೆಗೆ |
| II. | ಆಡಳಿತ ಮಂಡಳಿಯ ಸಭೆ ಹಾಗೂ ನಾಮಪತ್ರಗಳ ಪರಿಶೀಲನೆ ಚುನಾವಣಾಧಿಕಾರಿಗಳಿಂದ<br>[ನಿಯಮ 14(ಎಜಿ) (7) | ಬೆಳಿಗ್ಗೆ 11.00 |
| III. | ಕ್ರಮಬದ್ಧವಾದ ಅಭ್ಯರ್ಥಿಗಳ ನಾಮಪತ್ರಗಳು ಹಾಗೂ ತಿರಸ್ಕೃತ ಅಭ್ಯರ್ಥಿಗಳ ನಾಮಪತ್ರಗಳ ಪಟ್ಟಿ ಪ್ರಕಟಣೆ<br>[ನಿಯಮ 14(ಎಜಿ) (7)] | ನಾಮಪತ್ರಗಳ ಪರಿಶೀಲನೆ ನಂತರ |
| IV. | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವುದು<br>[ನಿಯಮ 14(ಎಜಿ) (8)] | ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ ನಂತರ, 30 ನಿಮಿಷಗಳ ಕಾಲ |
| V. | ನಾಮಪತ್ರಗಳ ವಾಪಸ್ಸು ಪಡೆದ ಅಭ್ಯರ್ಥಿಗಳ ಹೆಸರು ಹಾಗೂ ಸ್ಪರ್ಧಾಕಣದಲ್ಲಿರುವ ಅಭ್ಯರ್ಥಿಗಳ ಹೆಸರು ಪ್ರಕಟಣೆ<br>[ನಿಯಮ 14(ಎಜಿ)(11) | ನಾಮಪತ್ರಗಳ ವಾಪಸ್ಸು ಪಡೆಯ ನೀಡದ ಅವಧಿಯ ನಂತರ |
| VI. | ಮತದಾನ<br>ನಿಯಮ 14(ಎಜಿ) (13)] | ಮಧ್ಯಾಹ್ನ 1.00 ಗಂಟೆಯಿಂದ |
| VII. | ಮತ ಎಣಿಕೆ ಹಾಗೂ ಫಲಿತಾಂಶ ಘೋಷಣೆ<br>[ನಿಯಮ 14(ಎಜಿ) (16] | ಮತದಾನದ ನಂತರ |

ಸ್ಥಳ: __________

ದಿನಾಂಕ : __________

**ರಿಟರ್ನಿಂಗ್ ಅಧಿಕಾರಿ**

**ಇತ್ತೀಚಿನ ಭಾವಚಿತ್ರ**

# ನಮೂನೆ - XXIV

**{ನಿಯಮ 14ಎಜಿ(4) ಅನ್ನು ನೋಡಿ}**

**.......................... ಸಹಕಾರ ಸಂಘದ ಪದಾಧಿಕಾರಿಗಳ ಚುನಾವಣೆಗೆ ನಾಮಪತ್ರ**

1) ಸ್ಪರ್ಧಿಸಲಾಗುವ ಪದ
2) ಅಭ್ಯರ್ಥಿಯ ಹೆಸರು
3) ಸದಸ್ಯರ ವಹಿಯಲ್ಲಿ ಕ್ರಮ ಸಂಖ್ಯೆ
4) ಅಭ್ಯರ್ಥಿಯ ತಂದೆಯ ಅಥವಾ ಗಂಡನ ಹೆಸರು
5) ಅಭ್ಯರ್ಥಿಯ ವಿಳಾಸ
6) ಸೂಚಕನ ಹೆಸರು
7) ಸದಸ್ಯರ ವಹಿಯಲ್ಲಿ ಸೂಚಕನ ಕ್ರಮ ಸಂಖ್ಯೆ
8) ಸೂಚಕನ ಸಹಿ
9) ಅನುಮೋದಕನ ಹೆಸರು
10) ಸದಸ್ಯರ ವಹಿಯಲ್ಲಿ ಅನುಮೋದಕನ ಕ್ರಮ ಸಂಖ್ಯೆ
11) ಅನುಮೋದಕನ ಸಹಿ

**ಅಭ್ಯರ್ಥಿಯ ಘೋಷಣೆ**

ನಾನು ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಇತರೆ ಯಾವುದೇ ಪದಾಧಿಕಾರಿ (ನಿರ್ದಿಷ್ಟಪಡಿಸುವುದು) ಪದಕ್ಕೆ ಚುನಾವಣೆಗಾಗಿ ಅಭ್ಯರ್ಥಿಯಾಗಿ ಸ್ಪರ್ಧಿಸಲು ಇಚ್ಛಿಸುತ್ತೇನೆ ಎಂದು ಮತ್ತು ನನ್ನ ತಿಳಿವಳಿಕೆ ಮತ್ತು ನಂಬಿಕೆ ಇರುವಷ್ಟರಮಟ್ಟಿಗೆ ಕೆಳಗಿನ ಮಾಹಿತಿ ಸತ್ಯವಾಗಿರುತ್ತದೆಂದು ಘೋಷಿಸುತ್ತೇನೆ.

ಎ) ನನ್ನ ವಯಸ್ಸು __________ ವರ್ಷಗಳು ತುಂಬಿದೆ.

ಬಿ) ನಾನು ಮಹಿಳೆಯಾಗಿದ್ದೇನೆ.

ಸಿ) ನಾನು _________________ ವರ್ಗ/ಜಾತಿ/ಪಂಗಡದ ಸದಸ್ಯನಾಗಿದ್ದು ಅದು ಹಿಂದುಳಿದ ವರ್ಗ/ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಎಂದು ಪರಿಗಣಿಸಲ್ಪಟ್ಟಿದೆ.

ಡಿ) ಸಹಕಾರ ಸಂಘದ ಆಡಳಿತ ಮಂಡಲಿಯ ನಿರ್ದೇಶಕನಾಗಿ ಚುನಾಯಿತನಾಗಲು ಕಾಯಿದೆಯಲ್ಲಿ, ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ಉಕ್ತವಾಗಿರುವ ಯಾವುದೇ ಅನರ್ಹತೆಗಳನ್ನು ಹೊಂದಿರುವುದಿಲ್ಲ.

ಇ) ಸಹಕಾರ ಸಂಘದ ಆಡಳಿತ ಮಂಡಲಿಯ ನಿರ್ದೇಶಕನಾಗಿ ಚುನಾಯಿತನಾಗಲು ಕಾಯಿದೆಯಲ್ಲಿ, ನಿಯಮಗಳಲ್ಲಿ ಅಥವಾ ಉಪವಿಧಿಗಳಲ್ಲಿ ಯುಕ್ತವಾಗಿರುವ ಅಗತ್ಯ ಅರ್ಹತೆಗಳನ್ನು ಹೊಂದಿರುತ್ತೇನೆ.

ಸ್ಥಳ: __________ **ಅಭ್ಯರ್ಥಿಯ ಸಹಿ**

ದಿನಾಂಕ : __________

---

(ರಿಟರ್ನಿಂಗ್ ಅಧಿಕಾರಿಯು ಭರ್ತಿ ಮಾಡಬೇಕಾದದ್ದು)

ಈ ನಾಮಪತ್ರವನ್ನು ಅಭ್ಯರ್ಥಿಯಾದ ಶ್ರೀ/ಶ್ರೀಮತಿ ಅವನು/ಅವಳು ದಿನಾಂಕ: ದಂದು ಘಂಟೆಗೆ ನನಗೆ ಸಲ್ಲಿಸಿದ್ದಾನೆ/ಳೆ.

ಸ್ಥಳ: __________

ದಿನಾಂಕ : __________ **ರಿಟರ್ನಿಂಗ್ ಅಧಿಕಾರಿ**

**ಕರ್ನಾಟಕ ಸರ್ಕಾರ**
**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಚುನಾವಣೆ ಸಂಭಾವನೆ/11/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 25.07.2013

**ವಿಷಯ:-** ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗೆ/ಪದಾಧಿಕಾರಿಗಳ ಆಯ್ಕೆಗೆ ನಡೆಯುವ ಚುನಾವಣೆಯಲ್ಲಿ ರಿಟರ್ನಿಂಗ್ ಆಫೀಸರ್ಸ್, ಮತಗಟ್ಟೆ ಅಧಿಕಾರಿಗಳಿಗೆ, ಇತರೆ ಚುನಾವಣಾ ಸಿಬ್ಬಂದಿಗಳಿಗೆ ಸಂಭಾವನೆ ನೀಡುವ ಕುರಿತು.

**ಉಲ್ಲೇಖ:-** ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ಆರ್‌ಎಸ್‌ಆರ್/ಚು.ಸಂಭಾವನೆ/187/2009-10 ದಿನಾಂಕ:20-1-2010

***

**ಪ್ರಸ್ತಾವನೆ:-**

ಸಹಕಾರ ಸಂಘಗಳ ಆಡಳಿತ ಮಂಡಳಿಗೆ ನಡೆಯುವ ಚುನಾವಣೆಯಲ್ಲಿ ಚುನಾವಣಾಧಿಕಾರಿಯಾಗಿ, ಮತಗಟ್ಟೆ ಅಧಿಕಾರಿ/ಇತರೆ ನೌಕರರಾಗಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಸಂಭಾವನೆ ಪಾವತಿಸುವ ಸಂಬಂಧ ಈ ಹಿಂದೆ ಸಹಕಾರ ಸಂಘಗಳ ನಿಬಂಧಕರು ಪಾವತಿಸಬೇಕಾದ ಸಂಭಾವನೆ, ಪ್ರವಾಸ ಭತ್ಯೆ ಹಾಗೂ ದಿನಭತ್ಯೆ ಕುರಿತಂತೆ ಸುತ್ತೋಲೆ ಹೊರಡಿಸಿದ್ದುದು ಸರಿಯಷ್ಟೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಕ್ಕೆ 2012 ರಲ್ಲಿ ಮಾಡಲಾದ ತಿದ್ದುಪಡಿಯನ್ವಯ ಪ್ರಕರಣ 39ಎ ರೀತ್ಯಾ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಪ್ರಕರಣ 26 ರ ರೀತ್ಯಾ ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆ ಹಾಗೂ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿಯಂತ್ರಣ ಹಾಗೂ ನಿರ್ದೇಶನದನ್ವಯ ನಡೆಸತಕ್ಕದ್ದಾಗಿದೆ. ಕರ್ನಾಟಕ ಸರ್ಕಾರವು ಸಹಕಾರ ಚುನಾವಣಾ ಆಯೋಗವನ್ನು

--- 2

ದಿನಾಂಕ:18-3-2013 ರ ಅಧಿಸೂಚನೆಯನ್ವಯ ರಚನೆ ಮಾಡಿದ್ದು, ಪ್ರಸ್ತುತ ಸಹಕಾರ ಚುನಾವಣಾ ಆಯೋಗವು ಸಹಕಾರ ಸಂಘಗಳ/ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಕಾರ್ಯಪ್ರವೃತ್ತವಾಗಿರುತ್ತದೆ.

ಸಹಕಾರ ಸಂಘಗಳ ಅಧಿನಿಯಮ ಪ್ರಕರಣ 39-ಬಿ ರೀತ್ಯಾ ಚುನಾವಣೆ ನಡೆಸುವ ಸಂಬಂಧ, ಪ್ರವಾಸಭತ್ಯೆ, ದಿನಭತ್ಯೆ ಮತ್ತು ಇತರೆ ಸಂಭಾವನೆಯನ್ನು ಸಂಬಂಧಿಸಿದ ಸಹಕಾರ ಸಂಘಗಳೇ ಭರಿಸತಕ್ಕದ್ದಾಗಿದೆ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 14ಎಎ ರೀತ್ಯಾ ಲೇಖನ ಸಾಮಗ್ರಿ, ಪ್ರಿಂಟಿಂಗ್, ಅಂಚೆವೆಚ್ಚ, ಜೆರಾಕ್ಸ್, ಫ್ಯಾಕ್ಸ್, ಮತಪೆಟ್ಟಿಗೆಗಳ ಬಾಡಿಗೆ, ಅಳಿಸಲಾಗದ ಶಾಯಿ, ಆರಕ್ಷಕ ಭದ್ರತಾ ವ್ಯವಸ್ಥೆ ಇನ್ನಿತರ ವೆಚ್ಚಗಳನ್ನು ಸಂಘವೇ ಭರಿಸತಕ್ಕದ್ದಾಗಿದೆ. ಮತದಾರರ ಪಟ್ಟಿ ಸಿದ್ಧಪಡಿಸುವಿಕೆ, ಪ್ರವಾಸ ಮತ್ತು ಇತರೆ ಭತ್ಯೆಗಳು, ರಿಟರ್ನಿಂಗ್ ಆಫೀಸರ್, ಸಹಾಯಕ ರಿಟರ್ನಿಂಗ್ ಆಫೀಸರ್, ಅಧ್ಯಕ್ಷಾಧಿಕಾರಿ ಮತ್ತು ಇನ್ನಿತರ ಮತದಾನ ಸಿಬ್ಬಂದಿಗೆ ಪಾವತಿಸಬೇಕಾದ ಸಂಭಾವನೆಯನ್ನು ಸಹ ಸಂಬಂಧಿಸಿದ ಸಂಘವೇ ಸಹಕಾರ ಚುನಾವಣಾ ಆಯೋಗವು ಆಗಾಗ್ಗೆ ಗೊತ್ತುಪಡಿಸುವಂತೆ ಭರಿಸತಕ್ಕದ್ದಾಗಿದೆ/ಪಾವತಿಸತಕ್ಕದ್ದಾಗಿದೆ.

ಸಹಕಾರ ಸಂಘಗಳ ನಿಬಂಧಕರು, ಈ ಹಿಂದೆ ಸಂಭಾವನೆ ನಿಗದಿಪಡಿಸಿ ಸುತ್ತೋಲೆ ಹೊರಡಿಸಿ ಈಗಾಗಲೇ 3 ವರ್ಷಗಳು ಗತಿಸಿರುವುದರಿಂದ, ಇತ್ತೀಚಿನ ಅಗತ್ಯ ವಸ್ತುಗಳ/ಗ್ರಾಹಕ ವಸ್ತುಗಳು/ಪ್ರಯಾಣದರ ಏರಿಕೆಯನ್ನು ಗಮನದಲ್ಲಿಟ್ಟುಕೊಂಡು ರಿಟರ್ನಿಂಗ್ ಆಫೀಸರ್, ಮತಗಟ್ಟೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನೀಡಬೇಕಾದ ಸಂಭಾವನೆಯನ್ನು ಪರಿಷ್ಕರಿಸುವ ಅವಶ್ಯಕತೆ ಇದೆ ಎಂಬುದನ್ನು ಆಯೋಗವು ಮನಗಂಡು, ಸಂಭಾವನೆಯನ್ನು ಪರಿಷ್ಕರಿಸುವ ಕುರಿತು ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಅದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಹಾಗೂ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 39ಬಿ ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14ಎಎ ರೀತ್ಯಾ ಸಹಕಾರ ಚುನಾವಣಾ ಆಯೋಗಕ್ಕೆ ಪ್ರದತ್ತವಾಗಿರುವ ಅಧಿಕಾರವನ್ನು

ಚಲಾಯಿಸಿ, ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯುಕ್ತರಾದ ಶ್ರೀ ಎನ್.ಸಿ. ಮುನಿಯಪ್ಪ ಆದ ನಾನು, ಸಹಕಾರ ಸಂಘಗಳ ಆಡಳಿತ ಮಂಡಳಿ/ಪದಾಧಿಕಾರಿಗಳ ಚುನಾವಣೆಯ ಸಂಬಂಧ ರಿಟರ್ನಿಂಗ್ ಆಫೀಸರ್, ಮತಗಟ್ಟೆ ಅಧಿಕಾರಿ/ಸಿಬ್ಬಂದಿಗಳಿಗೆ ನೀಡಬೇಕಾದ ಸಂಭಾವನೆಯನ್ನು ಈ ಕೆಳಗೆ ಕಂಡಂತೆ ಪರಿಷ್ಕರಿಸಿ ಆದೇಶಿಸಿರುತ್ತೇನೆ. ಈ ಆದೇಶವು ಕೂಡಲೇ ಜಾರಿಗೆ ಬಂದಿದ್ದು, ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

**ಸಂಭಾವನೆ ನಿಗದಿಪಡಿಸಿರುವ ಕುರಿತು ವಿವರ**

| ಕ್ರಸಂ | ವರ್ಗ | ರಿಟರ್ನಿಂಗ್ ಆಫೀಸರ್ | ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್ | ಅಧ್ಯಕ್ಷಾಧಿಕಾರಿ | ಮತಗಟ್ಟೆ ಅಧಿಕಾರಿ/ ಮತಎಣಿಕೆ ಅಧಿಕಾರಿ | ಸಹಾಯಕ 'ಡಿ'ಗ್ರೂಪ್ | ಪದಾಧಿಕಾರಿಗಳ ಚುನಾವಣೆ ಸಂಬಂಧ ಚುನಾವಣಾಧಿಕಾರಿಗೆ ಸಂಭಾವನೆ |
|---|---|---|---|---|---|---|---|
| 1) | ಪ್ರಾಥಮಿಕ ಸಹಕಾರ ಸಂಘಗಳು/ ಸೌಹಾರ್ದ ಸಹಕಾರಿಗಳು | 1200 | 800 | 500 | 400 | 300 | 600 |
| 2) | ತಾಲ್ಲೂಕು ಮಟ್ಟ/ತಾಲ್ಲೂಕಿಗಿಂತ ಕಡಿಮೆ ವ್ಯಾಪ್ತಿ ಸಹಕಾರ ಸಂಘಗಳು/ಸಹಕಾರಿಗಳು | 1500 | 1000 | 550 | 450 | 300 | 700 |
| 3) | ತಾಲ್ಲೂಕು ಮಟ್ಟ ಮೀರಿ ಜಿಲ್ಲಾ ಮಟ್ಟದವರೆಗಿನ ಸಹಕಾರ ಸಂಘಗಳು | 1800 | 1200 | 600 | 500 | 300 | 800 |
| 4) | ಜಿಲ್ಲಾ ಮಟ್ಟ ಮೀರಿ ರಾಜ್ಯ ಮಟ್ಟಕ್ಕಿಂತ ಕಡಿಮೆ ವ್ಯಾಪ್ತಿ ಹೊಂದಿರುವ ಸಂಘಗಳು | 2100 | 1400 | 650 | 550 | 300 | 900 |
| 5) | ರಾಜ್ಯ ಮಟ್ಟದ ಸಹಕಾರ ಸಂಘಗಳು | 2400 | 1600 | 700 | 600 | 300 | 1000 |

ಚುನಾವಣೆ ನಡೆಯುವ ದಿನಾಂಕದಂದು ಸಂಜೆ ಆರುಗಂಟೆಯ ನಂತರ ಚುನಾವಣಾ ಕಾರ್ಯವನ್ನು ನಿರ್ವಹಿಸುವ ಸಂದರ್ಭವಿದ್ದಲ್ಲಿ ಮತದಾನ ಸಿಬ್ಬಂದಿಗೆ ಶೇಕಡ 25 ರಂತೆ ಹೆಚ್ಚುವರಿ ಸಂಭಾವನೆಯನ್ನು ನೀಡತಕ್ಕದ್ದು. ಅಲ್ಲದೇ ಚುನಾವಣಾಧಿಕಾರಿಗಳು, ಮತಗಟ್ಟೆ ಅಧಿಕಾರಿಗಳು ಹಾಗೂ

ಸಿಬ್ಬಂದಿಗಳು ಕೆ.ಸಿ.ಎಸ್.ಆರ್. ರೀತ್ಯಾ ಪ್ರವಾಸಭತ್ಯೆ ಮತ್ತು ದಿನಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ಚುನಾವಣಾ ಕೆಲಸ ನಿರ್ವಹಿಸುವ ಸಿಬ್ಬಂದಿಗೆ ಸಂಭಾವನೆ, ಪ್ರವಾಸಭತ್ಯೆ ಹಾಗೂ ದಿನಭತ್ಯೆಯನ್ನು ಸಂಬಂಧಿಸಿದ ಸಹಕಾರ ಸಂಘವೇ ಭರಿಸತಕ್ಕದ್ದಾಗಿದೆ.

ಈ ಆದೇಶದ ಮೂಲಕ ನಿಗದಿಗೊಳಿಸಿರುವ ಸಂಭಾವನೆ ದರವು ಈ ಕೂಡಲೇ ಜಾರಿಗೆ ಬರತಕ್ಕದ್ದು.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**

**ಇವರಿಗೆ:-**

1. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿಆಸ್ಕರ್ ರಸ್ತೆ, ಬೆಂಗಳೂರು
2. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು / ಮೈಸೂರು / ಬೆಳಗಾವಿ / ಗುಲ್ಬರ್ಗಾ ಪ್ರಾಂತ.
3. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ
4. ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಸೂಕ್ತ ಕ್ರಮಕ್ಕಾಗಿ
5. ಆದೇಶ ಕಡತ/ರಕ್ಷಾ ಕಡತ

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/17/ನೀತಿಸಂಹಿತೆ/2013–14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು–560004 ದಿನಾಂಕ: 03.08.2013

**ವಿಷಯ:–** ಸಹಕಾರ ಸಂಸ್ಥೆಗಳ / ಸೌಹಾರ್ಧ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆ ಸಂಬಂಧ ಮಾದರಿ ನೀತಿ ಸಂಹಿತೆ ಜಾರಿಗೊಳಿಸುವ ಕುರಿತು.

***

1. ಅ) ಈ ಸಂಹಿತೆಯು ಸಹಕಾರ ಸಂಸ್ಥೆಗಳ / ಸೌಹಾರ್ಧ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆಗಳ ಸಂಬಂಧ ನೀತಿ ಸಂಹಿತೆಯೆಂದು ಕರೆಯಲ್ಪಡುವುದು. ಇದು ಸಹಕಾರ ಸಂಘಗಳ ಚುನಾವಣೆ ಸಂಬಂಧ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ನಡವಳಿ ಅಂತ್ಯಗೊಳ್ಳುವ ವರೆಗೆ ಜಾರಿಯಲ್ಲಿರುತ್ತದೆ.

   ಆ) ಈ ನೀತಿ ಸಂಹಿತೆಯು ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿ ಚುನಾವಣೆಗಳಿಗೆ ಸಂಬಂಧಿಸಿದಂತೆ, ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಗೆ, ಚುನಾವಣೆ ನಡೆಸಬೇಕಾದ ಸಹಕಾರ ಸಂಘಗಳ ಹಾಲಿ ಅಧಿಕಾರದಲ್ಲಿರುವ ಆಡಳಿತ ಸಮಿತಿ ಸದಸ್ಯರಿಗೆ, ಸಚಿವರುಗಳಿಗೆ, ಸರ್ಕಾರಿ ನೌಕರರು, ಸ್ಥಳೀಯ ಸಂಸ್ಥೆಗಳ / ಸಹಕಾರಿ ಸಂಸ್ಥೆಗಳ ನೌಕರರು ಮತ್ತು ಸಾರ್ವಜನಿಕ ಸೇವೆಯಲ್ಲಿರುವ ಇತರೆ ನೌಕರರುಗಳಿಗೆ ಅನ್ವಯಿಸುತ್ತದೆ.

2. ನೀತಿ ಸಂಹಿತೆಯು ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸುವ ದಿನಾಂಕ ಅಥವಾ ರಾಜ್ಯ ಸಹಕಾರ ಚುನಾವಣಾ ಆಯೋಗ ನಿಗಧಿಪಡಿಸುವ ದಿನಾಂಕದಿಂದ ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಅಥವಾ ರಾಜ್ಯ ಸಹಕಾರ ಚುನಾವಣಾ ಆಯೋಗವು ಪ್ರಕಟಿಸಿದ ದಿನಾಂಕದವರೆಗೆ ಜಾರಿಯಲ್ಲಿರುತ್ತದೆ.

3. ಈ ಸಂಹಿತೆಯಲ್ಲಿ ಉಪಯೋಗಿಸುವ ಪದಗಳು ಸೂಕ್ತ ಶಬ್ದಪ್ರಯೋಗಗಳು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಮತ್ತು ಕರ್ನಾಟಕ ಸೌಹಾರ್ಧ ಸಹಕಾರಿ ಅಧಿನಿಯಮ 1997, ಹಾಗೂ ಅವುಗಳ ಅಡಿಯಲ್ಲಿ ರಚಿತವಾದ ನಿಯಮಗಳಲ್ಲಿ ಹೊಂದಿರುವ ಅರ್ಥವನ್ನೇ ಹೊಂದಿರುತ್ತದೆ.

4. ಸಹಕಾರ ಸಂಘಗಳು ಪ್ರಜಾಪ್ರಭುತ್ವ ತತ್ವ ಹೊಂದಿರುವ ಪಕ್ಷಾತೀತ / ರಾಜಕೀಯೇತರ ಸಂಸ್ಥೆಗಳಾಗಿದ್ದು, ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯು ವಿವಿಧ ಜಾತಿ ಅಥವಾ ಸಮುದಾಯಗಳ ಮಧ್ಯೆ ಅಥವಾ ಮತೀಯ ಅಥವಾ ಭಾಷಾ ಸಮೂಹಗಳ ಮಧ್ಯೆ ಇರುವ ವೈಮನಸ್ಯತ್ವ /ಭಿನ್ನಾಭಿಪ್ರಾಯ ಕೆರಳಿಸುವ ಅಥವಾ ಪರಸ್ಪರ ದ್ವೇಷ ಹುಟ್ಟಿಸುವ ಅಥವಾ ಉದ್ವೇಗಕ್ಕೆ ಕಾರಣವಾಗುವಂತಹ ಯಾವುದೇ ಚಟುವಟಿಕೆಯಲ್ಲಿ ತೊಡಗಬಾರದು.

5. ಸಂಘಗಳ ಹಾಲಿ ಇರುವ / ಅವಧಿ ಮುಗಿಯಲ್ಲಿರುವ ಆಡಳಿತ ಸಮಿತಿಯವರ ಕಾರ್ಯನೀತಿ, ಕಾರ್ಯಕ್ರಮಗಳನ್ನು ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಟೀಕಿಸುವಾಗ ಅವರ ಸಾರ್ವಜನಿಕ ಚಟುವಟಿಕೆಗಳಿಗೆ ಸಂಬಂಧಪಟ್ಟಿರದ ಅವರ ಖಾಸಗಿ ಜೀವನದ ಯಾವುದೇ ಅಂಶಗಳನ್ನು ಕುರಿತು ಟೀಕೆ ಮಾಡತಕ್ಕದ್ದಲ್ಲ. ರುಜುವಾತಾಗದ ಆಪಾದನೆಗಳ ಆಧಾರದ ಮೇಲೆ ಅಥವಾ ವಿರೂಪಗೊಳಿಸುವ ಸಂಗತಿಗಳ ಆಧಾರದ ಮೇಲೆ ಟೀಕಿಸಬಾರದು, ಅವರ ನಿವಾಸಗಳ ಮುಂದೆ ಪ್ರದರ್ಶನಗಳನ್ನಾಗಲೀ /ಪಿಕೆಟಿಂಗ್ ಆಗಲಿ ನಡೆಸತಕ್ಕದ್ದಲ್ಲ.

6. ಮತಗಳಿಕೆಗಾಗಿ ಜಾತಿ, ಮತ ಮತ್ತು ಕೋಮುಭಾವನೆಗಳ ಆಧಾರದ ಮೇಲೆ ಮನವಿ ಮಾಡತಕ್ಕದ್ದಲ್ಲ, ದೇವಾಲಯ, ಮಸೀದಿ ಚರ್ಚ್ ಅಥವಾ ಇತರ ಪೂಜಾ ಸ್ಥಳಗಳನ್ನು ಚುನಾವಣಾ ಪ್ರಚಾರ ವೇದಿಕೆಗಳಿಗಾಗಿ ಬಳಸಬಾರದು.

7. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 39ಸಿ ನಲ್ಲಿ ಭ್ರಷ್ಟಾಚಾರಗಳ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಈ ಮುಂದಿನವುಗಳನ್ನು ಭ್ರಷ್ಟಚಾರಗಳೆಂದು ಪರಿಗಣಿಸತಕ್ಕದ್ದು – ಅಂದರೆ ಅ) ತತ್ಕಾಲದಲ್ಲಿ ಜಾರಿಯಲ್ಲಿರುವ ಜನತಾ ಪ್ರಾತಿನಿಧ್ಯ ಅಧಿನಿಯಮ 1951 (1951 ರ ಕೇಂದ್ರ ಅಧಿನಿಯಮ 43) ಪ್ರಕರಣ 123 ರ ಖಂಡ (1) ರಲ್ಲಿ ಪರಿಭಾಷಿಸಿರುವಂತೆ ಲಂಚಗೂಳಿತನ,

8. ಆ) ತತ್ಕಾಲದಲ್ಲಿ ಜಾರಿಯಲ್ಲಿರುವ, ಸದರಿ ಪ್ರಕರಣದ ಖಂಡ (2) ರಲ್ಲಿ ಪರಿಭಾಷಿಸಿದಂತೆ ಅನುಚಿತ ಪ್ರಭಾವ ಬೀರುವುದು.

9. ಮತಗಳಿಕೆಗಾಗಿ ಅಭ್ಯರ್ಥಿ ಪರವಾಗಿ ಯಾವುದೇ ನಿಕಾಯ ಅಥವಾ ವ್ಯಕ್ತಿಗಳು ಧಾರ್ಮಿಕ ಚಿಹ್ನೆಗಳನ್ನು ಧರಿಸತಕ್ಕದ್ದಲ್ಲ.

10. ಯಾವುದೇ ಅಭ್ಯರ್ಥಿ/ ಅಭ್ಯರ್ಥಿ ಪರವಾಗಿ ಯಾವುದೇ ನಿಕಾಯ ಅಥವಾ ವ್ಯಕ್ತಿಗಳು ಪ್ರಕಟಿಸುವ ಪೋಸ್ಟರ್‌ಗಳು ಪತ್ರಿಕೆ, ಪ್ರಕಟಣಾ ಪತ್ರ, ಸುತ್ತೋಲೆ ಮತ್ತು ಜಾಹಿರಾತುಗಳಲ್ಲಿ ಮುದ್ರಕರು ಮತ್ತು ಪ್ರಕಟಿಸುವವರ ಹೆಸರು/ ವಿಳಾಸವನ್ನು ತಪ್ಪದೇ ನಮೂದಿಸತಕ್ಕದ್ದು.

11. ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳ ಅಥವಾ ಇತರೆ ಸಂಸ್ಥೆಗಳ ಆಡಳಿತ ವರ್ಗಕ್ಕೆ ಸಂಬಂಧಿಸಿದ ಹೊಣೆಯನ್ನು ಹೊತ್ತಿರುವ ಯಾವುದೇ ಅಭ್ಯರ್ಥಿಯು /ಸ್ಪರ್ಧಿಯು ಅಂತಹ ಸಂಸ್ಥೆಗಳಿಗೆ ಸೇರಿದ ಕಟ್ಟಡ, ಮೂಲ ಸೌಕರ್ಯಗಳು, ಸಿಬ್ಬಂದಿ, ನಿಧಿ, ವಾಹನಗಳು ಅಥವಾ ಇನ್ನಿತರ ಸಾಮಗ್ರಿಗಳನ್ನು ತಮ್ಮ ಚುನಾವಣಾ ಸಾಧನೆಗಾಗಿ ಬಳಸಿಕೊಳ್ಳುವಂತಿಲ್ಲ.

12. ಯಾವುದೇ ವ್ಯಕ್ತಿಗೆ ಸೇರಿದ ಭೂಮಿ, ಕಟ್ಟಡ, ಕಾಂಪೌಂಡ್‌ಗಳಲ್ಲಿ ಅಥವಾ ಯಾವುದೇ ಸಾರ್ವಜನಿಕ ಆಸ್ತಿಯನ್ನು ಆ ವ್ಯಕ್ತಿಯ ಸಕ್ಷಮ ಪ್ರಾಧಿಕಾರದ ಲಿಖಿತ ಅನುಮತಿ ಪಡೆಯದೆ ಬಾವುಟ ನಿಲ್ಲಿಸಲು, ಪತಾಕೆಗಳನ್ನು ಕಟ್ಟಲು ಭಿತ್ತಿಪತ್ರಗಳನ್ನು ಅಂಟಿಸಲು, ಘೋಷಣೆ ಮುಂತಾದವುಗಳನ್ನು ಬರೆಯಲು ಯಾವುದೇ ಅಭ್ಯರ್ಥಿಯು ತನ್ನ ಅನುಯಾಯಿಗಳಿಗೆ ಅನುಮತಿ ನೀಡತಕ್ಕದ್ದಲ್ಲ, ಈ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಅನುಮತಿ ಪತ್ರದ ಪ್ರತಿಯನ್ನು ತಕ್ಷಣವೇ ಜಿಲ್ಲಾ ಚುನಾವಣಾಧಿಕಾರಿಗಳು ಅಥವಾ ರಿಟರ್ನಿಂಗ್ ಅಧಿಕಾರಿಗೆ ಸಲ್ಲಿಸತಕ್ಕದ್ದು.

13. ಯಾವುದೇ ಅಭ್ಯರ್ಥಿಯಾಗಲೀ ಸಕ್ಷಮ ಪೋಲೀಸ್ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೇ ಚುನಾವಣೆ ಪ್ರಚಾರದ ಸಂಬಂಧ, ಸದಸ್ಯರ ಸಭೆಯನ್ನಾಗಲೀ ಅಥವಾ ಮೆರವಣಿಗೆಯನ್ನಾಗಲೀ ನಡೆಸತಕ್ಕದ್ದಲ್ಲ. ಸಭೆ ನಡೆಯುವ ಸ್ಥಳ, ವೇಳೆಯನ್ನು ಮುಂಚಿತವಾಗಿ ಪೋಲೀಸ್ ಅಧಿಕಾರಿಗೆ ತಿಳಿಸತಕ್ಕದ್ದು, ಸಭೆ ನಡೆಸಲು ಉದ್ದೇಶಿಸಿರುವ ಪ್ರದೇಶದಲ್ಲಿ ಯಾವುದೇ ಪ್ರತಿಬಂಧಕಾಜ್ಞೆ ಅಥವಾ ನಿಷೇದಾಜ್ಞೆಯು ಜಾರಿಯಲ್ಲಿದಿಯೆ ಅಥವಾ ಇಲ್ಲವೇ ಎಂಬ ಬಗ್ಗೆ ಅಭ್ಯರ್ಥಿಯು ಮುಂಚಿತವಾಗಿ ವಿಚಾರಿಸಿ ತಿಳಿದುಕೊಳ್ಳತಕ್ಕದ್ದು, ಅಂತಹ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

14. ನಡೆಯಲ್ಲಿರುವ ಸಭೆಗೆ ಧ್ವನಿವರ್ಧಕಗಳ ಬಳಕೆ ಅಥವಾ ಇತರೆ ಯಾವುದೇ ಸೌಕರ್ಯಕ್ಕಾಗಿ ಅನುಮತಿಯನ್ನು ಪಡೆಯಬೇಕಾಗಿದ್ದಲ್ಲಿ ಅಭ್ಯರ್ಥಿಯು ಸಂಬಂಧಪಟ್ಟ ಅಧಿಕಾರಿಗಳಿಗೆ ಮುಂಚಿತವಾಗಿ ಅರ್ಜಿ ಸಲ್ಲಿಸಿ ಅನುಮತಿ / ಪರವಾನಗಿಯನ್ನು ಪಡೆದುಕೊಳ್ಳತಕ್ಕದ್ದು.

15. ಮತದಾನದ ದಿನ ಶಾಂತಿಯುತ ಮತ್ತು ಕ್ರಮಬದ್ಧ ಮತದಾನ ಪಡೆಯುವುದನ್ನು ಖಚಿತಪಡಿಸಿಕೊಳ್ಳಲು ಚುನಾವಣಾ ಕರ್ತವ್ಯದಲ್ಲಿ ನಿರತರಾಗಿರುವ ಅಧಿಕಾರಿಗಳೊಂದಿಗೆ ಅಭ್ಯರ್ಥಿಗಳು ಸಹಕರಿಸತಕ್ಕದ್ದು, ಯಾವುದೇ ಕಿರುಕುಳ ಅಥವಾ ಅಡಚಣೆ ಇಲ್ಲದೆ ಮತದಾರರು ಪೂರ್ಣ ಮುಕ್ತ ವಾತಾವರಣದಲ್ಲಿ ಅವರ ಮತದಾನದ ಹಕ್ಕನ್ನು ಚಲಾಯಿಸಲು ಸಂಪೂರ್ಣವಾಗಿ ಸಹಕರಿಸತಕ್ಕದ್ದು.

16. ಮತಗಟ್ಟೆ ಮತ್ತು ಮತಗಟ್ಟೆ ಸಮೀಪದ ಸ್ಥಳಗಳಲ್ಲಿ ಶಿಸ್ತಿನಿಂದ ನಡೆದುಕೊಳ್ಳತಕ್ಕದ್ದು ಮತ್ತು ಚುನಾವಣಾ ಕಾರ್ಯದಲ್ಲಿ ತೊಡಗಿರುವ ಅಧಿಕಾರಿಗಳಿಗೆ ಯಾವುದೇ ಅಡೆತಡೆಗಳನ್ನು ಉಂಟು ಮಾಡತಕ್ಕದ್ದಲ್ಲ.

17. ಮತದಾರರಿಗೆ ಅಭ್ಯರ್ಥಿಗಳು ಅನಧಿಕೃತವಾಗಿ ನೀಡುವ ಗುರುತಿನ ಚೀಟಿಗಳು ಖಾಲಿ ಹಾಳೆಯಲ್ಲಿರುವಂತೆ ಮತ್ತು ಅದರಲ್ಲಿ ಯಾವುದೇ ರೀತಿಯ ಚಿಹ್ನೆ ಇರದ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.

18. ಮತದಾನದ ದಿನ ಮತ್ತು ಅದಕ್ಕೆ ಮುಂಚಿತವಾಗಿ 24 ಗಂಟೆಗಳ ಅವಧಿಯಲ್ಲಿ ಮದ್ಯವನ್ನು ಸರಬರಾಜು ಮಾಡುವುದಾಗಲಿ ಅಥವಾ ಹಂಚತಕ್ಕದ್ದಾಗಲಿ ಮಾಡಬಾರದು.

1.. ಮತದಾರರನ್ನು ಹೊರತುಪಡಿಸಿ ರಾಜ್ಯ ಸಹಕಾರ ಚುನಾವಣಾ ಆಯೋಗದಿಂದ ಅಥವಾ ಜಿಲ್ಲಾ ಚುನಾವಣಾಧಿಕಾರಿಯಿಂದ ಸಿಂಧುವಾದ ಪಾಸನ್ನು ಹೊಂದಿರದ ಯಾವುದೇ ವ್ಯಕ್ತಿಯು ಮತಗಟ್ಟೆಯನ್ನು ಪ್ರವೇಶಿಸತಕ್ಕದ್ದಲ್ಲ.

20. ಅಧಿಕಾರದಲ್ಲಿರುವ ಸಹಕಾರ ಸಂಘದ ಆಡಳಿತ ಸಮಿತಿಯು, ಸಚಿವರುಗಳು ಅವರ ಅಧಿಕೃತ ಭೇಟಿಯನ್ನು ಚುನಾವಣಾ ಪ್ರಚಾರ ಕಾರ್ಯಗಳೊಂದಿಗೆ ಸೇರಿಸಬಾರದು ಮತ್ತು ಸರ್ಕಾರಿ ಅಥವಾ ಸಂಘದ ಸಿಬ್ಬಂದಿಯನ್ನು ಚುನಾವಣಾ ಪ್ರಚಾರಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

21. ಅಭ್ಯರ್ಥಿಗಳು ಸಹಕಾರಿ ಸಂಸ್ಥೆಗಳ /ಸರ್ಕಾರದ/ ಸ್ಥಳೀಯ ಸಂಸ್ಥೆಗಳ /ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಸಂಸ್ಥೆಗಳ ವಾಹನಗಳನ್ನು ಯಾವುದೇ ರೀತಿಯ ಚುನಾವಣಾ ಪ್ರಚಾರಕ್ಕಾಗಿ ಬಳಸತಕ್ಕದ್ದಲ್ಲ.

22. ಸಂಘದ ನಿಧಿಯಿಂದ ಆಡಳಿತದಲ್ಲಿರುವ ಸಮಿತಿಯ ಸದಸ್ಯರು ಅಭ್ಯರ್ಥಿಗಳಿರುವವರು ಸಮಾಚಾರ ಪಟ್ಟಿಗಳಲ್ಲಿ / ಇತರೆ ಮಾಧ್ಯಮಗಳ ಮೂಲಕ ಜಾಹಿರಾತು ನೀಡುವುದನ್ನು, ತಮ್ಮ ಅವಧಿಯಲ್ಲಿನ ಪ್ರಗತಿಯನ್ನು ವೃದ್ಧಿಸಿಕೊಳ್ಳುವ ದೃಷ್ಟಿಯಿಂದ ತನ್ನ ಸಾಧನೆಯನ್ನು ಪ್ರಕಟಿಸುವುದನ್ನು ಮಾಡತಕ್ಕದ್ದಲ್ಲ ಇದನ್ನು ಕಟ್ಟುನಿಟ್ಟಾಗಿ ತಡೆಯತಕ್ಕದ್ದು.

23. ಸಂಘದ ಹಾಲಿ ಅಧಿಕಾರದಲ್ಲಿರುವ ಆಡಳಿತ ಸಮಿತಿಯವರು ಯಾವುದೇ ರೀತಿಯ ವಿಶೇಷ ಯೋಜನೆಗಳ ಅಥವಾ ಕಾರ್ಯಕ್ರಮಗಳು ಮುಂತಾದವುಗಳ ಬಗ್ಗೆ ಆಸ್ತಿಭಾರ ಹಾಕತಕ್ಕದ್ದಲ್ಲ, ಹೊಸ ಕಟ್ಟಡ ನಿರ್ಮಿಸಿದ್ದಲ್ಲಿ ಉದ್ಘಾಟನೆ ಕಾರ್ಯಕ್ರಮ ನಿಗಧಿಪಡಿಸತಕ್ಕದ್ದಲ್ಲ. ಹೊಸ ಕಟ್ಟಡ ಕಟ್ಟಿಸುವ ಸಂಬಂಧ ಶಂಕುಸ್ಥಾಪನೆ ಸಮಾರಂಭಗಳನ್ನು ನೆರವೇರಿಸತಕ್ಕದ್ದಲ್ಲ.

24. ಸಹಕಾರ ಸಂಘದ ಹಾಲಿ ಆಡಳಿತ ಸಮಿತಿಯವರು ಯಾವುದೇ ತಾತ್ಕಾಲಿಕ ನೇಮಕಾತಿಗಳನ್ನು ಮಾಡತಕ್ಕದ್ದಲ್ಲ.

25. ಸಂಘದ ವೆಚ್ಚದಲ್ಲಿ ಮತದಾರರ ಮನಸ್ಸಿನ ಮೇಲೆ ಪರಿಣಾಮ ಬೀರುವಂತಹ ಯಾವುದೇ ಕಾರ್ಯವನ್ನು ಮಾಡತಕ್ಕದ್ದಲ್ಲ. ಸಾಲೇತರ ಸಂಘಗಳು ಗ್ರಾಹಕರ ವಸ್ತುಗಳು / ಸೇವೆ ನೀಡುವ ಸಂಬಂಧ ಮತದಾರರನ್ನು ಆಕರ್ಷಿಸಲು ವಿಶೇಷ ರಿಯಾಯ್ತಿ ಪ್ರಕಟಿಸತಕ್ಕದ್ದಲ್ಲ.

26. ಸಚಿವರುಗಳು/ ಶಾಸಕರುಗಳು / ಸ್ಥಳೀಯ ಸಂಸ್ಥೆಯ ಸದಸ್ಯರುಗಳು ಅವರ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿಯಾಗಿ ಅಥವಾ ಮತದಾರರಾಗಿ ಪ್ರವೇಶಿಸುವುದನ್ನು ಹೊರತುಪಡಿಸಿ ಯಾವುದೇ ಮತಗಟ್ಟೆ ಅಥವಾ ಮತ ಎಣಿಕೆ ಸ್ಥಳಕ್ಕೆ ಹೋಗತಕ್ಕದ್ದಲ್ಲ.

27. ಸಾಲ ನೀಡುವ ಸಹಕಾರ ಸಂಘಗಳು ಯಾವುದೇ ಸಾಲಮೇಳ ನಡೆಸತಕ್ಕದ್ದಲ್ಲ / ವಿಶೇಷ ರಿಯಾಯ್ತಿಗಳನ್ನು ಪ್ರಕಟಿಸತಕ್ಕದ್ದಲ್ಲ.

ಈ ಮೇಲ್ಕಂಡ ಸಂಹಿತೆಯನ್ನು ಉಲ್ಲಂಘಿಸಿದವರ ವಿರುದ್ಧ ಆಯೋಗಕ್ಕೆ ಮಾಹಿತಿಯನ್ನು ನೀಡಿ ಸಕ್ಷಮ ನ್ಯಾಯಾಲಯಗಳಲ್ಲಿ ಅಥವಾ ಪ್ರಾಧಿಕಾರದ ಮುಂದೆ ಕಾನೂನು ಕ್ರಮ ಜರುಗಿಸಲು ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು, ರಿಟರ್ನಿಂಗ್ ಆಫೀಸರ್ / ಸಹಾಯಕ ರಿಟರ್ನಿಂಗ್ ಆಫೀಸರ್‌ಗಳಿಗೆ ಅಧಿಕಾರ ನೀಡಿದೆ.

## ಸರ್ಕಾರಿ ನೌಕರರು

28. ಚುನಾವಣೆಗಳಲ್ಲಿ ಸರ್ಕಾರಿ ನೌಕರರು ಸಂಪೂರ್ಣವಾಗಿ ನಿಷ್ಪಕ್ಷಪಾತವಾಗಿ ಇರತಕ್ಕದ್ದು ಮತ್ತು ಸ್ಪರ್ಧೆಯಲ್ಲಿರುವ ಯಾವುದೇ ಅಭ್ಯರ್ಥಿ ಪರವಾಗಿ ಅಥವಾ ವಿರೋಧವಾಗಿ ಪ್ರಚಾರ ಕಾರ್ಯದಲ್ಲಿ ತೊಡಗತಕ್ಕದ್ದಲ್ಲ.

29. ಸರ್ಕಾರಿ ಸಿಬ್ಬಂದಿ ಅಥವಾ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿ ಯಾವುದೇ ಅಭ್ಯರ್ಥಿ ಪರವಾಗಿ ಪ್ರಚಾರ ಮಾಡತಕ್ಕದ್ದಲ್ಲ, ಅವರ ಪ್ರಾಮಾಣಿಕವಾಗಿ ಹಾಗೂ ನಿಷ್ಪಕ್ಷಪಾತವಾಗಿರಬೇಕಲ್ಲದೆ ಹಾಗೆ ಇರುವುದಾಗಿ ಸಾರ್ವಜನಿಕರಿಗೆ ತೋರಬೇಕು.

ಮೇಲಿನ ಕಂಡಿಕೆಗಳು ಸ್ಥೂಲವಾದ ಮಾರ್ಗದರ್ಶನಗಳನ್ನು ಮಾತ್ರ ಒಳಗೊಂಡಿರುತ್ತದೆ. ಚುನಾವಣೆಗಳನ್ನು ಪಾರದರ್ಶಕವಾಗಿ ನಿಷ್ಪಕ್ಷಪಾತವಾಗಿ ನಡೆಸುವ ದೃಷ್ಟಿಯಿಂದ ನೀತಿ ಸಂಹಿತೆಯ ಕಟ್ಟುನಿಟ್ಟಾದ ಪಾಲನೆಗಾಗಿ ಅವಶ್ಯಕವೆನಿಸಿದಲ್ಲಿ ರಾಜ್ಯ ಸಹಕಾರ ಚುನಾವಣಾ ಆಯೋಗದಿಂದ ಆದೇಶಗಳನ್ನು, ನಿರ್ದೇಶನಗಳನ್ನು ಮತ್ತು ಸೂಚನೆಗಳನ್ನು ನೀಡಲಾಗುವುದು

(ಎನ್.ಸಿ. ಮುನಿಯಪ್ಪ)
ಆಯುಕ್ತರು

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/17/ನೀತಿಸಂಹಿತೆ/2013–14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು–560004 ದಿನಾಂಕ:21.09.2013

**ವಿಷಯ:–** ಸಹಕಾರ ಸಂಸ್ಥೆಗಳ /ಸೌಹಾರ್ಧ ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆ ಸಂಬಂಧ ಮಾದರಿ ನೀತಿ ಸಂಹಿತೆ ಜಾರಿಗೊಳಿಸುವ ಕುರಿತು.

**ಉಲ್ಲೇಖ:–** ಆಯೋಗದ ಸಮಸಂಖ್ಯೆ ಪತ್ರ ದಿನಾಂಕ:03.08.2013 ಮಾದರಿ ನೀತಿ ಸಂಹಿತೆ ಪ್ರಕಟಣೆ.

***

ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆಗಳ ಸಂಬಂಧ ರಾಜ್ಯ ಸಹಕಾರ ಚುನಾವಣಾ ಆಯೋಗವು ಈಗಾಗಲೇ ಉಲ್ಲೇಖಿತ ಪತ್ರದಂತೆ ನೀತಿ ಸಂಹಿತೆಯನ್ನು ಪ್ರಕಟಿಸಿದ್ದು, ಇದು ಸಹಕಾರ ಸಂಘಗಳ ಚುನಾವಣೆ ಸಂಬಂಧ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣಾ ನಡವಳಿ ಅಂತ್ಯಗೊಳ್ಳುವವರೆಗೆ ಜಾರಿಯಲ್ಲಿರುವುದಾಗಿ ನಿರ್ದೇಶಿಸಲಾಗಿದೆ.

ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ಆಡಳಿತ ಮಂಡಳಿ ಚುನಾವಣೆಗೆ ಸಂಬಂಧಿಸಿದಂತೆ ಉಲ್ಲೇಖದಲ್ಲಿ ನೀಡಿರುವ ನೀತಿ ಸಂಹಿತೆ ಜತೆಗೆ ಈ ಕೆಳಕಂಡಂತೆ ಹೆಚ್ಚುವರಿ ವಿಷಯಗಳನ್ನು ಸೇರ್ಪಡೆ ಮಾಡಿದ್ದು, ಈ ಅಂಶಗಳು ಚುನಾವಣೆ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ನಡವಳಿ ಅಂತ್ಯಗೊಳ್ಳುವವರೆಗೆ ಜಾರಿಯಲ್ಲಿರುತ್ತದೆ.

1. ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡು ಚುನಾವಣೆ ಪೂರ್ಣಗೊಳ್ಳುವವರೆಗೆ ಅಧ್ಯಕ್ಷರು / ಉಪಾಧ್ಯಕ್ಷರು / ಯಾವುದೇ ಪದಾಧಿಕಾರಿಗಳು / ನಿರ್ದೇಶಕರು, ಒಕ್ಕೂಟದ ವಾಹನಗಳನ್ನು ಬಳಸತಕ್ಕದ್ದಲ್ಲ ನಿರ್ದಿಷ್ಟವಾಹನವನ್ನು ಸಂಘದ / ಒಕ್ಕೂಟದ ಅಧ್ಯಕ್ಷರಿಗೆ / ಪದಾಧಿಕಾರಿಗಳಿಗೆ ಒದಗಿಸಿದ್ದಲ್ಲಿ ಅದನ್ನು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ವಶಕ್ಕೆ ವಹಿಸತಕ್ಕದ್ದು, ಈ ಬಗ್ಗೆ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಅಗತ್ಯ ಕ್ರಮವಿಡತಕ್ಕದ್ದು.
2. ಜಿಲ್ಲಾ ಹಾಲು ಒಕ್ಕೂಟಗಳು, ಹೊಸದಾಗಿ ಹಾಲು ಸಂಗ್ರಹಣಾ ಕೇಂದ್ರಗಳನ್ನು ತೆರೆಯತಕ್ಕದ್ದಲ್ಲ/ ಸ್ಥಾಪಿಸತಕ್ಕದ್ದಲ್ಲ.
3. ಜಿಲ್ಲಾ ಹಾಲು ಒಕ್ಕೂಟಗಳು ಸದಸ್ಯ ಸಂಘಗಳಿಗೆ ಯಾವುದೇ ರೀತಿಯ ಉಡುಗೊರೆ / ನೆನಪಿನ ಕಾಣಿಕೆಗಳನ್ನು ನೀಡತಕ್ಕದ್ದಲ್ಲ ಹಾಗೂ ಸನ್ಮಾನ ಸಭೆಸಮಾರಂಭಗಳನ್ನು ಏರ್ಪಡಿಸಿ ನಡೆಸತಕ್ಕದ್ದಲ್ಲ.
4. ಜಿಲ್ಲಾ ಹಾಲು ಒಕ್ಕೂಟಗಳು ಸದಸ್ಯ ಸಂಘಗಳಿಗೆ ವಿಶೇಷ ಯೋಜನೆಯಲ್ಲಿ ಯಾವುದೇ ಪಶು ಆಹಾರ /ಪಶು ಔಷಧಿಗಳನ್ನು ಉಚಿತವಾಗಿ ಸರಬರಾಜು / ಅಥವಾ ರಿಯಾಯಿತಿ ದರದಲ್ಲಿ ಮಾರಾಟ ಮಾಡತಕ್ಕದ್ದಲ್ಲ.

ಮೇಲ್ಕಂಡ ನೀತಿ ಸಂಹಿತೆಯನ್ನು ತಪ್ಪದೇ ಪಾಲಿಸುವಂತೆ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳಿಗೆ ನಿರ್ದೇಶಿಸಲಾಗಿದೆ.

**(ಎನ್.ಸಿ. ಮುನಿಯಪ್ಪ)**
**ಆಯುಕ್ತರು**
**ಸಹಕಾರ ಚುನಾವಣಾ ಆಯೋಗ**
**ಬೆಂಗಳೂರು**

ಪ್ರತಿಗಳು:–

1. ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ ಮತ್ತು ಗುಲ್ಬರ್ಗಾ ಜಿಲ್ಲೆ
2. ಸಹಕಾರ ಸಂಘಗಳ ಉಪನಿಬಂಧಕರು, ತುಮಕೂರು ಜಿಲ್ಲೆ ಮತ್ತು ಗುಲ್ಬರ್ಗಾ ಜಿಲ್ಲೆ
3. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಮತ್ತು ಗುಲ್ಬರ್ಗಾ ಪ್ರಾಂತ್ಯ, ರಾಯಚೂರು
4. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ., ತುಮಕೂರು / ಗುಲ್ಬರ್ಗಾ
5. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಂ.ಎಫ್.ನಿ, ಬೆಂಗಳೂರು
6. ಕಛೇರಿ ರಕ್ಷಾ ಕಡತ.

## ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ,

**ಸಂಖ್ಯೇ:** ಸಚುಆ/ಅ.ಸೂ-3/2013.

ಕೊಠಡಿ ಸಂಖ್ಯೆ: 243, 2ನೇ ಅಂತಸ್ತು
ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 26.04.2013.

### ಅಧಿಸೂಚನೆ

ವಿಷಯ: ಸಹಕಾರ ಸಂಘಗಳಿಗೆ ಚುನಾವಣೆ ನಡೆಸುವ ಮತದಾರರ ಪಟ್ಟಿ ಸಿದ್ಧಪಡಿಸುವ ಕುರಿತು.

ಉಲ್ಲೇಖ: ಸಹಕಾರ ಚುನಾವಣಾ ಆಯೋಗದ ಸುತ್ತೋಲೆ ಸಂಖ್ಯೆ: 1 ಮತ್ತು 2.

******

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2012 ರ ಪ್ರಕರಣ 39-ಎ ರೀತ್ಯಾ, ಪ್ರತಿ ಸಹಕಾರ ಸಂಘದ ಆಡಳಿತ ಮಂಡಳಿಗೆ ಸಾಮಾನ್ಯ ಚುನಾವಣೆಯು ರಾಜ್ಯ ಸಹಕಾರ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೊಳಪಟ್ಟು ನಡೆಸತಕ್ಕದ್ದಾಗಿದೆ. ಈ ದಿಸೆಯಲ್ಲಿ ಮಾರ್ಚ್ 2013 ರ ಅಂತ್ಯಕ್ಕೆ ಚುನಾವಣೆ ನಡೆಸಲು ಬಾಕಿ ಇರುವ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಲ್ಲಿ ಸಂಬಂಧಿಸಿದ ಸಂಘಗಳು ಹಾಗೂ ಇಲಾಖಾಧಿಕಾರಿಗಳು ಕಾರ್ಯ ಪ್ರವೃತ್ತರಾಗುವುದು ಆದ್ಯತೆಯ ವಿಷಯವಾಗಿದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 20 ರಲ್ಲಿ ಸದಸ್ಯರ ಮತದಾನದ ಬಗ್ಗೆ ವಿವರಗಳಿರುತ್ತವೆ. ಅದರಂತೆ,

1. ಸಹಕಾರ ಸಂಘದ ಸದಸ್ಯ / ಪ್ರತಿನಿಧಿಗೆ, ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚಿನ ಮತ ಇರತಕ್ಕದ್ದಲ್ಲ.
2. ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಸಾಲ ಪಡೆದ ಸದಸ್ಯರು, ಸಾಲ ಪಡೆದ ಸದಸ್ಯರ ಕ್ಷೇತ್ರದಲ್ಲಿ ಹಾಗೂ ಸಾಲ ಪಡೆಯದ ಸಧಸ್ಯರು, ಸಾಲ ಪಡೆಯದೇ ಇರುವವರ ಕ್ಷೇತ್ರದಲ್ಲೇ ಮತ ಚಲಾಯಿಸುವ ಹಕ್ಕನ್ನು ಉಳ್ಳವರಾಗಿರುತ್ತಾರೆ. ಸಾಲ ಪಡೆದವರು, ಸಾಲ ಪಡೆಯದವರು ಎಂಬ ಬಗ್ಗೆ ಅಧಿನಿಯಮ ಪ್ರಕರಣ 20 (1) ರಲ್ಲಿ ಅರ್ಥೈಸಲಾಗಿದೆ.
3. ನಾಮ ಮಾತ್ರ ಅಥವಾ ಸಹ ಸದಸ್ಯರಿಗೆ ಮತದಾನದ (Nominal or Associate Member) ಹಕ್ಕು ಇರುವುದಿಲ್ಲ.
4. ಸುಸ್ತಿದಾರನಾದ ಸದಸ್ಯನಿಗೆ ಮತದಾನದ ಹಕ್ಕು ಇರುವುದಿಲ್ಲ (ಸುಸ್ತಿದಾರ ಎಂದರೆ ಯಾರು ಎಂಬ ಬಗ್ಗೆ ಈ ಪ್ರಕರಣದಲ್ಲಿ ವಿವರಣೆ ನೀಡಲಾಗಿದೆ)
5. ಸಂಘದ ಮಹಾಸಭೆಗೆ 12 ತಿಂಗಳುಗಳಿಗೆ ಮುಂಚೆ ಸಂಘದ ಸದಸ್ಯನಾಗಿಲ್ಲದವರಿಗೆ ಮತದಾನದ ಹಕ್ಕು ಇರುವುದಿಲ್ಲ.
6. ಸಹಕಾರ ಸಂಘಗಳ ಅಧಿನಿಯಮಕ್ಕೆ ಇತ್ತೀಚಿಗೆ ಆದ ತಿದ್ದುಪಡಿಯನ್ವಯ ಕಳೆದ 5 ಮಹಾಸಭೆಗಳಲ್ಲಿ 3 ಮಹಾಸಭೆಗಳಿಗೆ ಹಾಜರಾಗಲು ವಿಫಲನಾದ ಸದಸ್ಯ / ಪ್ರತಿನಿಧಿಗೆ ಮತದಾನದ ಹಕ್ಕು ಇರುವುದಿಲ್ಲ.
7. ಕಳೆದ 3 ಸಹಕಾರಿ ವರ್ಷಗಳಿಂದ ಸಂಘದಿಂದ ಉಪನಿಯಮದಲ್ಲಿ ಗೊತ್ತುಪಡಿಸಿದಂತೆ ಯಾವುದೇ ಕನಿಷ್ಠ ಸೇವೆ ಅಥವಾ ಸೌಲಭ್ಯಗಳನ್ನು ಪಡೆಯಲು ವಿಫಲನಾದ ಸದಸ್ಯ / ಪ್ರತಿನಿಧಿಯು ಮತದಾನದ ಹಕ್ಕನ್ನು ಹೊಂದಿರುವುದಿಲ್ಲ.
8. ಸಹಕಾರ ಸಂಘವಾಗಿದ್ದಲ್ಲಿ:

(1) ಆ ಸಂಘದ ಆಡಳಿತ ಸಮಿತಿ ರದ್ದಾಗಿದ್ದಲ್ಲಿ ಅಥವಾ ಪ್ರಕರಣ 31ರ ಅಡಿಯಲ್ಲಿ ವಿಶೇಷಾಧಿಕಾರಿ ನೇಮಕ ಆಗಿದ್ದಲ್ಲಿ,

(2) ಪ್ರಕರಣ 72ರ ಅಡಿಯಲ್ಲಿ ಸಂಘದ ಸಮಾಪನೆಗೆ ಆದೇಶಿಸಿದ್ದಲ್ಲಿ,

(3) ಸಂಘವು ಉದ್ದೇಶಕ್ಕೆ ಅನುಗುಣವಾಗಿ ಕೆಲಸ ಪ್ರಾರಂಭಿಸದೇ ಇದ್ದಲ್ಲಿ ಅಥವಾ

(4) ಯಾವ ಸಹಕಾರ ಸಂಘದಲ್ಲಿ ಸಾಲ ನೀಡಿಕೆಯೇ ಪ್ರಮುಖ ಉದ್ದೇಶವಾಗಿದ್ದು, ಅದರ ಸಾಲ ವಸೂಲಾತಿ ಒಟ್ಟು ತಗಾದೆಗೆ ಹಿಂದಿನ ಸಹಕಾರಿ ವರ್ಷದಲ್ಲಿ ಶೇ. 50 ಕ್ಕಿಂತ ಕಡಿಮೆಯಾಗಿದ್ದು ಮತ್ತು ವಸೂಲಾದ ಮೊಬಲಗನ್ನು ಆರ್ಥಿಕ ನೆರವು ನೀಡುವ ಬ್ಯಾಂಕಿಗೆ ಪಾವತಿಸಲು ವಿಫಲವಾಗಿದ್ದಲ್ಲಿ,

(ಎ) ಸಂಘದ ತಗಾದೆಯು ಹಣಕಾಸು ಬ್ಯಾಂಕಿನ ಅಥವಾ ಸಾಲ ನೀಡಿಕೆ ಏಜೆನ್ಸಿಯ ತಗಾದೆಗಿಂತ ಕಡಿಮೆಯಾಗಿದ್ದರೆ ಸಂಘದ ತಗಾದೆಯ ಶೇ. 50 ರಷ್ಟನ್ನು ಅಥವಾ,

(ಬಿ) ಸಂಘದ ತಗಾದೆಯು ಹಣಕಾಸು ಬ್ಯಾಂಕಿನ ಅಥವಾ ಸಾಲ ನೀಡಿಕೆ ಏಜೆನ್ಸಿಯ ತಗಾದೆಗಿಂತ ಹೆಚ್ಚಾಗಿದ್ದರೆ, ಹಣಕಾಸು ಬ್ಯಾಂಕಿನ ಅಥವಾ ಸಾಲ ನೀಡಿಕೆ ಏಜೆನ್ಸಿಯ ವಾಸ್ತವಿಕ ತಗಾದೆಯಷ್ಟನ್ನು ಸದರಿ ಸಹಕಾರಿ ವರ್ಷ ಮುಗಿದ ಹದಿನೈದು ದಿನಗಳಗಿಂತ ತಡವಾಗದಂತೆ ವರ್ಗಾವಣೆ ಮಾಡಲು ವಿಫಲವಾಗಿದೆಯೋ,

9. ಸಂಘದ ಸದಸ್ಯರಲ್ಲಿ ಯಾರಾದರೂ ಮೃತಪಟ್ಟಿದ್ದಲ್ಲಿ, ಅಂತಹ ಪ್ರಕರಣಗಳ ಬಗ್ಗೆ ಪರಿಶೀಲಿಸಿ, ಅಂತಹ ಸದಸ್ಯರ ಹೆಸರನ್ನು ಸದಸ್ಯರ ಪಟ್ಟಿ / ಮತದಾರರ ಪಟ್ಟಿಯಿಂದ ತೆಗೆದುಹಾಕಬೇಕಾಗುತ್ತದೆ.

10. ಸಂಘದ ಸದಸ್ಯತ್ವವು ಅಧಿನಿಯಮ ಪ್ರಕರಣ 17 ರ ಮೇರೆಗೆ ರದ್ದುಗೊಂಡಿದ್ದಲ್ಲಿ, ಅಂತಹ ಪ್ರಕರಣಗಳ ಬಗ್ಗೆ ಪರಿಶೀಲಿಸಿ ಸದಸ್ಯರ / ಮತದಾರರ ಪಟ್ಟಿಯಿಂದ ಕೈ ಬಿಡಬೇಕಾಗುತ್ತದೆ.

11. ರಾಜ್ಯ ಉಚ್ಛ ನ್ಯಾಯಾಲಯ ಅಥವಾ ಇತರ ಯಾವುದೇ ನ್ಯಾಯಾಲಯದ ಆದೇಶದಂತೆ ಯಾವುದೇ ವ್ಯಕ್ತಿಯ ಸದಸ್ಯತ್ವ ರದ್ದಾಗಿದ್ದಲ್ಲಿ, ಅಂತಹ ಪ್ರಕರಣಗಳ ಬಗ್ಗೆ ಪರಿಶೀಲಿಸಿ, ಅಗತ್ಯ ಕ್ರಮವಿಡಬೇಕಾಗುತ್ತದೆ.

12. ಸಂಘದ ಸದಸ್ಯರೇ ಯಾವುದೇ ಕಾರಣದಿಂದ, ಸಂಘದ ಸದಸ್ಯತ್ವದ ವಾಪಾಸಾತಿ / ರದ್ದತಿಗಾಗಿ ಕೋರಿಕೆ ಪ್ರಸ್ತಾವವಿದ್ದಲ್ಲಿ, ಅಂತಹ ಪ್ರಕರಣಗಳ ಬಗ್ಗೆ ಪರಿಶೀಲಿಸಬೇಕಾಗುತ್ತದೆ / ಮತ್ತು ಅಗತ್ಯ ಕ್ರಮವಿಡಬೇಕಾಗುತ್ತದೆ.

13. ಸಂಘದ ಆಡಳಿತ ಮಂಡಳಿಗೆ ಬೈಲಾ ಅವಕಾಶದಂತೆ ಬೇರೆ, ಬೇರೆ ಕ್ಷೇತ್ರಗಳಿಂದ ಆಯಾ ಕ್ಷೇತ್ರಗಳ ಸದಸ್ಯರೇ ನಿರ್ದೇಶಕರನ್ನು ಚುನಾಯಿಸಬೇಕಾಗಿದ್ದಲ್ಲಿ, ಅಂತಹ ಸಂಧರ್ಭದಲ್ಲಿ ಕ್ಷೇತ್ರವಾರು ಮತದಾರರ ಯಾದಿಯನ್ನು ಸಿದ್ದಪಡಿಸುವುದು.

14. ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರು, ತಮ್ಮ ವ್ಯಾಪ್ತಿಯಲ್ಲಿ ಬರುವ, ಚುನಾವಣೆ ನಡೆಸಲು ಬಾಕಿ ಇರುವ ಸಂಘಗಳ ಸಂಬಂಧ, ಸಂಬಂಧಿಸಿದ ಸಂಘಗಳು ಸಹಕಾರ ಸಂಘಗಳ ಅಧಿನಿಯಮ, ನಿಯಮಗಳು ಹಾಗೂ ಸಂಘದ ಉಪನಿಯಮಗಳ ಅವಕಾಶದಂತೆ, ಮತದಾನದ ಹಕ್ಕು ಹೊಂದಿರುವ ಬಿಡಿ ಸದಸ್ಯರ ಮತದಾರರ ಪಟ್ಟಿ: ಬಿಡಿ ಸದಸ್ಯರು / ಹಾಗೂ ದ್ವಿತೀಯ ವರ್ಗದ ಸಹಕಾರ ಸಂಘಕ್ಕೆ ಸಂಬಂಧಿಸಿದಂತೆ ಮತದಾನದ ಹಕ್ಕು ಹೊಂದಿರುವ ಪ್ರತಿನಿಧಿಗಳು ಹಾಗೂ ಫೆಡರಲ್ ಮತ್ತು ಅಪೆಕ್ಸ್ ಸಹಕಾರ ಸಂಘಗಳಲ್ಲಿ ಮತದಾನದ ಹಕ್ಕುಳ್ಳ ಸಂಘದ ಪ್ರತಿನಿಧಿಗಳ ಪಟ್ಟಿಯನ್ನು ತಯಾರಿಸುವ ಬಗ್ಗೆ ಅಗತ್ಯ ಕ್ರಮವಿಡತಕ್ಕದ್ದಾಗಿದೆ. ಅಲ್ಲದೇ ಕರಡು ಮತದಾರರ ಪಟ್ಟಿಯ ಪ್ರಕಟಣೆ, ಸುಸ್ತಿದಾರರ ಪಟ್ಟಿಯ ಪ್ರಕಟಣೆಯನ್ನು ಸಂಘದ ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸಿ, ಈ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನಿಗದಿತ ಅವಧಿಯೊಳಗೆ ಸಲ್ಲಿಸುವಂತೆ ಸೂಚಿಸಬಹುದಾಗಿದೆ.

ಮೇಲೆ ವಿವರಿಸಿದ ಪರಿಸ್ಥಿತಿಯಲ್ಲಿ, ಇಲಾಖಾಧಿಕಾರಿಗಳು ತ್ವರಿತವಾಗಿ ಕಾರ್ಯ ಪ್ರವೃತ್ತರಾಗಿ ಚುನಾವಣೆ ನಡೆಸಬೇಕಾಗಿರುವ ಮತದಾರರ ಸಂಘಗಳ ಪಟ್ಟಿಯನ್ನು ಸಿದ್ದಪಡಿಸುವ ಬಗ್ಗೆ ಸಹಕಾರ ಸಂಘಗಳಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ನಿರ್ದೇಶಿಸಿದೆ.

(ಎನ್. ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.

ಇವರಿಗೆ :

1. ಸಹಕಾರ ಸಂಘಗಳ ನಿಬಂಧಕರು, #1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052 ಇವರಿಗೆ ಸೂಕ ಕಮಕಾಗಿ

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ,**

ಸಂಖ್ಯೆ: ಸಚುಆ/ಅ.ಸೂ-5/2013-14.

ಕೊಠಡಿ ಸಂಖ್ಯೆ: 243, 2ನೇ ಅಂತಸ್ತು
ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 14.05.2013.

**ಅಧಿಸೂಚನೆ**

ವಿಷಯ: ಸಹಕಾರ ಸಂಘಗಳ ಆಡಳಿತ / ಪದಾಧಿಕಾರಿ ಹುದ್ದೆಗಳಿಗೆ ಚುನಾವಣೆ ನಡೆಸುವಿಕೆ ಪೂರ್ವಸಿದ್ಧತೆ ಮಾಡಿಕೊಳ್ಳುವ ಕುರಿತು.

ಉಲ್ಲೇಖ: ಸಹಕಾರ ಚುನಾವಣಾ ಆಯೋಗವು ಈಗಾಗಲೇ ಹೊರಡಿಸಿರುವ ಅಧಿಸೂಚನೆಗಳು ದಿನಾಂಕ: 18.04.2013, 22.04.2013, 26.04.2013 ಮತ್ತು 03.05.2013.

*****

ಕರ್ನಾಟಕ ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವ ಸಂಬಂಧ ಸಹಕಾರ ಚುನಾವಣಾ ಆಯೋಗವು ಉಲ್ಲೇಖದಲ್ಲಿ ಕಾಣಿಸಲಾದ ವಿವಿಧ ಅಧಿಸೂಚನೆಗಳಲ್ಲಿ ಹಲವಾರು ಅಂಶಗಳನ್ನು ಪ್ರಸ್ತಾಪಿಸಿದ್ದು, ಈ ಬಗ್ಗೆ ಸಹಕಾರ ಇಲಾಖಾಧಿಕಾರಿಗಳು ಪೂರ್ವ ಸಿದ್ಧತೆ ಮಾಡಿಕೊಳ್ಳುವ ಕುರಿತು ಕಾರ್ಯ ಪ್ರವೃತ್ತರಾಗುವಂತೆ ಸೂಚಿಸಿರುವುದು ಸರಿಯಷ್ಟೆ. ಚುನಾವಣೆಯನ್ನು ನಡೆಸುವ ಸಂಬಂಧ ಮುಂದುವರಿದಂತೆ ಈ ಕೆಳ ಕಾಣಿಸಿರುವ ಅಂಶಗಳ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

1. ಸಂಘದ ಮುಖ್ಯ ಕಾರ್ಯ ನಿರ್ವಾಹಕ ತಾತ್ಕಾಲಿಕ ಮತದಾರರ ಪಟ್ಟಿ ಸಿದ್ಧಪಡಿಸಿ, ನೋಟೀಸ್ ಬೋರ್ಡಿನಲ್ಲಿ ಪ್ರಕಟಿಸುವಿಕೆ. ಕ್ಷೇತ್ರವಾರು / ಗ್ರಾಮವಾರು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬಗ್ಗೆ ಸಂಘದ ಬೈಲಾದಲ್ಲಿ ಪರಿಶೀಲಿಸಿ ಕ್ರಮವಿಡುವುದು.

2. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960 (ಸಂಕ್ಷಿಪ್ತವಾಗಿ 'ನಿಯಮ')ರ ನಿಯಮ 13-ಎ ರೀತ್ಯಾ ಸಹ ಸಂಘದ ಮುಖ್ಯ ಕಾರ್ಯ ನಿರ್ವಾಹಕರು ಸಂಘದ ಪ್ರತಿ ಸದಸ್ಯನಿಗೆ ಭಾವಚಿತ್ರವುಳ್ಳ ಗುರುತಿನ ಕಾರ್ಡ್ (Identity Card)ಅನ್ನು ನೀಡತಕ್ಕದ್ದಾಗಿದೆ. ನಿಯಮ 25 ರೀತ್ಯಾ ಗುರುತಿನ ಕಾರ್ಡ್ ಪಡೆದ ಸದಸ್ಯನು ನಿಗಧಿತ ರಿಜಿಸ್ಟರ್‌ನಲ್ಲಿ ಸಹಿ ಮಾಡಿ ಗುರುತಿನ ಚೀಟಿಯನ್ನು ( Identity Slip) ಪಡೆದು, ನಂತರ ಮತದಾನ ಮಾಡಲು ಮುಂದುವರಿಯಬೇಕಾಗುತ್ತದೆ. ಈ ಬಗ್ಗೆ ಇಲಾಖಾಧಿಕಾರಿಗಳು ಗಮನ ಹರಿಸಿ, ಸಂಘದ ಪ್ರತಿ ಸಧಸ್ಯರಿಗೂ, ಗುರುತಿನ ಕಾರ್ಡ್‌ನ್ನು ನೀಡುವ ಕುರಿತು ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಾಹಕರಿಗೆ ಸೂಚಿಸುವುದು.

3. ಸಂಘವು ಚುನಾವಣೆ ನಡೆಸಲು ಸ್ವಂತ ಕಟ್ಟಡ ಹೊಂದಿದೆಯೆ ? ಅಥವಾ ಬೇರೆ ವ್ಯವಸ್ಥೆ ಮಾಡಿಕೊಳ್ಳುವ ಅಗತ್ಯವಿದ್ದಲ್ಲಿ ಈ ಬಗ್ಗೆ ಪರಿಶೀಲಿಸುವಿಕೆ.

4. ಸಂಘದಲ್ಲಿ ಚುನಾವಣೆಗಾಗಿ / ಸಿಬ್ಬಂದಿಯ ಉಪಯೋಗಕ್ಕೆ ಪೀಠೋಪಕರಣಗಳ ಲಭ್ಯತೆ.

5. ಸಂಘದಲ್ಲಿ ಚುನಾವಣೆ ನಡೆಸಲು ಮತದಾನದ ಅವಶ್ಯಕತೆ ಕಂಡು ಬಂದಲ್ಲಿ ಮತ ಪೆಟ್ಟಿಗೆಯ ಲಭ್ಯತೆ ಬಗ್ಗೆ ಪರಿಶೀಲನೆ – ಅಗತ್ಯವೆನಿಸಿದಲ್ಲಿ ಕಂದಾಯ ಇಲಾಖೆಯಿಂದ ಪಡೆಯುವ ಬಗ್ಗೆ ಕ್ರಮವಿಡುವುದು.

6. ಚುನಾವಣಾಧಿಕಾರಿ (Returning Officer) / ಚುನಾವಣಾ ಸಿಬ್ಬಂದಿ ಲಭ್ಯತೆ ( Polling Staff) ಸರ್ಕಾರದ ಬೇರೆ ಇಲಾಖೆಗಳಿಂದ ಅಧಿಕಾರಿ / ಸಿಬ್ಬಂದಿ ಸೇವೆ ಪಡೆಯುವ ಬಗ್ಗೆ ಪರಿಶೀಲಿಸುವಿಕೆ.

7. ಚುನಾವಣಾ ಅಧಿಕಾರಿ / ಸಿಬ್ಬಂದಿಗೆ ತರಬೇತಿ ವ್ಯವಸ್ಥೆ ಮಾಡುವಿಕೆ.

8. ಚುನಾವಣೆ ಮುಗಿದ ನಂತರ ಮತ ಎಣಿಕೆಗಾಗಿ ಸ್ಥಳಾವಕಾಶದ ಲಭ್ಯತೆ ಬಗ್ಗೆ ಪರಿಶೀಲನೆ.

9. ದಿನಾಂಕ: 31.03.2013ಕ್ಕೆ ಚುನಾವಣೆ ಬಾಕಿ ಇರುವ ಸಹಕಾರ ಸಂಘಗಳಿಗೆ ಸಾಮಾನ್ಯ ಚುನಾವಣೆ, ಅಧಿನಿಯಮ ಪ್ರಕರಣ 30 (1) ರ ಅಡಿಯಲ್ಲಿ ರದ್ದತಿಯಾದ ಪ್ರಕರಣಗಳು; ಅಧಿನಿಯಮ ಪ್ರಕರಣ 31 ರ ಅಡಿಯಲ್ಲಿ ಕ್ರಮ ಕೈಗೊಂಡಿರುವ ಪ್ರಕರಣಗಳು, ಗೌರವ ಉಚ್ಛ ನ್ಯಾಯಾಲಯದಿಂದ ನಿರ್ದೇಶನವೇನಾದರೂ ಇದ್ದಲ್ಲಿ, ಅಂತಹ ಪ್ರಕರಣಗಳು, ಈ ರೀತಿ ಚುನಾವಣೆಗೆ ಬಾಕಿ ಇರುವ ಸಹಕಾರ ಸಂಘಗಳ ವರ್ಗವಾರು ಪಟ್ಟಿ ತಯಾರಿಸುವಿಕೆ ಬಗ್ಗೆ ಇಲಾಖಾಧಿಕಾರಿಗಳು ಗಮನ ಹರಿಸತಕ್ಕದ್ದು.

10. ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಸಂಬಂಧ ಸುಸ್ತಿದಾರರ ಪಟ್ಟಿಯನ್ನು ಸಂಬಂಧಿಸಿದ ಸಂಘಗಳು ತಯಾರಿಸುವಿಕೆ.

11. ಅಧಿನಿಯಮ ಪ್ರಕರಣ 39-ಬಿ ರೀತ್ಯಾ ಚುನಾವಣೆಯನ್ನು ನಡೆಸಲು ಚುನಾವಣಾ ಸಿಬ್ಬಂದಿಗೆ ನಿಗದಿತ ಪ್ರಾಧಿಕಾರ ಗೊತ್ತುಪಡಿಸಿದಂತೆ ಪಾವತಿಸಬೇಕಾದ ದಿನ ಭತ್ಯೆ, ಪ್ರಯಾಣ ಭತ್ಯೆ ಇತರೆ ಸಂಭಾವನೆಯನ್ನು ಸಂಬಂಧಿಸಿದ ಸಹಕಾರ ಸಂಘವೇ ಭರಿಸತಕ್ಕದ್ದಾಗಿದೆ. ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಸಂಘಗಳು ಚುನಾವಣಾ ವೆಚ್ಚ ಭರಿಸಲು ಆರ್ಥಿಕ ಸಾಮರ್ಥ್ಯ ಹೊಂದಿರುವಿಕೆ, ಸೂಕ್ತ ವ್ಯವಸ್ಥೆ ಮಾಡಿಕೊಳ್ಳುವ ಬಗ್ಗೆ ಸಂಬಂಧಿಸಿದ ಸಂಘಗಳಿಗೆ ಸೂಚಿಸುವಿಕೆ.

12. ಕಾನೂನು ಮತ್ತು ಶಿಸ್ತು ಪಾಲನೆ ಸಂಬಂಧ ಆರಕ್ಷಕ ಸೇವೆ ಪಡೆಯುವಿಕೆ. ಈ ಸಂಬಂಧ ವ್ಯಾಪ್ತಿಯ ಆರಕ್ಷಕ ಅಧಿಕಾರಿಗಳನ್ನು ಸಂಪರ್ಕಿಸುವಿಕೆ.

13. ಚುನಾವಣೆ ನಡೆಸುವ ಸಂಬಂಧ ಅವಶ್ಯಕವಾದ ಚುನಾವಣಾ ಸಾಮಗ್ರಿಗಳನ್ನು ಸಂಘದವರು ಚುನಾವಣೆಗಾಗಿ ವ್ಯವಸ್ಥೆ ಮಾಡುವಿಕೆ.

14. ಅಧಿನಿಯಮ ಪ್ರಕರಣ 114 ರೀತ್ಯಾ ಇತ್ತೀಚಿನ ಪ್ರತಿ ಸಹಕಾರ ಸಂಘವು ಇತ್ತೀಚಿನ ತಿದ್ದುಪಡಿಗಳನ್ನೊಳಗೊಂಡ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ನಿಯಮಗಳು 1960 ಈ ಪುಸ್ತಕವನ್ನು ಇಡತಕ್ಕದ್ದಾಗಿದೆ. ಯಾವುದೇ ಸಂಘವು ಅಧಿನಿಯಮ / ನಿಯಮದ ಪುಸ್ತಕವನ್ನು ಹೊಂದಿಲ್ಲದೇ ಇದ್ದಲ್ಲಿ, ಖರೀದಿಸಿ ಸಂಘದಲ್ಲಿ ಇಡುವ ಬಗ್ಗೆ ಸಂಬಂಧಿಸಿದ ಸಂಘಕ್ಕೆ ಸೂಚಿಸುವಿಕೆ.

15. ಚುನಾವಣೆ ನಡೆಸುವ ಸಂಬಂದ, ವಿವಿಧ ವರ್ಗಗಳಿಗೆ ಮೀಸಲಾತಿ, ಕ್ಷೇತ್ರವಾರು / ಭೌಗೋಳಿಕವಾಗಿ ಆಯ್ಕೆ ಮಾಡಬೇಕಾಗಿದ್ದಲ್ಲಿ, ಬೈಲಾ ಅವಕಾಶವನ್ನು ಪರಿಶೀಲಿಸಬೇಕಾಗುತ್ತದೆ. ಸಂಘವು ಮೂಲ ಬೈಲಾ ಪ್ರತಿಯನ್ನು ಇತ್ತೀಚಿನವರೆಗಿನ ತಿದ್ದುಪಡಿಗಳೊಡನೆ ಇಟ್ಟಿದಿಯೇ ? ಅಥವಾ ಯಾವುದೇ ಕಾರಣದಿಂದ ಲಭ್ಯವಿಲ್ಲದ ಸಂದರ್ಭದಲ್ಲಿ, ನೊಂದಣಿ ಪ್ರಾಧಿಕಾರದಿಂದ ದೃಢೀಕೃತ ಪ್ರತಿ ಪಡೆದು ಸಂಘದಲ್ಲಿ ಲಭ್ಯವಿರುವಂತೆ ನೋಡಿಕೊಳ್ಳುವುದು.

16. ಚುನಾವಣೆ ನಡೆಸುವಲ್ಲಿ ಸಂಘದ ಕಾರ್ಯವ್ಯಾಪ್ತಿಯಲ್ಲಿ ಪ್ರಾಕೃತಿಕವಾಗಿ ಏನಾದರೂ ತೊಂದರೆ ಕಂಡುಬಂದಲ್ಲಿ, ರಾಜ್ಯ ಸಹಕಾರ ಚುನಾವಣಾ ಆಯೋಗದ ಗಮನಕ್ಕೆ ತರತಕ್ಕದ್ದು.

(ಎನ್. ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/31/ಚುನಾವಣೆ/2014/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ:30.10.2013

**-:ಅಧಿಸೂಚನೆ:-**

**ವಿಷಯ:-** ದಿನಾಂಕ:31.03.2014ಕ್ಕೆ ಪ್ರಾಥಮಿಕ ಹಂತದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಮಂಡಲಿ ಅವಧಿ ಮುಗಿಯಲಿರುವ ಆಡಳಿತ ಮಂಡಲಿಗೆ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಕುರಿತು.

***

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39ಎ (1) ಮತ್ತು ಪ್ರಕರಣ 39ಎಎ(2) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 26ಎ ಗಳ ಅವಕಾಶದಂತೆ ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ನಡೆಯುವ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧಿತ ಮತದಾರರ ಪಟ್ಟಿಗಳನ್ನು ತಯಾರಿಸುವ ಕಾರ್ಯದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣವು ಸಹಕಾರ ಚುನಾವಣಾ ಆಯೋಗದಲ್ಲಿ ನಿಹಿತವಾಗಿರುತ್ತದೆ. ಅಧಿನಿಯಮ ಪ್ರಕರಣ 39ಎ (2) (ಎ) ರೀತ್ಯಾ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳು ನಡೆಯತಕ್ಕದ್ದಾಗಿದೆ. ಸಹಕಾರ ಚುನಾವಣಾ ಆಯೋಗವು ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಸಹಕಾರ ಸಂಘದ ಮಂಡಲಿಯ ಪದಾವಧಿಯ ಮುಕ್ತಾಯದ ಹಿಂದಿನ ಕೊನೆಯ ಆರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಬಹುದಾಗಿದೆ. ಅಧಿನಿಯಮ ಪ್ರಕರಣ 39ಎಎ (15)(ಎ) ರೀತ್ಯಾ ಪ್ರತಿಯೊಂದು ಸಹಕಾರ ಸಂಘದ ಮಂಡಲಿಯು ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಠ 6 ತಿಂಗಳಿಗೆ ಮುಂಚೆ ಸಹಕಾರ ಚುನಾವಣಾ ಆಯೋಗಕ್ಕೆ ತಿಳಿಸತಕ್ಕದ್ದಾಗಿದೆ. ಅಲ್ಲದೇ ಆಯೋಗವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದಾಗಿದೆ. ಅಲ್ಲದೇ ಚುನಾವಣಾ ಆಯೋಗಕ್ಕೆ / ಜಿಲ್ಲಾ ಚುನಾವಣಾಧಿಕಾರಿಗಳಿಗೆ ಅಗತ್ಯ ಪುಸ್ತಕಗಳು, ದಾಖಲೆಗಳು ಹಾಗೂ ಮಾಹಿತಿಯನ್ನು ನೀಡುವ ಜವಾಬ್ದಾರಿ ಸಂಬಂಧಿಸಿದ ಸಹಕಾರ ಸಂಘಗಳದ್ದಾಗಿದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013 ರ ನಿಯಮ 13ಡಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ 5ಬಿ(3)ಗಳ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯು ಕೂಲಂಕುಷ ಪರಿಶೀಲನೆಯ ನಂತರ, ಆಡಳಿತ ಮಂಡಳಿಗಳ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಕನಿಷ್ಠ 120 ದಿನಗಳ ಪೂರ್ವದಲ್ಲಿ ಈ ಕೆಳಕಂಡ ವಿವರಗಳನ್ನೊಳಗೊಂಡ, ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ/ ಸಹಕಾರಿಗಳ ಕ್ರೋಢೀಕೃತ ಪಟ್ಟಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಕಳುಹಿಸತಕ್ಕದ್ದಾಗಿದೆ.

1. ಸಹಕಾರ ಸಂಘದ /ಸಹಕಾರಿಯ ಹೆಸರು ಮತ್ತು ವಿಳಾಸ
2. ಆಡಳಿತ ಮಂಡಲಿಗೆ ಆಯ್ಕೆಯಾಗಬೇಕಾಗಿರುವ ಚುನಾಯಿತ ನಿರ್ದೇಶಕರ ಸಂಖ್ಯೆ.
3. ಆಡಳಿತ ಮಂಡಲಿ ಪದಾವಧಿಯು ಮುಕ್ತಾಯವಾಗುವ ದಿನಾಂಕ
4. ಚುನಾವಣೆಗಳನ್ನು ನಡೆಸಬಹುದಾದ ಸ್ಥಳ ಹಾಗೂ ಚುನಾವಣಾ ಆಯೋಗಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳು.

ಪ್ರಾಥಮಿಕ ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸುವ ಸಂಬಂಧ ಆಯೋಗವು ಈಗಾಗಲೇ ಕ್ರಮ ಕೈಗೊಂಡಿರುತ್ತದೆ. ದಿನಾಂಕ:31.03.2014ಕ್ಕೆ ಮಂಡಲಿಯ ಪದಾವಧಿಯು ಮುಗಿಯಲಿರುವ ಪ್ರಕರಣಗಳಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಮಂಡಲಿಯ ಮುಂದಿನ ಅವಧಿಗೆ ಚುನಾವಣೆ ನಡೆಸುವ ಬಗ್ಗೆ ಸಹಕಾರ ಚುನಾವಣಾ ಆಯೋಗವು ಅಗತ್ಯ ಕ್ರಮಕೈಗೊಳ್ಳಬೇಕಾಗಿರುತ್ತದೆ. 2014 ರಲ್ಲಿ ಲೋಕಸಭೆಗೆ ಚುನಾವಣೆಯನ್ನು ನಡೆಸಬೇಕಾಗಿದ್ದು, ಈ ಸಂಬಂಧ ಕೇಂದ್ರ ಚುನಾವಣಾ ಆಯೋಗವು ಪ್ರಕ್ರಿಯೆಯನ್ನು

ಪ್ರಾರಂಭ ಮಾಡಿದೆ. ಅಲ್ಲದೇ 2014 ರ ಮಾರ್ಚ್ ಮಾಹೆಯಲ್ಲಿ ಶಾಲಾ ಕಾಲೇಜುಗಳಲ್ಲಿ ವಾರ್ಷಿಕ ಅಂತಿಮ ಪರೀಕ್ಷೆಗಳು ನಿಗದಿಯಾಗುವ ಕಾರಣ ಅಧಿಕಾರಿಗಳು/ಸಿಬ್ಬಂದಿ/ಕಟ್ಟಡಗಳ ಲಭ್ಯತೆಗಳನ್ನು ಗಮನದಲ್ಲಿಟ್ಟುಕೊಂಡು 2014 ರ ಫೆಬ್ರವರಿ ಮಾಹೆಯಿಂದಲೇ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಮಂಡಲಿಗಳ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವುದು ಸೂಕ್ತ ಎಂಬ ಅಭಿಪ್ರಾಯಕ್ಕೆ ಆಯೋಗವು ಬಂದಿದ್ದು, ಈ ಹಿನ್ನೆಲೆಯಲ್ಲಿ ಸಹಕಾರ ಚುನಾವಣಾ ಆಯೋಗವು ಈ ಕೆಳಕಂಡ ಅವಧಿಯಲ್ಲಿ ಪ್ರಾಥಮಿಕ ಸಹಕಾರ ಸಂಘಗಳು/ಸಹಕಾರಿಗಳು ಮಂಡಲಿ ಚುನಾವಣೆಗಳನ್ನು ನಡೆಸಲು ದಿನಾಂಕಗಳನ್ನು ಗೊತ್ತುಪಡಿಸಲಾಗಿದೆ. ಅದರಂತೆ ಚುನಾವಣೆಗಳನ್ನು ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದಾಗಿದೆ.

| ಕ್ರ ಸಂ | ಪ್ರಾಥಮಿಕ ಸಹಕಾರ ಸಂಘಗಳು/ಸಹಕಾರಿಗಳು | ಚುನಾವಣೆ ನಡೆಸಬೇಕಾದ ಅವಧಿ /ದಿನಾಂಕ |
|---|---|---|
| 1 | ಹಾಲು ಉತ್ಪಾದಕರ ಸಹಕಾರ ಸಂಘಗಳು | 02.02.2014 ಭಾನುವಾರ |
| 2 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು | 09.02.2014 ಭಾನುವಾರ |
| 3 | ಪಟ್ಟಣ ಸಹಕಾರ ಬ್ಯಾಂಕುಗಳು, ಗ್ರಾಹಕರ ಸಹಕಾರ ಸಂಘಗಳು , ಪಿಕಾರ್ಡ್ ಬ್ಯಾಂಕುಗಳು, ನೌಕರರ ಪತ್ತಿನ ಸಹಕಾರ ಸಂಘಗಳು ಸೌಹಾರ್ದ ಹಾಗೂ ಇತರೆ ಪತ್ತಿನ ಸಹಕಾರ ಸಂಘಗಳು ಹಾಗೂ ದಿನಾಂಕ:02.02.2014ರಂದು ಚುನಾವಣೆ ನಡೆಸದೇ ಉಳಿದ ಹಾಲು ಉತ್ಪಾದಕರ ಸಹಕಾರ ಸಂಘಗಳು. | 16.02.2014 ಭಾನುವಾರ<br>17.02.2014 ಸೋಮವಾರ |
| 4 | ಗೃಹ ನಿರ್ಮಾಣ ಸಹಕಾರ ಸಂಘಗಳು, ಎಲ್ಲಾ ಪತ್ತೇತರ ಸಹಕಾರ ಸಂಘಗಳು, ಇತರೆ ಎಲ್ಲಾ ಸಹಕಾರ ಸಂಘಗಳು | 23.02.2014 ಭಾನುವಾರ |
| 5 | ಚುನಾವಣೆ ನಡೆಸಲು ಬಾಕಿ ಉಳಿದ ಇತರೆ ಯಾವುದೇ ಸಹಕಾರ ಸಂಘಗಳು | 02.03.2014 ಭಾನುವಾರ |

ಅಧಿನಿಯಮ ಪ್ರಕರಣ 28ಬಿ ರೀತ್ಯಾ ಹೊಸದಾಗಿ ಚುನಾಯಿತವಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅರ್ಹರಾಗಿರುತ್ತಾರೆ ಮಂಡಲಿಯ ಸದಸ್ಯರ ಸಾಮಾನ್ಯ ಚುನಾವಣೆಯನ್ನು ಮೇಲ್ಕಂಡ ಅವಧಿಯಲ್ಲಿ ನಡೆಸಿ, ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವುದು.

ಸಂಬಂಧಿಸಿದ ಸಹಕಾರ ಸಂಘಗಳು /ಸಹಕಾರಿಗಳು ಆಯಾ ವರ್ಗಗಳಿಗೆ ಗೊತ್ತುಪಡಿಸಲಾದ ಅವಧಿಯಲ್ಲಿ ಮಂಡಲಿಯ ಚುನಾವಣೆಗಳನ್ನು ನಡೆಸತಕ್ಕದ್ದು ಮತ್ತು ಗೊತ್ತುಪಡಿಸಿದ ಅವಧಿಯಲ್ಲಿ ಚುನಾವಣೆ ನಡೆಸುವ ಬಗ್ಗೆ ಅಗತ್ಯ ಕ್ರಮವಿಡತಕ್ಕದ್ದು ಜಿಲ್ಲಾ ಚುನಾವಣಾಧಿಕಾರಿಗಳು/ ರಿಟರ್ನಿಂಗ್ ಅಧಿಕಾರಿಗಳು ಚುನಾವಣೆ ನಡೆಸುವ ಸಂಬಂಧ ವಿವಿಧ ಹಂತಗಳಲ್ಲಿ ಕೈಗೊಳ್ಳಬೇಕಾದ ಪ್ರಕ್ರಿಯೆಗಳ ಕುರಿತು ಚೆಕ್‌ಲಿಸ್ಟ್ ಲಗತ್ತಿಸಿದೆ.

**(ಎನ್.ಸಿ. ಮುನಿಯಪ್ಪ)**
**ಸಹಕಾರ ಚುನಾವಣಾ ಆಯುಕ್ತರು**
**ಬೆಂಗಳೂರು**

**ಇವರಿಗೆ:-**

1. ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ ಸೂಕ್ತಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಸೂಕ್ತಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳು:-**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು-01.
2. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52
3. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಅಪರ ನಿಬಂಧಕರು / ಜಂಟಿ ನಿಬಂಧಕರುಗಳಿಗೆ
4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ
5. ರಾಜ್ಯದ ಎಲ್ಲಾ ಜಿಲ್ಲೆಗಳ ಆರಕ್ಷಕ ಅಧೀಕ್ಷಕರಿಗೆ.

## ಪ್ರಾಥಮಿಕ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ / ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವಿಕೆ – ಪ್ರಾಥಮಿಕ ಹಂತ

### ಚೆಕ್‌ಲಿಸ್ಟ್

| ಕ್ರ ಸಂ | ವಿವರ | ಷರಾ |
|---|---|---|
| 1 | ದಿನಾಂಕ:31.03.2014ಕ್ಕೆ ಅವಧಿ ಮುಗಿಯುವ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ / ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸುವಿಕೆ – ಸಹಕಾರ ಸಂಘಗಳ /ಸಹಕಾರಿಗಳ ಪಟ್ಟಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಕಳುಹಿಸುವಿಕೆ. | ಸಹಕಾರ ಚುನಾವಣಾ ಆಯೋಗವು ಪತ್ರ ಸಂಖ್ಯೆ:ಸಚುಆ/ಚುನಾವಣೆ/128/2013–14, ದಿನಾಂಕ:11.09.2013ರ ಪತ್ರದಲ್ಲಿ ಸೂಚಿಸಿರುವಂತೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಅಗತ್ಯ ಕ್ರಮವಿಡತಕ್ಕದ್ದು. |
| 2 | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960ರ ನಿಯಮ 13ಡಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮ 2013 ರ ನಿಯಮ 5ಬಿ(3)ಗಳ ಅವಕಾಶದಂತೆ ಕೂಲಂಕುಷ ಪರಿಶೀಲನೆ ನಂತರ ಆಡಳಿತ ಮಂಡಲಿ ಪದಾವಧಿ ಮುಕ್ತಾಯವಾಗುವ, ಚುನಾವಣೆಗಳು ಸನ್ನಿಹಿತವಾಗಿರುವ ಸಹಕಾರ ಸಂಘಗಳ/ ಸಹಕಾರಿಗಳ ಕ್ರೋಢೀಕೃತ ಪಟ್ಟಿಯನ್ನು ಅಗತ್ಯ ವಿವರಗಳೊಡನೆ ಸಹಕಾರ ಚುನಾವಣಾ ಆಯೋಗಕ್ಕೆ ಕಳುಹಿಸಬೇಕಾದ್ದು (ಕನಿಷ್ಠ 120 ದಿವಸಗಳ ಪೂರ್ವದಲ್ಲಿ) | ದಿನಾಂಕ:30.11.2013ರ ಒಳಗೆ ಸಹಕಾರ ಚುನಾವಣಾ ಆಯೋಗಕ್ಕೆ ಸಲ್ಲಿಸತಕ್ಕದ್ದು. |
| 3 | ಮೊದಲ ಹಂತದಲ್ಲಿ ಪ್ರಾಥಮಿಕ ಸಂಘಗಳು /ಸಹಕಾರಿಗಳ ಮಂಡಲಿಗಳ ಚುನಾವಣೆ ನಡೆಸುವ ಬಗ್ಗೆ ಚುನಾವಣಾ ಆಯೋಗದಿಂದ ಚುನಾವಣೆ ನಡೆಸಬೇಕಾದ ಅವಧಿ / ದಿನಾಂಕಗಳ ಪ್ರಕಟಣೆ. | ಅಧಿಸೂಚನೆಯಲ್ಲಿ ಪ್ರಕಟಿಸಿರುವಂತೆ ಅಗತ್ಯ ಕ್ರಮವಿಡತಕ್ಕದ್ದಾಗಿದೆ. |
| 4 | ರಿಟರ್ನಿಂಗ್ ಆಫೀಸರ್ /ಸಹಾಯಕ ರಿಟರ್ನಿಂಗ್ ಆಫೀಸರ್‌ಗಳ ನೇಮಕ–<br>1. ಹೊಸದಾಗಿ ನೊಂದಣಿಯಾದ ಸಂಘಗಳು<br>2. ದಿನಾಂಕ:31.03.2014ಕ್ಕೆ ಮಂಡಲಿಯ ಅವಧಿ ಮುಗಿಯುವ ಸಂಘಗಳು / ಸಹಕಾರಿಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಚುನಾವಣೆ /ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸಲು<br>3. ಪದಾಧಿಕಾರಿಗಳ ಮೊದಲ 2 1/2 ವರ್ಷದ ಅವಧಿ ದಿನಾಂಕ:31.03.2014ಕ್ಕೆ ಮುಗಿಯಲಿರುವ ಪ್ರಕರಣಗಳಿದ್ದಲ್ಲಿ 2ನೇ ಎರಡೂವರೆ ವರ್ಷದ ಅವಧಿಗೆ ಪದಾಧಿಕಾರಿಗಳ ಚುನಾವಣೆ ನಡೆಸುವಿಕೆ.<br>4. ಆಕಸ್ಮಿಕ ತೆರವಾದ ನಿರ್ದೇಶಕರ ಸ್ಥಾನಗಳಿಗೆ / ಪದಾಧಿಕಾರಿಗಳ ಚುನಾವಣೆ ನಡೆಸುವಿಕೆ. | ರಿಟರ್ನಿಂಗ್ ಆಫೀಸರ್ (ಆರ್.ಓ) ಅಗತ್ಯವೆನಿಸಿದಲ್ಲಿ ಸಹಾಯಕ ರಿಟರ್ನಿಂಗ್ ಆಫೀಸರ್ (ಎ.ಆರ್.ಓ) ನೇಮಕಾತಿಗಾಗಿ ಇಬ್ಬರು ಅಧಿಕಾರಿಗಳ ಹೆಸರು/ ಹುದ್ದೆ ವಿವರಗಳನ್ನು ಸಂಘವಾರು ಸಿದ್ಧಪಡಿಸಿ ಸಹಕಾರ ಚುನಾವಣಾ ಆಯೋಗಕ್ಕೆ ಸಲ್ಲಿಸುವುದು. |

| | | |
|---|---|---|
| 5 | ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಿಕೆ –ವೇಳಾಪಟ್ಟಿ ಪ್ರಕಟಣೆ.<br>**<u>ಪ್ರತಿ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನು,</u>**<br>i. ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಕರಡು ಪಟ್ಟಿ ಸಿದ್ಧಪಡಿಸಿ ಸಲ್ಲಿಸುವಿಕೆ.<br>ii. ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ಸಿದ್ಧಪಡಿಸಿದ ದಿನಾಂಕದ ಪೂರ್ವವಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡುಪಟ್ಟಿ ಸಿದ್ಧಪಡಿಸುವಿಕೆ.<br>iii. ಸುಸ್ತಿದಾರರ ಕರಡು ಪಟ್ಟಿ ಸಿದ್ಧಪಡಿಸಿ ಸಲ್ಲಿಸುವಿಕೆ<br>iv. ಅನರ್ಹತೆಗೆ ಕಾರಣಗಳನ್ನು ಸದಸ್ಯವಾರು ತೋರಿಸಿ, ಸಾಮಾನ್ಯ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರದ, ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಕರಡುಪಟ್ಟಿ ತಯಾರಿಸಿ ಸಲ್ಲಿಸುವಿಕೆ.<br>[ ಕರ್ನಾಟಕ ಸಹಕಾರ ಸಂಘಗಳ ನಿಯಮ 13ಡಿ(5) ರಂತೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಟ 60 ದಿವಸಗಳ ಮುಂಚೆ] | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ (5) ಹಾಗೂ ಕರ್ನಾಟಕ ಸೌಹಾರ್ಧ ಸಹಕಾರಿ (ತಿದ್ದುಪಡಿ) ನಿಯಮಗಳು, 2013ರ ನಿಯಮ 5ಬಿ (1) ಗಳ ಅವಕಾಶಗಳಂತೆ |
| 6 | ಸಹಕಾರ ಚುನಾವಣಾ ಆಯೋಗದ ಪರವಾಗಿ ಜಿಲ್ಲಾ ಚುನಾವಣಾಧಿಕಾರಿಯು–<br>1. ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡುಪಟ್ಟಿ, ಸುಸ್ತಿದಾರರ ಕರಡುಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗಧಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಗಳನ್ನು ಪ್ರಕಟಿಸಲು ವ್ಯವಸ್ಥೆಗೊಳಿಸುವಿಕೆ. | ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 45 ದಿನಗಳ ಮುಂಚಿತವಾಗಿ ಪ್ರಕಟಿಸುವ ವ್ಯವಸ್ಥೆ ಮಾಡುವುದು. |
| | 2. (ಅ) ನಲ್ಲಿ ವಿವರಿಸಿದಂತೆ ಕರಡುಪಟ್ಟಿ ಪ್ರಕಟಣೆಯಾದ ನಂತರ ಅವುಗಳಿಂದ ಬಾಧಿತರಾದವರು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಮತ್ತು ಸಾಮಾನ್ಯ ಚುನಾವಣೆಯ ಪೂರ್ವದ ಕನಿಷ್ಟ 15 ದಿನಗಳ ಮುಂಚಿತವಾಗಿ ಸುಸ್ತಿದಾರರು ಸಂಬಂಧಪಟ್ಟ ಸಹಕಾರ ಸಂಘಗಳಿಗೆ ಬಾಕಿಯನ್ನು ಮರುಪಾವತಿಸಲು ತಿಳಿಸುವಿಕೆ. | ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 13ಡಿ (3) (ಎ) ದ ಮತ್ತು ಸೌಹಾರ್ಧ ಸಹಕಾರಿ ನಿಯಮ 5(ಎ) |
| | 3. ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವಿಕೆ. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 13ಡಿ(3) (ಬಿ) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 5(ಬಿ)ಗಳ ಅವಕಾಶದಂತೆ ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸತಕ್ಕದ್ದು. |
| 7. | ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳು | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 13ಇ(2) (ii) ಕರ್ನಾಟಕ ಸೌಹಾರ್ದ ಸಹಕಾರಿ ಸಂಘ ನಿಯಮ 5ಸಿ(2) (ii) ಮತ್ತು (iii) |
| 8 | ಮತದಾನ ಸಿಬ್ಬಂದಿ ನೇಮಕಾತಿ | ಕರ್ನಾಟಕ ಸಹಕಾರ ಸಂಘ ನಿಯಮಗಳು 1960 ರ ನಿಯಮ 13ಎಫ್ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013 ರ ನಿಯಮ 5ಡಿ(1) |

| | | |
|---|---|---|
| 9. | ಸಾಮಾನ್ಯ ಚುನಾವಣೆಗಾಗಿ ಅಧಿಸೂಚನೆಯನ್ನು ಜಿಲ್ಲಾ ಚುನಾವಣಾಧಿಕಾರಿಯು ಹೊರಡಿಸುವಿಕೆ | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ 5ಇ ಮೇರೆಗೆ ಕ್ರಮವಾಗಿ ನಮೂನೆ XI ಹಾಗೂ ನಮೂನೆ 1ಎ ನಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. |
| 10. | ರಿಟರ್ನಿಂಗ್ ಆಫೀಸರ್ ಉದ್ದೇಶಿತ ಚುನಾವಣೆಗಾಗಿ ಸಾರ್ವಜನಿಕ ನೋಟೀಸ್ ನೀಡುವಿಕೆ. | ಕರ್ನಾಟಕ ಸಹಕಾರ ಸಂಘ ನಿಯಮಗಳು 1960 ರ ನಿಯಮ 14(3) (ಎ) ರೀತ್ಯಾ ನಮೂನೆ XII ರಲ್ಲಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013 ರ ರೀತ್ಯಾ ನಮೂನೆ 2ಎ ದಲ್ಲಿ ಹೊರಡಿಸತಕ್ಕದ್ದು. |
| 11. | ಮಾದರಿ ನೀತಿ ಸಂಹಿತೆ | ಮಾದರಿ ನೀತಿ ಸಂಹಿತೆಯನ್ನು ಸಹಕಾರ ಚುನಾವಣಾ ಆಯೋಗವು ಈಗಾಗಲೇ ಪತ್ರ ಸಂಖ್ಯೆ:ಸಚುಆ/17/ನೀತಿಸಂಹಿತೆ/2013-14, ದಿನಾಂಕ:03.08.2013 ಹಾಗೂ ದಿನಾಂಕ: 21.09.2013ರಲ್ಲಿ ಪ್ರಕಟಿಸಿದ್ದು ಇದು ಸಹಕಾರ ಸಂಘಗಳ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣಾ ನಡವಳಿ ಅಂತ್ಯಗೊಳ್ಳುವವರೆಗೆ ಜಾರಿಯಲ್ಲಿರುತ್ತದೆ. |
| 12. | ಪದಾಧಿಕಾರಿಗಳ ಮೊದಲ 2 1/2 ವರ್ಷಗಳ ಅವಧಿ ಮುಗಿಯಲಿರುವ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಉಳಿದ ಅವಧಿಗೆ ಪದಾಧಿಕಾರಿಗಳ ಚುನಾವಣೆ ನಡೆಸುವುದು. | ದಿನಾಂಕ:15.03.2014 ರಿಂದ 31.03.2014 ರ ಒಳಗಾಗಿ |
| 13. | ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಸಾಮಾನ್ಯ ಚುನಾವಣೆ ಮುಗಿದ ನಂತರ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆಯನ್ನು ನಡೆಸುವಿಕೆ. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14 ಎಜಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013 ರ ನಿಯಮ 6 ರ ಅವಕಾಶಗಳಂತೆ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸತಕ್ಕದ್ದು |

ಜಿಲ್ಲಾ ಚುನಾವಣಾಧಿಕಾರಿ, ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಗೂ ಇಲಾಖಾ ಕ್ಷೇತ್ರಾಧಿಕಾರಿಗಳು ಪ್ರಾಥಮಿಕ ಸಂಘಗಳು / ಸಹಕಾರಿಗಳ ಮತದಾರರ ಪಟ್ಟಿಗೆ ಸಿದ್ಧಪಡಿಸುವಿಕೆಗೆ ಸಂಬಂಧಿಸಿದಂತೆ ಸಂಘಗಳ / ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಸಿದ್ಧಪಡಿಸಿ ಸಲ್ಲಿಸಿದ (ಕ್ರ.ಸಂ.5 ರಲ್ಲಿ ತಿಳಿಸಿರುವಂತೆ) ಕರಡು ಪಟ್ಟಿಗಳನ್ನು ಪರಿಶೀಲಿಸುವ ಸಂಬಂಧ ಪರಿಶೀಲನಾ ತಂಡಗಳನ್ನು ರಚಿಸಿ, ಸದಸ್ಯರ ಆಕ್ಷೇಪಣೆಗಳ ಬಗ್ಗೆ ಪರಿಶೀಲಿಸಿ ಅಂತಿಮ ಪಟ್ಟಿಗಳನ್ನು (ಕ್ರ.ಸಂ. 6ರಲ್ಲಿ ತಿಳಿಸಿರುವಂತೆ) ಸಿದ್ಧಪಡಿಸಿ ದೃಢೀಕರಿಸಿ ಪ್ರಕಟಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿದೆ.

ಮೇಲೆ ವಿವರಿಸಿದಂತೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013 ರ ಅವಕಾಶಗಳು ಹಾಗೂ ಸಂಘಗಳ / ಸಹಕಾರಿಗಳ ಬೈಲಾ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಹಂತಹಂತವಾಗಿ ಕೈಗೊಳ್ಳಬೇಕಾದ ವಿವಿಧ ಪ್ರಕ್ರಿಯೆಗಳ ಬಗ್ಗೆ ಗಮನಹರಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

ಪ್ರತಿ ಅಂಶಗಳ ಬಗ್ಗೆ ಆಗಾಗ್ಗೆ ಸಂಕ್ಷಿಪ್ತವಾಗಿ ವರದಿಯನ್ನು ರಾಜ್ಯ ಸಹಕಾರ ಚುನಾವಣಾ ಆಯೋಗಕ್ಕೆ ಸಲ್ಲಿಸಲು ನಿರ್ದೇಶಿಸಿದೆ.

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು

ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ

ಸಂಖ್ಯೆ: ಸಚುಆ/ಚುನಾವಣೆ/ 6 /2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 10.07.2013

## ಸುತ್ತೋಲೆ

**ವಿಷಯ:-** ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಾಹಕರು/ಇತರೆ ನೌಕರರು ಚುನಾವಣೆಯಲ್ಲಿ ಮತ್ತು ರಾಜಕೀಯದಲ್ಲಿ ಭಾಗವಹಿಸುವಿಕೆ

**ಉಲ್ಲೇಖ:-** ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರ ಸುತ್ತೋಲೆ ಸಂ:ಆರ್‌ಎಸ್‌ಆರ್/21/ಎಕ್ಸ್‌ಎಂಸಿ/2000-01 ದಿ:21-6-2000

***

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಕ್ಕೆ ಕ್ರಮವಾಗಿ 2012 ಮತ್ತು 2013 ನೇ ವರ್ಷದಲ್ಲಿ ಮಾಡಲಾದ ತಿದ್ದುಪಡಿಗಳನ್ವಯ ಎಲ್ಲಾ ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗೆ/ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣದಲ್ಲಿ ನಡೆಸತಕ್ಕದ್ದಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸಹಕಾರ ಚುನಾವಣಾ ಆಯೋಗವು ಈಗಾಗಲೇ ಚುನಾವಣಾ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದು, ಜಿಲ್ಲಾ ಚುನಾವಣಾಧಿಕಾರಿಗಳ ನೇಮಕಾತಿ/ರಿಟರ್ನಿಂಗ್ ಆಫೀಸರ್‌ಗಳ ನೇಮಕಾತಿ ಬಗ್ಗೆ ಕ್ರಮವಿಡಲಾಗುತ್ತಿದೆ. ಅಲ್ಲದೇ ಚುನಾವಣಾ ಪ್ರಕ್ರಿಯೆಗಳನ್ನು ಸುಸೂತ್ರವಾಗಿ ನಡೆಸುವ ಸಂಬಂಧ ಆಗಾಗ್ಗೆ ಮಾರ್ಗಸೂಚಿಗಳನ್ನು ನೀಡಲಾಗುತ್ತಿದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960 ರ ನಿಯಮ 18(8) ರಲ್ಲಿ ಸಹಕಾರ ಸಂಘದ ನೌಕರರು ಚುನಾವಣೆಯಲ್ಲಿ ಮತ್ತು ರಾಜಕೀಯದಲ್ಲಿ ಭಾಗವಹಿಸುವ ಕುರಿತು ಪ್ರಸ್ತಾಪಿಸಲಾಗಿದ್ದು, ಅದರಂತೆ-

ಸಂಘದ ಯಾವ ನೌಕರನೇ ಆಗಲೀ-

(ಎ) ಯಾವುದೇ ರಾಜಕೀಯ ಪಕ್ಷದ ಅಥವಾ ರಾಜಕೀಯದಲ್ಲಿ ಭಾಗವಹಿಸುವ ಯಾವುದೇ ಸಂಘಟನೆಯ ಸದಸ್ಯನಾಗಿರತಕ್ಕದ್ದಲ್ಲ ಅಥವಾ ಅನ್ಯಥಾ ಸಂಬಂಧ ಹೊಂದಿರಬಾರದು. ಯಾವುದೇ ರಾಜಕೀಯ ಚಳುವಳಿಗೆ ಅಥವಾ ಕಾರ್ಯಕ್ರಮಗಳಿಗೆ ವಂತಿಗೆ ನೀಡುವ ಮೂಲಕ ಅಥವಾ ಯಾವುದೇ ಇತರ ರೀತಿಯ ಸಹಾಯವನ್ನು ಮಾಡತಕ್ಕದ್ದಲ್ಲ.

(ಬಿ) ಲೋಕಸಭೆಯ, ವಿಧಾನಸಭೆಯ, ವಿಧಾನಪರಿಷತ್ತಿನ ಅಥವಾ ಸ್ಥಳೀಯ ಪ್ರಾಧಿಕಾರದ ಇಲ್ಲವೇ ಸಂಘದ ಆಡಳಿತ ಮಂಡಳಿಗೆ ಇಲ್ಲವೇ ಇತರ ಪದಾಧಿಕಾರಿಗಳ ಚುನಾವಣೆಯಲ್ಲಿ ಸಂಘದ ಯಾವ ನೌಕರನೂ ಪ್ರಚಾರ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ಹಸ್ತಕ್ಷೇಪ ಮಾಡತಕ್ಕದ್ದಲ್ಲ, ಇಲ್ಲವೇ ಅದರ ಸಂಬಂಧದಲ್ಲಿ ತನ್ನ ಪ್ರಭಾವ ಬೀರತಕ್ಕದ್ದಲ್ಲ. ಆದರೆ,

(i) ಅಂತಹ ಚುನಾವಣೆಯಲ್ಲಿ ಮತಹಾಕಲು ಅರ್ಹನಾದ ಸಹಕಾರ ಸಂಘದ ಒಬ್ಬ ನೌಕರನು ಮತ ಹಾಕುವ ತನ್ನ ಹಕ್ಕನ್ನು ಚಲಾಯಿಸಬಹುದು.

(ii) ಸದ್ಯ ಜಾರಿಯಲ್ಲಿರುವ ಯಾವುದೇ ಕಾನೂನಿನನ್ವಯ ಸಹಕಾರ ಸಂಘದ ಒಬ್ಬ ನೌಕರನು ಚುನಾವಣೆಯನ್ನು ನಡೆಸಲು ತನಗೆ ವಹಿಸಿದ ಕರ್ತವ್ಯದ ಯುಕ್ತ ನಿರ್ವಹಣೆಯ ಮೂಲಕ ಸಹಾಯ ಮಾಡಿದ್ದನೆಂಬ ಒಂದೇ ಒಂದು ಕಾರಣಕ್ಕಾಗಿ ಉಪನಿಯಮ 18(8) ರ ಉಪಬಂಧಗಳನ್ನು ಉಲ್ಲಂಘಿಸಿದ್ದಾನೆಂದು ಪರಿಗಣಿಸತಕ್ಕದ್ದಲ್ಲ.

**ವಿವರಣೆ:–** ಸಹಕಾರ ಸಂಘದ ನೌಕರನು ತನ್ನ ಮೇಲೆ ತನ್ನ ವಾಹನಕ್ಕೆ ಅಥವಾ ವಾಸದ ಮನೆ ಮೇಲೆ ಯಾವುದೇ ಚುನಾವಣೆ ಚಿಹ್ನೆಯನ್ನು ಪ್ರದರ್ಶಿಸಿದಲ್ಲಿ ಅಂತಹ ಕಾರ್ಯವು ಉಪನಿಯಮದ ಅರ್ಥದಲ್ಲಿ ಚುನಾವಣೆ ಸಂಬಂಧದಲ್ಲಿ ತನ್ನ ಪ್ರಭಾವವನ್ನು ಬೀರಿದ್ದಾನೆಂದು ಅರ್ಥ.

ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 18(9) ರಲ್ಲಿ ಶಿಕ್ಷೆಗಳ ವಿಷಯವಾಗಿ ಪ್ರಸ್ತಾಪಿಸಿದ್ದು, ನಿಯಮ 18(6), 18(7) ಮತ್ತು 18(8) ರ ಉಪಬಂಧಗಳನ್ನು ಉಲ್ಲಂಘಿಸುವ ಯಾವ ನೌಕರನೇ ಆಗಲಿ ಆಡಳಿತ ಮಂಡಳಿಯವರು ನಿರ್ಧರಿಸಬಹುದಾದಂತಹ ಶಿಕ್ಷೆಗೆ ಗುರಿಯಾಗತಕ್ಕದ್ದು. ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 18(10) ರಂತೆ ಸಿಬ್ಬಂದಿ ವರ್ಗದ ಯಾವುದೇ ಸದಸ್ಯನು ಯೋಗ್ಯ ಹಾಗೂ ಶಿಫಾರಸ್ಸು ಕಾರಣಗಳಿಗಾಗಿ ಶಿಕ್ಷಿಸಲ್ಪಡಬಹುದು. ಆಡಳಿತ ಮಂಡಳಿಯು ಅಥವಾ ಅದರಿಂದ ಅಧಿಕಾರ ಪಡೆದ ವ್ಯಕ್ತಿಯು ದೋಷಾರೋಪಣೆ ಮಾಡುವ, ದಂಡ ವಿಧಿಸುವ, ಅಮಾನತ್ತಿನಲ್ಲಿಡುವ, ಹಿಂಬಡ್ತಿ ಮಾಡುವ, ಕೆಲಸದಿಂದ ವಜಾ ಮಾಡುವ ಅಥವಾ ವೇತನ ಏರಿಕೆಯನ್ನು ತಡೆಹಿಡಿಯುವ ಮುಕ್ತ ಅಧಿಕಾರವುಳ್ಳವನಾಗಿರತಕ್ಕದ್ದು.

ಅಲ್ಲದೇ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 68 ರಲ್ಲಿ ಅಪರಾಧಗಳು ಮತ್ತು ದಂಡನೆಗಳ ಬಗ್ಗೆ ವಿವರಿಸಲಾಗಿದೆ. ಅದರಂತೆ ಕಾನೂನಿಗೆ ವಿರುದ್ಧವಾದ ಕಾರ್ಯನಿರ್ವಹಣೆಯನ್ನು ಮಾಡುವ, ಚುನಾವಣೆ ನಡೆಸುವ ಬಗ್ಗೆ ಶಾಸನಬದ್ಧ ಕರ್ತವ್ಯಗಳ ನಿರ್ವಹಣೆಯಲ್ಲಿ ವಿಫಲವಾದಲ್ಲಿ ಪ್ರಜಾಪ್ರತಿನಿಧಿ ಅಧಿನಿಯಮ 1951 ರಂತೆ 'ಭ್ರಷ್ಟ ಪದ್ಧತಿಗಳು' ಎಂದು ಪರಿಗಣಿತವಾಗುವುದರಿಂದ ಅಂತಹ ಅಪರಾಧವೆಸಗಿದ ಮುಖ್ಯಕಾರ್ಯನಿರ್ವಾಹಕ, ಯಾವುದೇ ಸಹಕಾರಿ ನೌಕರರ ವಿರುದ್ಧ ಅಪರಾಧವೆಸಗಿದ ಬಾಬ್ತು ದಂಡನೆ ಸೇರಿದಂತೆ ಸೆರೆಮನೆ ವಾಸದ ಶಿಕ್ಷೆಯನ್ನು ವಿಧಿಸಲು ಅವಕಾಶವಿರುತ್ತದೆ.

ಮೇಲ್ಕಂಡ ಹಿನ್ನೆಲೆಯಲ್ಲಿ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮವಿಡಲು ಆಡಳಿತ ಮಂಡಳಿಗೆ ಸೂಚನೆ ನೀಡುವಂತೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ನಿರ್ದೇಶನ ನೀಡಿದೆ.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**

**ಇವರಿಗೆ:–**

1) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು
2) ಎಲ್ಲಾ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು
3) ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಚುನಾವಣೆ/15/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 26.07.2013

**ಸಹಕಾರ ಸಂಘಗಳ ಉಪನಿಬಂಧಕರು,**
**ಹಾಗೂ ಜಿಲ್ಲಾ ಚುನಾವಣಾಧಿಕಾರಿ,**

______________ **ಜಿಲ್ಲೆ.**

ಮಾನ್ಯರೇ,

**ವಿಷಯ:-** ಸಹಕಾರ ಸಂಘಗಳ ಆಡಳಿತ ಮಂಡಳಿಗೆ/ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವಿಕೆ ಜಿಲ್ಲಾ ಚುನಾವಣಾಧಿಕಾರಿಯು ಕಾನೂನಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವಿಕೆ ಕುರಿತು.

**ಉಲ್ಲೇಖ:-** ಸರ್ಕಾರದ ಅಧಿಸೂಚನೆ ಸಂ: ಸಿಒ 14 ಸಿಎಲ್ಎಂ 2013 ಬೆಂಗಳೂರು ದಿನಾಂಕ:10-7-2013

***

ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗೆ/ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವ ಕುರಿತು, ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಚುನಾವಣೆ ನಡೆಸುವ ಬಗ್ಗೆ ಸಹಕಾರ ಚುನಾವಣಾ ಆಯೋಗವು ವಿವಿಧ ವರ್ಗಗಳ ಸಹಕಾರ ಸಂಘಗಳಿಗೆ ಚುನಾವಣಾ ದಿನಾಂಕಗಳನ್ನು ನಿಗದಿಪಡಿಸಿ ಅಧಿಸೂಚನೆಯನ್ನು ಹೊರಡಿಸಿರುವ ಹಾಗೂ ಜಿಲ್ಲಾ ಚುನಾವಣಾಧಿಕಾರಿಯಾಗಿ ನಿಮ್ಮನ್ನು ನೇಮಿಸಿ ಆದೇಶ ನೀಡಿರುವ ವಿಷಯ ನಿಮಗೆ ತಿಳಿದಿದೆ. ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಹಾಗೂ ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 (ಇತ್ತೀಚಿನವರೆಗೆ ಆಗಿರುವ ತಿದ್ದುಪಡಿಗಳನ್ನು ಗಮನದಲ್ಲಿಟ್ಟುಕೊಂಡು), ಸೌಹಾರ್ದ ಸಹಕಾರಿಗಳ ಸಂಬಂಧ ಸೌಹಾರ್ದ ಸಹಕಾರಿ ಅಧಿನಿಯಮಗಳನ್ವಯ ಚುನಾವಣೆಯನ್ನು ನಡೆಸಬೇಕಾಗಿರುತ್ತದೆ. ಕರ್ನಾಟಕ ಸರ್ಕಾರವು ಉಲ್ಲೇಖಿತ ಅಧಿಸೂಚನೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013 ಅನ್ನು ರೂಪಿಸಿದ್ದು (ಸಂಕ್ಷಿಪ್ತವಾಗಿ 'ನಿಯಮ') ಈ ನಿಯಮಗಳು ದಿನಾಂಕ:10-7-2013 ರಿಂದಲೇ ಜಾರಿಗೆ ಬಂದಿರುತ್ತದೆ. ಸದರಿ ನಿಯಮಗಳನ್ವಯ ಜಿಲ್ಲಾ ಚುನಾವಣಾಧಿಕಾರಿಯು ಈ ಕೆಳಕಂಡ ಅಂಶಗಳ ಕುರಿತು ಸಕಾಲಿಕವಾಗಿ ಅಗತ್ಯ ಕ್ರಮವಿಡತಕ್ಕದ್ದಾಗಿದೆ.

(1) ನಿಯಮ 13ಸಿ ಅನ್ವಯ ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿಯಂತ್ರಣ ಹಾಗೂ ನಿರ್ದೇಶನಗಳಿಗೊಳಪಟ್ಟು ಜಿಲ್ಲೆಯೊಳಗೆ ನೋಂದಾಯಿತ ಕಛೇರಿಗಳನ್ನು ಹೊಂದಿರುವ ಎಲ್ಲಾ ಸಹಕಾರ ಸಂಘಗಳ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವ ಸಂಬಂಧ ಮೇಲ್ವಿಚಾರಣೆ ನಡೆಸುವುದು ಮತ್ತು ಆಯೋಗವು ಈ ಸಂಬಂಧ ವಹಿಸುವ ಕೆಲಸಗಳನ್ನು ನಿರ್ವಹಿಸತಕ್ಕದ್ದು.

(2) ನಿಯಮ 13ಸಿ(2) ಅನ್ವಯ ಸಹಕಾರ ಚುನಾವಣಾ ಆಯೋಗಕ್ಕೆ ನಿಯೋಜಿಸುವ ಜಿಲ್ಲಾ ಚುನಾವಣಾಧಿಕಾರಿ ಸೇರಿದಂತೆ ಸರ್ಕಾರದ ಅಧಿಕಾರಿಗಳು ಮತ್ತು ನೌಕರರು, ಆಯೋಗದಿಂದ ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡ ದಿನಾಂಕದಿಂದ ಚುನಾವಣಾ ಪ್ರಕ್ರಿಯೆ ಮುಗಿದು, ಚುನಾವಣಾ ಫಲಿತಾಂಶ ಪ್ರಕಟವಾಗುವವರೆಗೆ ಸಹಕಾರ ಚುನಾವಣಾ ಆಯೋಗಕ್ಕೆ ನಿಯೋಜನೆಗೊಂಡಿರುತ್ತಾರೆಂದು ಭಾವಿಸತಕ್ಕದ್ದು.

(3) ನಿಯಮ 13ಡಿ ಅನ್ವಯ ಮತದಾರರ ಪಟ್ಟಿ ಮತ್ತು ಚುನಾವಣಾ ವೇಳಾಪಟ್ಟಿ ಸಿದ್ಧಪಡಿಸುವ ಸಂಬಂಧ ಅಗತ್ಯ ಕ್ರಮ ಕೈಗೊಂಡು, ಸಹಕಾರ ಚುನಾವಣಾ ಆಯೋಗಕ್ಕೆ ಗೊತ್ತುಪಡಿಸಲಾಗಿರುವ ಕೆಲಸಕಾರ್ಯಗಳನ್ನು ಆಯೋಗದ ಪರವಾಗಿ ಜಿಲ್ಲಾ ಚುನಾವಣಾಧಿಕಾರಿಯಾಗಿರುವ ನೀವು ನಿಮ್ಮ ಹಂತದಲ್ಲಿ ನಿರ್ವಹಿಸುವಂತೆ ನಿರ್ದೇಶಿಸಲಾಗಿದೆ.

(4) ನಿಯಮ 13ಇ ರೀತ್ಯಾ ಸಹಕಾರ ಚುನಾವಣಾ ಆಯೋಗವು ಸಹಕಾರ ಸಂಘಗಳ ಆಡಳಿತ ಮಂಡಳಿಗೆ/ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವ ಸಂಬಂಧ ರಿಟರ್ನಿಂಗ್ ಆಫೀಸರ್‌ಗಳನ್ನು ನೇಮಕ ಮಾಡುತ್ತಿದ್ದು, ನಿಯಮಗಳಲ್ಲಿ ಗೊತ್ತುಪಡಿಸಿರುವಂತೆ, ಅವರು ತಮ್ಮ ಕೆಲಸಕಾರ್ಯಗಳನ್ನು ಕಾನೂನಿಗೆ ಅನುಗುಣವಾಗಿ ಹಾಗೂ ಸಮರ್ಪಕವಾಗಿ ನಿರ್ವಹಿಸುತ್ತಿರುವ ಬಗ್ಗೆ ಮೇಲ್ವಿಚಾರಣೆ ನಡೆಸುವುದು.

(5) ನಿಯಮ 13(ಎಫ್) ರನ್ವಯ ಜಿಲ್ಲಾ ಚುನಾವಣಾಧಿಕಾರಿಯು ಪ್ರತಿಯೊಂದು ಮತದಾನ ಕೇಂದ್ರಕ್ಕಾಗಿ ಒಬ್ಬ ಪ್ರಿಸೈಡಿಂಗ್ ಆಫೀಸರ್‌ನ್ನು (ಅಧ್ಯಕ್ಷಾಧಿಕಾರಿ) ಮತ್ತು ತಾನು ಅವಶ್ಯವೆಂದು ಭಾವಿಸುವಂಥ ಪೋಲಿಂಗ್ ಅಧಿಕಾರಿ ಅಥವಾ ಅಧಿಕಾರಿಗಳನ್ನು ನೇಮಕ ಮಾಡಬಹುದು.

(6) ಈಗಾಗಲೇ ತಿಳಿಸಿರುವಂತೆ ನಿಯಮ 14 ರ ಮೇರೆಗೆ ಜಿಲ್ಲಾ ಚುನಾವಣಾಧಿಕಾರಿಯು ಸಹಕಾರ ಚುನಾವಣಾ ಆಯೋಗದ ಅನುಮೋದನೆ ಪಡೆದು ಸಹಕಾರ ಸಂಘಗಳ ಸಾಮಾನ್ಯ ಚುನಾವಣೆ ಸಂಬಂಧ ನಮೂನೆ XI ರಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. ಸದರಿ ಅಧಿಸೂಚನೆಯಲ್ಲಿ 14(2) ರಲ್ಲಿ ನಿಗದಿಪಡಿಸಿರುವಂತೆ ವಿವರಗಳು ಇರತಕ್ಕದ್ದು. ನಂತರ ರಿಟರ್ನಿಂಗ್ ಆಫೀಸರ್ ನಮೂನೆ XII ರನ್ನು 15 ದಿನಗಳಿಗಿಂತ ಮೊದಲು ಹೊರಡಿಸುವ ಬಗ್ಗೆ ನಿಗಾವಹಿಸುವುದು. ಅಲ್ಲದೇ ನಿಯಮ 14(3) ರೀತ್ಯಾ ರಿಟರ್ನಿಂಗ್ ಆಫೀಸರ್ ಅಗತ್ಯ ಕ್ರಮವಿಡುವ ಬಗ್ಗೆ ನೋಡಿಕೊಳ್ಳುವುದು.

(7) ರಿಟರ್ನಿಂಗ್ ಆಫೀಸರ್ಸ್/ಅಧ್ಯಕ್ಷಾಧಿಕಾರಿಗಳು/ ಮತದಾನ ಅಧಿಕಾರಿಗಳು / ನೌಕರರಿಗೆ ತಮ್ಮ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವ ಕುರಿತು ಸೂಕ್ತ ತರಬೇತಿ ವ್ಯವಸ್ಥೆ ಮಾಡುವುದು.

(8) ನಿಯಮ 14ಎಜಿ ಅನ್ವಯ, ಚುನಾವಣಾಧಿಕಾರಿಯು ಆಡಳಿತ ಮಂಡಳಿಗೆ ಚುನಾವಣೆ ನಡೆದ ನಂತರ, ಪದಾಧಿಕಾರಿಗಳ ಚುನಾವಣೆಯನ್ನು ಅವರೇ ನಡೆಸತಕ್ಕದ್ದಾಗಿದ್ದು ಈ ಸಂಬಂಧ ಸೂಕ್ತ ಸೂಚನೆಗಳನ್ನು ನೀಡುವುದು.

(9) ಸಹಕಾರ ಚುನಾವಣಾ ಆಯೋಗವು ಪತ್ರ ಸಂಖ್ಯೆ: ಸಚುಆ/ಚುನಾವಣೆ/22/2013-14 ದಿನಾಂಕ:10-7-2013 ರಂತೆ ಹೊರಡಿಸಿರುವ ಚೆಕ್‌ಲಿಸ್ಟ್‌ನಂತೆ ಸೂಕ್ತ ಕ್ರಮವಿಡುವುದು ಮತ್ತು ಹಂತಹಂತವಾಗಿ ಕ್ರಮಕೈಗೊಂಡು ಸಹಕಾರ ಚುನಾವಣಾ ಆಯೋಗಕ್ಕೆ ವರದಿ ಮಾಡತಕ್ಕದ್ದು.

(10) ನಿಯಮ 13 D (8) ರನ್ವಯ ಪ್ರತಿ ಸಹಕಾರ ಸಂಘದ ಮತದಾರರ ಪಟ್ಟಿಯನ್ನು ಸಂಬಂಧಿಸಿದ ಸಂಘದಲ್ಲಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಯ ಕಛೇರಿಯಲ್ಲಿ ವೀಕ್ಷಣೆಗೆ ಮುಕ್ತವಾಗಿಟ್ಟಿರತಕ್ಕದ್ದು.

ತಮ್ಮ ವಿಶ್ವಾಸಿ,

(ಎನ್.ಸಿ. ಮುನಿಯಪ್ಪ)

**ಸಹಕಾರ ಚುನಾವಣಾ ಆಯುಕ್ತರು**

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/12/ಚು.ಸಿದ್ಧತೆ/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 26.07.2013

ಸಹಕಾರ ಸಂಘಗಳ ಉಪನಿಬಂಧಕರು ಹಾಗೂ
ಜಿಲ್ಲಾ ಚುನಾವಣಾಧಿಕಾರಿ

____________________ ಜಿಲ್ಲೆ

____________________________

ಮಾನ್ಯರೇ,

**ವಿಷಯ:-** ಸಹಕಾರ ಸಂಘಗಳ ಆಡಳಿತ ಮಂಡಳಿ/ಪದಾಧಿಕಾರಿಗಳ ಚುನಾವಣೆ ಸಂಬಂಧ ಪೂರ್ವಸಿದ್ಧತೆ ಮಾಡಿಕೊಳ್ಳುವಿಕೆ.

**ಉಲ್ಲೇಖ:-** ಸಹಕಾರ ಚುನಾವಣಾ ಆಯೋಗ ಅಧಿಸೂಚನೆ ಸಚುಅ/ಚುನಾವಣೆ/22/2013-14, ದಿನಾಂಕ:03.07.2013, 10.07.2013, 12.07.2013, 16.07.2013, 19.07.2013

***

ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗವು ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳ ಆಡಳಿತ ಮಂಡಳಿಗೆ/ಪದಾಧಿಕಾರಿಗಳ ಚುನಾವಣೆ ಸಂಬಂಧ ಉಲ್ಲೇಖಿತ ಅಧಿಸೂಚನೆ/ಆದೇಶಗಳಲ್ಲಿ ಈಗಾಗಲೇ ಚುನಾವಣಾ ದಿನಾಂಕಗಳನ್ನು ಗೊತ್ತುಪಡಿಸಿದೆ, ಹಾಗೂ ಸಂಘವಾರು ರಿಟರ್ನಿಂಗ್ ಆಫೀಸರ್‌ಗಳನ್ನು ನೇಮಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ. ಯಾವುದೇ ಸಹಕಾರ ಸಂಘದ ಆಡಳಿತ ಮಂಡಳಿಗೆ ಯಾವುದೇ ಕ್ಷೇತ್ರ / ಪ್ರದೇಶದಿಂದ ಚುನಾಯಿಸಬೇಕಾದ ಒಟ್ಟು ಸ್ಥಾನಗಳಿಗಿಂತ ಹೆಚ್ಚಿನ ಸಂಖ್ಯೆಯ ಸ್ಪರ್ಧಿಸುವ ಅಭ್ಯರ್ಥಿಗಳು ಇದ್ದಲ್ಲಿ ನಿಯಮ 14G(1) ರೀತ್ಯಾ ಚುನಾವಣೆಯನ್ನು ಕಾನೂನಿಗೆ ಅನುಗುಣವಾಗಿ ನಡೆಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಗಳು ಮತದಾನಕ್ಕೆ ಅವಶ್ಯವಾಗುವ ಸಾಮಗ್ರಿಗಳ

ಬಗ್ಗೆ ಪೂರ್ವಸಿದ್ಧತೆ ಮಾಡಿಕೊಳ್ಳಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಚೆಕ್‌ಲಿಸ್ಟ್ ಸಿದ್ಧಪಡಿಸಿದ್ದು ಈ ಕೂಡ ಲಗತ್ತಿಸಿದೆ. ಈ ಬಗ್ಗೆ ರಿಟರ್ನಿಂಗ್ ಆಫೀಸರ್‌ಗಳಿಗೆ ಸೂಕ್ತ ತಿಳುವಳಿಕೆ ನೀಡುವಂತೆ ಸೂಚಿಸಿದೆ.

**ತಮ್ಮ ವಿಶ್ವಾಸಿ,**

**(ಎನ್.ಸಿ. ಮುನಿಯಪ್ಪ)**
**ಸಹಕಾರ ಚುನಾವಣಾ ಆಯುಕ್ತರು**
**ಬೆಂಗಳೂರು**

**ಪ್ರತಿಗಳು:-**

1. ಸಹಕಾರ ಸಂಘಗಳ ಜಂಟಿ ನಿಬಂಧಕರು,
   __________ ಪ್ರಾಂತ, __________
2. ಸಹಕಾರ ಸಂಘಗಳ ಸಹಾಯಕ ನಿಬಂಧಕರು __________ ಉಪವಿಭಾಗ
   __________

## ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆಯ ಸಂಬಂಧ ಚುನಾವಣಾ ಸಾಮಗ್ರಿಗಳ ಅವಶ್ಯಕತೆ ಬಗ್ಗೆ ಚೆಕ್‌ಲಿಸ್ಟ್

| ಕ್ರ.ಸಂ | ವಿವರಗಳು | ಷರಾ |
|---|---|---|
| 1 | ಅರ್ಹ ಮತದಾರರ ಅಂತಿಮ ಪಟ್ಟಿ – ಕ್ಷೇತ್ರವಾರು ಇದ್ದಲ್ಲಿ ಕ್ಷೇತ್ರವಾರು ಮತದಾರರ ಪಟ್ಟಿ ಮತಗಟ್ಟೆಗಳಿಗೆ ಅನುಗುಣವಾಗಿ – ರಿಟರ್ನಿಂಗ್ ಆಫೀಸರ್ / ಅಧ್ಯಕ್ಷಾಧಿಕಾರಿಗಳ / ಮತಗಟ್ಟೆ ಅಧಿಕಾರಿ ಗುರ್ತು ಮಾಡುವ ಪ್ರತಿ ಸೇರಿದಂತೆ ಅಗತ್ಯವಾದ ಪ್ರತಿಗಳನ್ನು ರಿಟರ್ನಿಂಗ್ ಆಫೀಸರ್ಸ್ ಸಂಘದ ಮೂಲಕ ಸಿದ್ದಪಡಿಸತಕ್ಕದ್ದು. (ನಿಯಮ 13 ಡಿ ಅನ್ವಯ) | |
| 2 | ಮತ ಪೆಟ್ಟಿಗೆಗಳು – ಸದಸ್ಯರ ಸಂಖ್ಯೆ /ಕ್ಷೇತ್ರಗಳಿಗೆ ಅನುಗುಣವಾಗಿ ಟಿನ್ ಅಥವಾ ಯಾವುದೇ ಲೋಹದಿಂದ ಮಾಡಿದ್ದಾಗಿರತಕ್ಕದ್ದು ಮತಪೆಟ್ಟಿಗೆಯನ್ನು ಬಾಡಿಗೆ ಮೇರೆಗೆ ಪಡೆಯುವ ಬಗ್ಗೆ ತಾಲ್ಲೂಕಿನ ತಹಸಿಲ್ದಾರ್‌ರವರನ್ನು ಸಂಪರ್ಕಿಸಿ ಚರ್ಚಿಸಬಹುದಾಗಿದೆ. ಅಥವಾ ಸ್ಥಳೀಯವಾಗಿ ವ್ಯವಸ್ಥೆ ಮಾಡತಕ್ಕದ್ದಾಗಿದೆ. | |
| 3 | ಚುನಾವಣೆ ಸಂಬಂಧ ಅಗತ್ಯವಾದ ನಮೂನೆಗಳು ನಮೂನೆ XIII, XIV, XV, XVI, XVII, XVIII, XIX, XX, XXI, XXII, XXIII, XXIV ನಿಯಮ 14 A (1), 14 B(4) 14C(1) , 14D(1) ಮತ್ತು 14E(4) 14(L) (1)], 14V, 14G(2), 14G(3) 14X(2), 14Y, 14Z, 14AG(4) ರೀತ್ಯಾ | |
| 4 | ಮತ ಪತ್ರಗಳು (Ballot papers) | |
| 5 | ನಿಯಮ 14'0' ರೀತ್ಯಾ ಮತದಾರರನ್ನು ಗುರ್ತಿಸುವ ಸಂಬಂಧ ಗುರುತಿನ ಕಾರ್ಡ್ ಹಾಜರುಪಡಿಸಿ, ಸಹಿ ಮಾಡಿ ಗುರುತಿನ ಚೀಟಿ ಪಡೆಯುವ ಬಗ್ಗೆ ರಿಜಿಸ್ಟರ್ ಇಡತಕ್ಕದ್ದು ಮತ್ತು ಸಂಘದ ಮುಖ್ಯ ಕಾರ್ಯನಿರ್ವಾಹಕನು ಸದಸ್ಯರಿಗೆ ನೀಡಿರುವ ಬಗ್ಗೆ ಪರಿಶೀಲಿಸುವುದು. | |
| 6 | ಅನಕ್ಷರಸ್ಥ, ಕುರುಡು ಮತ್ತು ದುರ್ಬಲ ಮತದಾರರು ಸಂಗಡಿಗನನ್ನು ಕರೆ ತರುವ ಸಂಬಂಧ ತ:ಖ್ತೆ [ನಿಯಮ 14S(2)] ಇದರಲ್ಲಿ ಸಂಗಡಿಗನ ಸಹಿ ಪಡೆಯುವುದು | |
| 7 | ಅಳಿಸಲಾಗದ ಶಾಯಿ/ ಪ್ಲಾಸ್ಟಿಕ್ ಕಪ್ | |
| 8 | 'X' ಗುರುತಿನ ರಬ್ಬರ್ ಮೊಹರುಗಳು | |
| 9 | ಬೆಂಕಿಪೊಟ್ಟಣ | |
| 10 | ಮೊಹರು ಮಾಡುವ ಮೇಣ (Sealing wax) | |
| 11 | ಸ್ಟ್ಯಾಂಪ್ ಪ್ಯಾಡ್ | |
| 12 | ರಿಟರ್ನಿಂಗ್ ಆಫೀಸರ್ (RO) / ಅಧ್ಯಕ್ಷಾಧಿಕಾರಿ (PRO) ರಬ್ಬರ್ ಮೊಹರುಗಳು | |

| | | |
|---|---|---|
| 13 | ರಿಟರ್ನಿಂಗ್ ಆಫೀಸರ್ (RO) / ಅಧ್ಯಕ್ಷಾಧಿಕಾರಿ (PRO) ಲೋಹದ ಮೊಹರುಗಳು | |
| 14 | ಮತಗಟ್ಟೆಯಿಂದ ಅಥವಾ ಮತ ನಡೆಯುವ ಸ್ಥಳದಿಂದ 100 ಮೀಟರ್ ವ್ಯಾಪ್ತಿಯ ಒಳಗೆ ಮತ ಪಡೆಯಲು ಪ್ರಚಾರ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇದಿಸುವ ಬಗ್ಗೆ ಸೂಚನೆ. | |
| 15 | ಪೆನ್ಸಿಲ್ ಮತ್ತು ರಬ್ಬರ್ | |
| 16 | ಸ್ಕೇಲ್ | |
| 17 | ಗುಂಡು ಸೂಜಿ | |
| 18 | ಕವರುಗಳು | |
| 19 | ಬಾಲ್ ಪೆನ್ | |
| 20 | ಬಿಳಿಹಾಳೆ | |
| 21 | ಗೋಂದು | |
| 22 | ಬ್ಲೇಡ್ | |
| 23 | ಕ್ಯಾಂಡಲ್ಸ್ | |
| 24 | ಟೋವನ್‌ದಾರ | |
| 25 | ಕಾರ್ಬನ್ ಪೇಪರ್ | |
| 26 | ಬಟ್ಟೆಯ ತುಂಡು | |
| 27 | ರಟ್ಟಿನ ಕಾರ್ಡ್ ಬೋರ್ಡ್ ತುಂಡುಗಳು | |
| 28 | ವೋಟಿಂಗ್ ಕಂಪಾರ್ಟ್‌ಮೆಂಟ್‌ಗಳು | |
| 29 | ಡ್ರಾಯಿಂಗ್ ಪೆನ್ನುಗಳು | |
| 30 | ರಬ್ಬರ್ ಬ್ಯಾಂಡು | |
| 31 | ಸ್ಪಾಂಜ್ | |
| 32 | ಲೋಹದ ಸ್ಕೇಲ್ | |
| 33 | ಅಂಟಿಸುವ ಟೇಪ್ | |
| 34 | ಮತ ಪೆಟ್ಟಿಗೆಗೆ ಅಂಟಿಸುವ ಲೇಬಲ್‌ಗಳು (ಒಳಗಡೆಗೆ ಹಾಕುವ ಮತ್ತು ಹೊರಗಡೆ ಮತ ಪೆಟ್ಟಿಗೆ ಮೇಲೆ ಅಂಟಿಸಲು) | |
| 35 | ಮತದಾನ ಸಿಬ್ಬಂದಿಗೆ ಸಂಭಾವನೆ ಪಾವತಿ ಬಗ್ಗೆ ಬಿಲ್ಲು ಸಿದ್ಧ ಪಡಿಸುವಿಕೆ | |
| 36 | ಇನ್ನಿತರ ಅಗತ್ಯವಾಗಿಬೇಕಾಗುವ ಚುನಾವಣಾ ಸಾಮಗ್ರಿಗಳು | |

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960 ರ ನಿಯಮ 14 AA ರೀತ್ಯಾ ಚುನಾವಣೆಗೆ ಸಂಬಂಧಿಸಿದಂತೆ ಭರಿಸಬೇಕಾದ ಸ್ಟೇಷನರಿ, ಪ್ರಿಂಟಿಂಗ್, ಅಂಚೆವೆಚ್ಚ, ಜೆರಾಕ್ಸ್, ಫ್ಯಾಕ್ಸ್, ಮತಪೆಟ್ಟಿಗೆಬಾಡಿಗೆ, ಅಳಿಸಲಾಗದ ಶಾಯಿ, ಆರಕ್ಷಕರಿಂದ ಭದ್ರತಾ ವ್ಯವಸ್ಥೆ ವೆಚ್ಚ, ಮತದಾರರ ಪಟ್ಟಿ ಸಿದ್ದಪಡಿಸುವಿಕೆ, ಪ್ರವಾಸ ಭತ್ಯೆ ಇತರರ ಭತ್ಯೆ, ರಿಟರ್ನಿಂಗ್ ಆಫೀಸರ್ /ಸಹಾಯಕ ರಿಟರ್ನಿಂಗ್ ಆಫೀಸರ್/ ಅಧ್ಯಕ್ಷಾಧಿಕಾರಿ ಮತ್ತು ಮತದಾನ ಸಿಬ್ಬಂದಿ ವೆಚ್ಚವನ್ನು ಸಂಬಂಧಿಸಿದ ಸಹಕಾರ ಸಂಘಗಳೇ ಭರಿಸತಕ್ಕದ್ದಾಗಿದೆ ಈ ಬಗ್ಗೆ ರಿಟರ್ನಿಂಗ್ ಆಫೀಸರ್‌ಗಳಿಗೆ ಜಿಲ್ಲಾ ಚುನಾವಣಾಧಿಕಾರಿಯು ಸೂಕ್ತ ಸೂಚನೆಗಳನ್ನು ನೀಡುವುದು.

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು
ಬೆಂಗಳೂರು

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/16/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 05.08.2013

**-:ಸುತ್ತೋಲೆ:-**

**ವಿಷಯ:-** ಸಹಕಾರ ಸಂಘಗಳ/ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವಿಕೆ ರಿಟರ್ನಿಂಗ್ ಆಫೀಸರ್‌ಗಳಿಗೆ ಮಾರ್ಗಸೂಚಿಗಳು.

**ಉಲ್ಲೇಖ:-** ಸಹಕಾರ ಚುನಾವಣಾ ಆಯೋಗದ ಅಧಿಸೂಚನೆ ಸಂಖ್ಯೆ:ಸಚುಆ/ ಚುನಾವಣೆ/22/2013-14, ದಿನಾಂಕ:03.07.2013, 10.07.2013, 12.07.2013.

***

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಅಡಿಯಲ್ಲಿ ಈಗಾಗಲೇ ನೋಂದಣಿಯಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿತಗೆ ಪ್ರಾಥಮಿಕ ಹಂತದಲ್ಲಿ ಚುನಾವಣೆ ನಡೆಸುವ ಕುರಿತು ರಾಜ್ಯ ಸಹಕಾರ ಚುನಾವಣಾ ಆಯೋಗವು, ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸುವ/ ಚುನಾವಣಾ ದಿನಾಂಕ ನಿಗದಿಪಡಿಸುವ ಪ್ರಕ್ರಿಯೆಯನ್ನು ಈಗಾಗಲೇ ಪ್ರಾರಂಭಿಸಿದೆ. ಹೊಸದಾಗಿ ನೋಂದಣಿಯಾದ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗುತ್ತಿದೆ. ಈ ರೀತಿ ನೇಮಿಸಲಾದ ಚುನಾವಣಾಧಿಕಾರಿಯು (Returning officer) ಚುನಾವಣಾ ಪ್ರಕ್ರಿಯೆಯನ್ನು ಸಹಕಾರ ಸಂಘಗಳ ಕಾನೂನು ಹಾಗೂ ನಿಯಮಾವಳಿಗಳು ಸಂಘದ ಬೈಲಾ ಅವಕಾಶಗಳ ರೀತ್ಯಾ ಹಾಗೂ ರಾಜ್ಯ ಸಹಕಾರ ಚುನಾವಣಾ ಆಯೋಗವು ಆಗಾಗ್ಗೆ ನೀಡುವ ನಿರ್ದೇಶನ / ಮಾರ್ಗಸೂಚಿಗಳನ್ವಯ ನಡೆಸತಕ್ಕದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಿಟರ್ನಿಂಗ್ ಆಫೀಸರ್ ಕಾರ್ಯನಿರ್ವಹಣೆ ಕುರಿತಂತೆ ಕೆಳಕಂಡ ಮಾರ್ಗಸೂಚಿಗಳನ್ನು ನೀಡಲಾಗಿದೆ.

1. ಸಹಕಾರಿ ಸಂಘದ / ಸೌಹಾರ್ಧ ಸಹಕಾರಿಯ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ರಿಟರ್ನಿಂಗ್ ಆಫೀಸರ್ ಆಗಿ ನೇಮಕಗೊಂಡ ಅಧಿಕಾರಿಯು, ತನಗೆ ನೇಮಕಾತಿ ಆದೇಶ ತಲುಪಿದ ಕೂಡಲೇ ಸಂಬಂಧಿಸಿದ ಸಹಕಾರಿ ಸಂಘವನ್ನು ಸಂಪರ್ಕಿಸಿ, ಸಂಘಕ್ಕೆ ಭೇಟಿ ನೀಡಿ ಆಡಳಿತ ಮಂಡಳಿ ಚುನಾವಣೆ ಸಂಬಂದ ಸಂಘದ ಉಪನಿಯಮಗಳು/ ಸಹಕಾರ ಸಂಘಗಳ ಅಧಿನಿಯಮ ಹಾಗೂ ನಿಯಮಗಳ ಅವಕಾಶದಂತೆ ಸಂಘದ ಮುಖ್ಯ ಕಾರ್ಯನಿರ್ವಾಹಕನು ನಿರ್ವಹಿಸಿರುವ ಪ್ರಕ್ರಿಯೆಗಳ ಬಗ್ಗೆ ಅಂದರೆ ಮತದಾರರ ಪಟ್ಟಿ ಸಿದ್ದಪಡಿಸಿರುವಿಕೆ, ಸದಸ್ಯರಿಗೆ ಗುರತಿನ ಚೀಟಿ ನೀಡುವಿಕೆ, ಚುನಾವಣೆ ನಡೆಸುವ ಸ್ಥಳ / ಕಟ್ಟಡದ ವ್ಯವಸ್ಥೆ ಇತ್ಯಾದಿ ಬಗ್ಗೆ ಪರಿಶೀಲಿಸಿ /ಸಂಘಕ್ಕೆ ಸೂಚನೆ ನೀಡಿ ಸೂಕ್ತ ಏರ್ಪಾಡು ಮಾಡತಕ್ಕದ್ದು.

2. ಸಂಘದ ಉಪನಿಯಮಗಳು /ನೋಂದಣಿ ಪ್ರಮಾಣ ಪತ್ರ ಪರಿಶೀಲಿಸಿ ಸಂಘದ ನೋಂದಣಿಯಾದ ಹೆಸರನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಸಂಘದ ಉಪನಿಯಮಗಳಿಗೆ ಆಗಾಗ್ಗೆ ಆಗಿರುವ ತಿದ್ದುಪಡಿಗಳನ್ನು ಗಮನಿಸುವುದು ಸಂಘದ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಸಂಬಂಧ ಚುನಾಯಿಸಬೇಕಾದ ಒಟ್ಟು ಸ್ಥಾನಗಳು ಕ್ಷೇತ್ರವಾರು ಅವಕಾಶ ಇದೆಯೆ?, ಮೀಸಲಾತಿಯಾದ ಸ್ಥಾನಗಳು [ಅಧಿನಿಯಮ ಪ್ರಕರಣ 28 A] ಇನ್ನಿತರ ಅಂಶಗಳ ಬಗ್ಗೆ ಪರಿಶೀಲಿಸತಕ್ಕದಾಗಿದೆ.

3. ಸಹಕಾರ ಚುನಾವಣಾ ಆಯೋಗದ ಅನುಮೋದನೆಗೊಳಪಟ್ಟು ಚುನಾವಣಾ ದಿನಾಂಕಕ್ಕೆ ಕಡೇ ಪಕ್ಷ 15 ಸ್ಪಷ್ಟ ದಿವಸಗಳ ಮುಂಚೆ ಆಡಳಿತ ಸಮಿತಿ ನಿರ್ದೇಶನಕ್ಕೆ ಚುನಾವಣೆ ಸಂಬಂದ ಚುನಾವಣಾಧಿಕಾರಿಯು (RO) ಸಂಬಂಧಿಸಿದ ಸಂಘದ ಸಮಗ್ರ ಚುನಾವಣಾ ವೇಳಾ ಪಟ್ಟಿಯನ್ನು ಸಿದ್ಧಪಡಿಸಿ ರಿಟರ್ನಿಂಗ್ ಆಫೀಸರ್ ಅಥವಾ ಸಹಾಯಕ ರಿಟರ್ನಿಂಗ್ ಆಫೀಸರ್‌ರವರು ಪರಿಶೀಲಿಸಿ ನಂತರ ಸಹಿಯೊಂದಿಗೆ ಅರ್ಹ ಸದಸ್ಯರಿಗೆ ಕಳುಹಿಸ ತಕ್ಕದಾಗಿದೆ. [ನಿಯಮ 13 E (2) (ii) ]
4. ಜಿಲ್ಲಾ ಚುನಾವಣಾಧಿಗಳೊಡನೆ ಸಮಾಲೋಚನೆ ನಡೆಸಿ ಅಗತ್ಯವಾದ ಮತಗಟ್ಟೆಗಳನ್ನು ಸಿದ್ಧಪಡಿಸಿ ರೂಪಿಸುವಿಕೆ.
5. ಚುನಾವಣೆ ಸಂಬಂಧ ಚುನಾವಣಾ ನೋಟೀಸ್‌ನಲ್ಲಿ ಚುನಾವಣಾಧಿಕಾರಿ ಅಥವಾ ಸಹಾಯಕ ಚುನಾವಣಾಧಿಕಾರಿಯ ಸಹಿಯೊಡನೆ ಚುನಾವಣಾ ವೇಳಾಪಟ್ಟಿಯ ಜೊತೆ ಎಲ್ಲಾ ಅರ್ಹ ಸದಸ್ಯರಿಗೂ ಈ ಕೆಳಕಂಡ ವಿಧಾನದಲ್ಲಿ ಕಳುಹಿಸತಕ್ಕದ್ದು.

   " ಸಂಘದ ನೋಂದಾಯಿತ ಕಛೇರಿಯ ಮತ್ತು ಶಾಖೆಗಳ ಸೂಚನಾ ಫಲಕಗಳ ಮೇಲೆ ಪ್ರಕಟಿಸತಕ್ಕದ್ದು; ಮತ್ತು

   (ಎ) ಸೌಲಭ್ಯವು ಲಭ್ಯವಾಗುವ ಎಲ್ಲಾ ಸ್ಥಳಗಳಲ್ಲಿ ಒಟ್ಟಾಗಿ (ಬಲ್ಕ್) ಅಂಚೆ ಮೂಲಕ ಕಳುಹಿಸತಕ್ಕದ್ದು; ಅಥವಾ

   (ಬಿ) ಇ-ಮೇಲ್ ಅಥವಾ ಎಸ್.ಎಂ.ಎಸ್ ಮೂಲಕ ಕಳುಹಿಸತಕ್ಕದ್ದು; ಅಥವಾ

   (ಸಿ) ಸಾಮಾನ್ಯ ಅಂಚೆ ಮೂಲಕ ಕಳುಹಿಸತಕ್ಕದ್ದು; ಮತ್ತು

   I. ಯಾವ ಸಹಕಾರ ಸಂಘಗಳ ಕಾರ್ಯಕ್ಷೇತ್ರದ ವ್ಯಾಪ್ತಿಯು ಜಿಲ್ಲೆಗಿಂತ ಕಡಿಮೆ ಇದೆಯೋ ಅಂಥ ಸಹಕಾರ ಸಂಘಗಳು ಇರುವ ಸ್ಥಳಗಳಲ್ಲಿ ವ್ಯಾಪಕ ಪ್ರಸಾರವನ್ನು ಹೊಂದಿರುವ ಒಂದು ಕನ್ನಡ ವಾರ್ತಾಪತ್ರಿಕೆಯಲ್ಲಿ; ಅಥವಾ

   II. ಯಾವ ಸಹಕಾರ ಸಂಘಗಳ ಕಾರ್ಯಕ್ಷೇತ್ರದ ವ್ಯಾಪ್ತಿಯು ಜಿಲ್ಲೆಗೆ ಮತ್ತು ಜಿಲ್ಲೆಗಿಂತ ಮೀರಿ ಇಡೀ ರಾಜ್ಯಕ್ಕೆ ವಿಸ್ತರಿಸಿದೆಯೋ ಅಥವಾ ಸಹಕಾರ ಸಂಘಗಳು ಇರುವ ಸ್ಥಳಗಳಲ್ಲಿ ವ್ಯಾಪಕ ಪ್ರಸಾರವನ್ನು ಹೊಂದಿರುವ ಒಂದು ಕನ್ನಡ ಮತ್ತು ಒಂದು ಆಂಗ್ಲ ವಾರ್ತಾ ಪತ್ರಿಕೆಗಳಲ್ಲಿ,- ಪ್ರಕಟಿಸತಕ್ಕದ್ದು."
6. ಚುನಾವಣಾ ನೋಟೀಸ್ ಅನ್ನು ಚುನಾವಣಾ ವೇಳಾಪಟ್ಟಿಯೊಡನೆ ಸಂಘದ ಹಾಗೂ ಸಂಘದ ಶಾಖೆಗಳ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸತಕ್ಕದ್ದು ಅಲ್ಲದೇ ಸ್ಥಳೀಯ ಗ್ರಾಮ ಪಂಚಾಯ್ತಿ, ರಿಟರ್ನಿಂಗ್ ಆಫೀಸರ್ ರವರ ಕಛೇರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿಯಲ್ಲಿ ಸಹ ಪ್ರಕಟಿಸತಕ್ಕದ್ದು.
7. ಚುನಾವಣೆ ನೋಟೀಸ್ (Notice Election) ಈ ಕೆಳಕಂಡ ಮಾಹಿತಿಯನ್ನು ಒಳಗೊಂಡಿರತಕ್ಕದ್ದು [ನಿಯಮ 13 E (2) (iv) ]
   - ಚುನಾವಣೆ ಮೂಲಕ ಭರ್ತಿ ಮಾಡಬೇಕಾದ ಒಟ್ಟು ಸ್ಥಾನಗಳು
   - ಸಂಘದ ಯಾವ ಕಾರ್ಯವ್ಯಾಪ್ತಿ ಅಥವಾ ಕ್ಷೇತ್ರದಿಂದ ನಿರ್ದೇಶಕರನ್ನು ಚುನಾಯಿಸ ಬೇಕಾಗಿರುತ್ತದೆ. (ಬೈಲಾದಲ್ಲಿ ನಮೂದಿಸಿದಂತೆ)
   - ಆಡಳಿತ ಮಂಡಳಿ ಸದಸ್ಯರಾಗಲು, ಅಧಿನಿಯಮ, ನಿಯಮಗಳು ಅಥವಾ ಉಪನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಅರ್ಹತೆಗಳು
8. ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕರು ಈ ಸಂಬಂಧ ಚುನಾವಣಾಧಿಕಾರಿಗೆ ಅಗತ್ಯ ನೆರವು ನೀಡತಕ್ಕದ್ದು. [ನಿಯಮ 13 E (2) (v) ]
9. ಸಹಕಾರ ಸಂಘಗಳ ನಿಯಮಗಳಿಗೆ ಅನುಸಾರವಾಗಿ ಪರಿಣಾಮಕಾರಿಯಾಗಿ ಯಾವುದೇ ಚುನಾವಣೆ ನಡೆಸಲು ಕೆಳಕಂಡ ಅಂಶಗಳ ಕಡೆಗೆ ಗಮನ ನೀಡುವುದು ಚುನಾವಣಾಧಿಕಾರಿಯ ಸಾಮಾನ್ಯ ಕರ್ತವ್ಯವಾಗಿರುತ್ತದೆ.
   a) ನಾಮಿನೇಶನ್‌ಗಳನ್ನು ಪಡೆಯುವ ಬಗ್ಗೆ ನೋಟೀಸ್ ನೀಡುವಿಕೆ.
   b) ನಾಮಿನೇಶನ ಪತ್ರಗಳನ್ನು ಸ್ವೀಕರಿಸುವುದು ಮತ್ತು ಪರಿಶೀಲಿಸುವುದು ನಾಮಪತ್ರ ವಾಪಸ್ಸು ಪಡೆದವರ ಪಟ್ಟಿ ಪ್ರಕಟಿಸುವುದು. [ನಿಯಮ 14 A ಮತ್ತು 14 B]
   c) ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚಿಹ್ನೆಗಳನ್ನು ನೀಡುವುದು. [ನಿಯಮ 14 E]
   d) ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹವಿರುವ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವುದು. [ನಿಯಮ 14 B(4)]

e) ಮತಗಟ್ಟೆಗಳ ಮತ್ತು ಮತಪೆಟ್ಟಿಗೆಗಳ ವ್ಯವಸ್ಥೆ ಮಾಡುವುದು.

f) ಮತಗಟ್ಟೆಗಳಿಗೆ ಮತದಾನ ಸಿಬ್ಬಂದಿ ಕಳುಹಿಸುವ ಬಗ್ಗೆ ವ್ಯವಸ್ಥೆ.

g) ಮತ ಪತ್ರಗಳನ್ನು ಅಚ್ಚು ಹಾಕಿಸುವ ಬಗ್ಗೆ ವ್ಯವಸ್ಥೆ.

h) ಅಗತ್ಯವೆನಿಸಿದಲ್ಲಿ ಬೇರೆ ಬೇರೆ ಮತ ಗಟ್ಟೆಗಳ ಫಲಿತಾಂಶವನ್ನು ಕ್ರೋಢೀಕರಿಸುವುದು.

i) ಚುನಾವಣಾ ಫಲಿತಾಂಶ ಪ್ರಕಟಣೆ ಮತ್ತು ಈ ಸಂಬಂಧ ಚುನಾವಣೆ ಪ್ರಮಾಣಪತ್ರವನ್ನು ನೀಡುವುದು.

10. ಮತಗಟ್ಟೆ ಸಿಬ್ಬಂದಿಯಿಂದ ಚುನಾವಣೆಗೆ ಸಂಬಂಧಿಸಿದಂತೆ ಚುನಾವಣೆ ನಂತರ ದಾಖಲಾತಿ /ಮತಪೆಟ್ಟಿಗೆಗಳನ್ನು ಇತರ ಸಾಮಗ್ರಿಗಳನ್ನು ಚುನಾವಣಾಧಿಕಾರಿಯು ಪಡೆಯುವ ಬಗ್ಗೆ ವ್ಯವಸ್ಥೆ ಮಾಡುವುದು.

11. ಚುನಾವಣಾ ಅಯೋಗದ ಅನುಮೋದನೆ ಪಡೆದು ರಿಟರ್ನಿಂಗ್ ಆಫೀಸರ್, ಸಹಾಯಕ ಚುನಾವಣಾಧಿಕಾರಿ (ARO) ಮತ್ತು ಮತದಾನ ಸಿಬ್ಬಂಧಿ ನೆರವು ಪಡೆದು ತನ್ನ ಕರ್ತವ್ಯಗಳನ್ನು ನಿರ್ವಹಿಸುವುದು.

12. ಚುನಾವಣಾಧಿಕಾರಿಯು ಕಾರ್ಯವ್ಯಾಪ್ತಿಯಲ್ಲಿನ ಸಹಕಾರ ಸಂಘದ ಚುನಾವಣೆ ನಡೆಸುವ ಸಂಬಂಧ ಜಿಲ್ಲಾ ಆಡಳಿತದೊಡನೆ ನಿಕಟ ಸಂಪರ್ಕವಿಟ್ಟುಕೊಂಡು ಕಾನೂನು ಮತ್ತು ಶಿಸ್ತು ಪಾಲನೆ ನಿರ್ವಹಣೆ ಬಗ್ಗೆ ನೆರವು ಪಡೆಯುವುದು.

13. ಸಹಕಾರ ಚುನಾವಣಾ ಆಯೋಗವು ಆಗಾಗ್ಗೆ ನಿರ್ದೇಶಿಸುವಂತೆ ವರದಿಯನ್ನು ರಿಟರ್ನಿಂಗ್ ಆಫೀಸರ್ ಕಳುಹಿಸತಕ್ಕದ್ದು.

14. ಚುನಾವಣೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಸುರಕ್ಷಿತ ಅಭಿರಕ್ಷೆಯಲ್ಲಿಡುವ ಬಗ್ಗೆ, ವ್ಯವಸ್ಥೆ ಹಾಗೂ ವಿಶೇಷ ಪ್ರಕರಣಗಳಲ್ಲಿ, ದಾಖಲಾತಿಗಳನ್ನು ಉಪವಿಭಾಗೀಯ ಕಛೇರಿಯಲ್ಲಿಡುವುದು ಯುಕ್ತವೆಂದು ಚುನಾವಣಾಧಿಕಾರಿ ಅಥವಾ ಸಹಾಯಕ ಚುನಾವಣಾಕಾರಿ ಭಾವಿಸಿದಲ್ಲಿ ಚುನಾವಣಾಧಿಕಾರಿಯೊಡನೆ ಚರ್ಚಿಸಿ, ಸಹಕಾರ ಚುನಾವಣಾ ಆಯೋಗದ ಪೂರ್ವಾನುಮತಿ ಪಡೆದು ಕ್ರಮವಿಡುವುದು.

15. ರಿಟರ್ನಿಂಗ್ ಆಫೀಸರ್ ತಾನು ಸಹಾಯಕ ರಿಟರ್ನಿಂಗ್ ಆಫೀಸರ್‌ರಿಂದ ಪಡೆದ ಅಥವಾ ತನ್ನ ಕಾರ್ಯವ್ಯಾಪ್ತಿಯ ಸಹಕಾರ ಸಂಘದಿಂದ ಚುನಾವಣೆ ಸಂಬಂಧ ತಾನೇ ಸಿದ್ಧಪಡಿಸಿದ ದಾಖಿಲಾತಿಗಳನ್ನು ಸಹಕಾರ ಚುನಾವಣಾ ಆಯೋಗದ ನಿರ್ದೇಶನದಂತೆ ನಿಗಧಿತ ಅವಧಿವರೆಗೆ ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕದ್ದು.

16. ರಾಜ್ಯ ಸಹಕಾರ ಚುನಾವಣಾ ಆಯೋಗವು / ಜಿಲ್ಲಾ ಚುನಾವಣಾಧಿಕಾರಿಯು ಆಗಾಗ್ಗೆ ನೀಡುವ ನಿರ್ದೇಶನದಂತೆ ರಿಟರ್ನಿಂಗ್ ಆಫೀಸರ್ ಕಾರ್ಯನಿರ್ವಹಿಸತಕ್ಕದ್ದು.

17. ಚುನಾವಣಾಧಿಕಾರಿಯು ಸಹಕಾರ ಸಂಘಗಳ ಅಧಿನಿಯಮ / ನಿಯಮಗಳು, ಸೌಹಾರ್ದ ಸಹಕಾರಿ ಅಧಿನಿಯಮ 1997 / ನಿಯಮಗಳನ್ವಯ ಹಾಗೂ ಸಂಘದ ಬೈಲಾ ಅವಕಾಶಗಳಂತೆ ಚುನಾವಣೆ ನಡೆಸತಕ್ಕದ್ದು. ಹಾಗೂ ಆಡಳಿತ ಮಂಡಳಿ ಚುನಾವಣೆ ನಂತರ ಕಾನೂನಿಗೆ ಅನುಗುಣವಾಗಿ ಪದಾಧಿಕಾರಿಗಳ ಚುನಾವಣೆ ನಡೆಸತಕ್ಕದ್ದು.

18. ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012 [2013 ರ ಅಧಿನಿಯಮ ಸಂಖ್ಯೆ 3] ರೀತ್ಯಾ, ಅಧಿನಿಯಮ ಪ್ರಕರಣ 70ಕ್ಕೆ ತಿದ್ದುಪಡಿ ಮಾಡಿದ್ದು [ಪ್ರಕರಣ 39 (4) ] ಅದರಂತೆ ಆಡಳಿತ ಮಂಡಳಿ ಚುನಾವಣೆ, ಅಧ್ಯಕ್ಷ / ಉಪಾಧ್ಯಕ್ಷ, ಛೇರ್‌ಮನ್ / ವೈಸ್‌ಛೇರ್‌ಮನ್ ಅಥವಾ ಯಾವುದೇ ಇತರ ಪದಾಧಿಕಾರಿಯ ಚುನಾವಣೆ ಸಂಬಂಧ ಉದ್ಭವಿಸುವ ಎಲ್ಲಾ ವಿವಾದ (All disputes relating to the Election) ಗಳನ್ನು ಕಾರ್ಯವ್ಯಾಪ್ತಿಯ ಸಿವಿಲ್ ನ್ಯಾಯಾಲಯದಲ್ಲಿ ಹೂಡಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಿಟರ್ನಿಂಗ್ ಆಫೀಸರ್‌ರವರು ಸಹಕಾರಿ ಅಧಿನಿಯಮ /ನಿಯಮಗಳಿಗೆ ಬೈಲಾಗಳಿಗೆ ಅನುಸಾರವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು. ಚುನಾವಣೆ ನಡೆಸುವಲ್ಲಿ ಯಾವುದೇ ಲೋಪಗಳು / ನಿಯಮಗಳ

ಉಲ್ಲಂಘನೆ / ಚುನಾವಣಾ ಆಯೋಗವು ನೀಡುವ ನಿರ್ದೇಶನಗಳ ಉಲ್ಲಂಘನೆ ಆದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನಿಸಬಹುದಾದ ನಿಮ್ಮ ಕ್ರಮಗಳ ಬಗ್ಗೆ ನೀವು ಸಮರ್ಥಿಸಿಕೊಳ್ಳಲು ಕಷ್ಟಕರವಾಗಬಹುದು. ಆದುದರಿಂದ ಕಾನೂನು ರೀತ್ಯಾ ಹಾಗು ಸಮರ್ಪಕವಾಗಿ ಚುನಾವಣಾ ಕಾರ್ಯಗಳನ್ನು ನಿರ್ವಹಿಸಲು ಸೂಚಿಸಿದೆ.

19. ಜಿಲ್ಲಾ ಚುನಾವಣಾಧಿಕಾರಿಯು, ಸಂಬಂಧಿಸಿದ ಸಂಘಗಳ ಆಡಳಿತ ಮಂಡಳಿ ಚುನಾವಣೆ ಸಂಬಂಧ ಪ್ರತಿಮತಗಟ್ಟೆಗೆ ಅಧ್ಯಕ್ಷಧಿಕಾರಿ ಮತಗಟ್ಟೆ ಅಧಿಕಾರಿಗಳನ್ನು ನೇಮಕ ಮಾಡುವ ಜವಾಬ್ದಾರಿ ಹೊಂದಿರುತ್ತಾರೆ. ಈ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗೆ ವಿವರಗಳನ್ನು ನೀಡುವುದು.

20. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 109 ಕ್ಕೆ ತಂದಿರುವ ತಿದ್ದುಪಡಿ 109 (19) ರಂತೆ ಆಡಳಿತ ಮಂಡಳಿಯ ಪ್ರತಿಯೊಬ್ಬ ಸದಸ್ಯ ಮತ್ತು ಮುಖ್ಯಕಾರ್ಯನಿರ್ವಾಹಕ ಸಹಕಾರ ಚುನಾವಣಾ ಆಯೋಗಕ್ಕೆ ಅಧಿನಿಯಮ ಪ್ರಕರಣ 39 AA ರೀತ್ಯಾ ಚುನಾವಣೆ ನಡೆಸಲು ಅಗತ್ಯ ಪುಸ್ತಕಗಳು, ದಾಖಲಾತಿಗಳು ಮತ್ತು ಮಾಹಿತಿಯನ್ನು ಸೂಕ್ತ ಅವಧಿಯಲ್ಲಿ ಒದಗಿಸಲು ವಿಫಲವಾದಲ್ಲಿ, 6 ತಿಂಗಳು ಸೆರೆಮನೆವಾಸ ಅಥವಾ ರೂ.10.000/- ಗಳ ದಂಡ ಅಥವ ಎರಡು ದಂಡನೆಗಳಿಂದ ದಂಡಿಸತಕ್ಕದ್ದಾಗಿದೆ.

21. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 109 (21) ರೀತ್ಯಾ ಯಾವುದೇ ವ್ಯಕ್ತಿ ಚುನಾವಣಾ ಪೂರ್ವ, ಚುನಾವಣಾ ನಡೆಯುವಾಗ ಅಥವಾ ಆಡಳಿತ ಮಂಡಳಿ ಚುನಾವಣೆ / ಪದಾಧಿಕಾರಿಗಳ ಚುನಾವಣೆ ನಂತರ ಅಧಿನಿಯಮ ಪ್ರಕರಣ 39 C ರೀತ್ಯಾ (Corrupt / Practice) ಭ್ರಷ್ಟ ಆಚರಣೆಯನ್ನು ಅನುಸರಿಸಿದಲ್ಲಿ ಅಥವಾ 39 K ರೀತ್ಯಾ ಯಾವುದೇ ಚುನಾವಣಾ ಸಂಬಂಧ ಅಪರಾದವೆಸಗಿದಲ್ಲಿ 6 ತಿಂಗಳು ಸೆರೆಮನೆವಾಸ ಅಥವಾ ಹತ್ತು ಸಾವಿರ ರೂಗಳ ದಂಡ ಅಥವಾ ಎರಡು ದಂಡನೆಗಳಿಂದ ದಂಡಿಸತಕ್ಕದ್ದು.

22. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 68 ರಲ್ಲಿ ಅಪರಾಧಗಳು ಮತ್ತು ದಂಡನೆಗಳ ಬಗ್ಗೆ ವಿವರಿಸಲಾಗಿದೆ. ಚುನಾವಣೆ ನಡೆಸಬೇಕಾದ ಸಹಕಾರ ಸಂಘವು ಈ ಅಧಿನಿಯಮದಡಿ ನೊಂದಾಯಿಸಲ್ಪಟ್ಟಿದ್ದಲ್ಲಿ ಇದನ್ನು ಗಮನಿಸುವುದು.

ರಿಟರ್ನಿಂಗ್ ಆಫೀಸರ್, ಈ ಹಿಂದೆ ಲೋಕಸಭೆ /ವಿಧಾನಸಭೆ/ ಸ್ಥಳೀಯ ಸಂಸ್ಥೆಗಳ ಚುನಾವಣಾ ಕಾರ್ಯಗಳಲ್ಲಿ ವಿವಿಧ ಕಾರ್ಯಗಳನ್ನು ನಿರ್ವಹಿಸಿ ಅನುಭವವನ್ನು ಪಡೆದಿರಬಹುದು ಆದರೆ ಸಹಕಾರ ಸಂಘಗಳ / ಸಹಕಾರಿಗಳ ಚುನಾವಣೆಯು ಮೇಲ್ಕಂಡ ಚುನಾವಣೆಗಳಿಗಿಂತ ವಿಶಿಷ್ಟವಾದ ಗುಣಲಕ್ಷಣಗಳನ್ನು ಹೊಂದಿದ್ದು ಇಲ್ಲಿ ಹಲವಾರು ವರ್ಗಗಳ /ರೀತಿಯ ಸಹಕಾರ ಸಂಘಗಳಿದ್ದು, ಪ್ರತಿವರ್ಗದ ಸಹಕಾರ ಸಂಘದ ಉದ್ದೇಶ ಕಾರ್ಯನಿರ್ವಹಣೆಯು ನಿರ್ದಿಷ್ಟ ಕಾರ್ಯಕ್ಷೇತ್ರದಲ್ಲಿ ಉಪನಿಯಮಗಳ ಅವಕಾಶದಂತೆ ಆಡಳಿತ ಮಂಡಳಿ ರಚನೆ ಆಗಬೇಕಾಗಿದ್ದು, ಅದರಂತೆ ಚುನಾವಣೆಯನ್ನು ನಡೆಸತಕ್ಕದ್ದಾಗಿದೆ. ಸಂಬಂಧಿಸಿದ ಸಹಕಾರ ಸಂಘಗಳೇ ಚುನಾವಣಾ ವೆಚ್ಚವನ್ನು ಭರಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಚುನಾವಣಾಧಿಕಾರಿಗಳು ರಿಟರ್ನಿಂಗ್ ಆಫೀಸರ್ಸ್, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959/ ನಿಯಮಗಳು, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 / ನಿಯಮಗಳು, ತಮಗೆ ಸಂಬಂಧಿಸಿದ ಸಂಘದ ಬೈಲಾವನ್ನು ಚನ್ನಾಗಿ ಅಭ್ಯಾಸ ಮಾಡಿ ಕಾನೂನಿನ ಅವಕಾಶದಂತೆ ಚುನಾವಣೆಯನ್ನು ನಡೆಸತಕ್ಕದ್ದಾಗಿದೆ. ನಿಮಗೆ ವಹಿಸಲಾದ ಕಾರ್ಯನಿರ್ವಹಣೆ ಸಂಬಂಧ ಸ್ಪಷ್ಟೀಕರಣ / ಮಾಹಿತಿ ಅಗತ್ಯವೆನಿಸಿದಲ್ಲಿ ಸಹಕಾರ ಚುನಾವಣಾ ಆಯೋಗ / ಜಿಲ್ಲಾ ಚುನಾವಣಾಧಿಕಾರಿಯನ್ನು ಸಂಪರ್ಕಿಸಿ/ ಚರ್ಚಿಸಿ ಸಮಸ್ಯೆ ಏನಾದರೂ ಇದ್ದಲ್ಲಿ ಬಗೆಹರಿಸಿಕೊಳ್ಳಲು

ತಿಳಿಸಿದೆ

ಆಡಳಿತ ಮಂಡಳಿ ಚುನಾವಣೆ ಮುಗಿದ ನಂತರ ಪದಾಧಿಕಾರಿಗಳ ಚುನಾವಣೆಯನ್ನು ನಿಯಮ 14 AG ದ ಅವಕಾಶದಂತೆ ನಡೆಸತಕ್ಕದ್ದು. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 114 ರ ಮೇರೆಗೆ ಪ್ರತಿಯೊಂದು ಸಹಕಾರ ಸಂಘವು ಯುಕ್ತವಾಗಿ ಎಲ್ಲಾ ವೇಳೆಗಳಲ್ಲಿಯೂ ಇತ್ತೀಚಿನವರೆಗೆ ತಿದ್ದುಪಡಿಯಾದ ಅಧಿನಿಯಮ/ ನಿಯಮಗಳ ಮತ್ತು ಉಪನಿಯಮಗಳ ಪ್ರತಿಯನ್ನು ಉಚಿತವಾಗಿ ಪರಿವೀಕ್ಷಿಸಲು ಅವುಗಳ ಒಂದೊಂದು ಪ್ರತಿಯನ್ನು ಸಂಘದ ನೋಂದಾಯಿತ ಕಛೇರಿಯಲ್ಲಿ ಮುಕ್ತವಾಗಿ ಇಟ್ಟುಕೊಳ್ಳತಕ್ಕದ್ದು ಎಂಬ ಅವಕಾಶವಿದ್ದು ಈ ಬಗ್ಗೆ ಸಂಘಗಳಿಗೆ ಸೂಚಿಸಿ ಇತ್ತೀಚಿನ ತಿದ್ದುಪಡಿಗಳನ್ನೊಳಗೊಂಡ ಅಧಿನಿಯಮ / ನಿಯಮಗಳ ಪುಸ್ತಕವನ್ನು ಖರೀದಿಸಿಡಲು ಸೂಚಿಸುವುದು.

**ಆಯುಕ್ತರು**
**ಕರ್ನಾಟಕ ರಾಜ್ಯ ಸಹಕಾರ**
**ಚುನಾವಣಾ ಆಯೋಗ**

**ಪ್ರತಿಗಳು;–**

1. ಸಹಕಾರ ಸಂಘಗಳ ಉಪನಿಬಂಧಕರು / ಜಿಲ್ಲಾ ಚುನಾವಣಾಧಿಕಾರಿ ------------------ ಜಿಲ್ಲಾ ರವರಿಗೆ ಕಳುಹಿಸುತ್ತಾ, ಸಂಬಂಧಿಸಿದ ರಿಟರ್ನಿಂಗ್ ಅಫೀಸರ್‌ಗಳಿಗೆ ಈ ಸಂಬಂಧ ಸೂಚನೆಗಳನ್ನು ನೀಡಲು ಸೂಚಿಸಿದೆ.
2. ಸಹಕಾರ ಸಂಘಗಳ ಸಹಾಯಕ ನಿಬಂಧಕರು, -------------------------- ಉಪವಿಭಾಗ

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/18/ಚಿಹ್ನೆ/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ:06.08.2013

ಗೆ,
ಸಹಕಾರ ಸಂಘಗಳ ಉಪನಿಬಂಧಕರು
______________ ಜಿಲ್ಲೆ
______________

ಮಾನ್ಯರೇ,

**ವಿಷಯ:-** ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆ –ಚಿಹ್ನೆಗಳ ಹಂಚಿಕೆ ಕುರಿತು.

**ಉಲ್ಲೇಖ:-** ರಾಜ್ಯ ಚುನಾವಣಾ ಆಯೋಗದಿಂದ ಮಾಹಿತಿ.

***

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013 ರ ನಿಯಮ 14E ದಲ್ಲಿ ಚಿಹ್ನೆಗಳ ಹಂಚಿಕೆ ಬಗ್ಗೆ ವಿವರಿಸಲಾಗಿದೆ ಅದರಂತೆ ಯಾವುದೇ ಅಭ್ಯರ್ಥಿಯು ರಾಜ್ಯದಲ್ಲಿ ಮನ್ನಣೆ ಪಡೆದ ರಾಜಕೀಯ ಪಕ್ಷಗಳಿಗೆ ಹಂಚಿಕೆ ಮಾಡಿದ ಚಿಹ್ನೆಗಳನ್ನು ಹೊರತುಪಡಿಸಿ ಉಳಿದ ಮುಕ್ತ ಚಿಹ್ನೆಗಳ ಪೈಕಿ ಯಾವುದಾದರೊಂದನ್ನು ಆಯ್ಕೆ ಮಾಡಿಕೊಳ್ಳತಕ್ಕದಾಗಿದೆ. ರಾಜ್ಯ ಚುನಾವಣಾ ಆಯೋಗದಿಂದ ಪಡೆಯಲಾದ ಮಾಹಿತಿಯಂತೆ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಪಟ್ಟಣ ಪಂಚಾಯಿತಿ, ನಗರಸಭೆ ಹಾಗೂ ಮಹಾನಗರ ಪಾಲಿಕೆ ಚುನಾವಣೆಗಳಿಗಾಗಿ ನಿರ್ದಿಷ್ಟಪಡಿಸಲಾದ ಮುಕ್ತ ಚಿಹ್ನೆಗಳನ್ನು ಪಡೆಯಲಾಗಿದ್ದು ಅಂತಹ ಚಿಹ್ನೆಗಳ ಹೆಸರು /ಚಿತ್ರಗಳ ಪಟ್ಟಿಯನ್ನು (1 ರಿಂದ 87) ಈ ಕೂಡ ಲಗತ್ತಿಸಿ ಕಳುಹಿಸಲಾಗಿದೆ. ಇದೇ ಮುಕ್ತ ಚಿಹ್ನೆಗಳನ್ನು ಸಹಕಾರ ಸಂಸ್ಥೆಗಳ ಆಡಳಿತ ಸಮಿತಿ ಚುನಾವಣೆಗಳನ್ನು ಅಗತ್ಯವೆನಿಸಿದ ಸಂದರ್ಭಗಳಲ್ಲಿ ಉಪಯೋಗಿಸಿಕೊಳ್ಳಬಹುದು ಅಲ್ಲದೇ ಚಿಹ್ನೆಗಳ ಹಂಚಿಕೆಯನ್ನು ಮೇಲೆ ತಿಳಿಸಿದಂತೆ ನಿಯಮ 14E ಅನ್ವಯ ಹಂಚಿಕೆ ಮಾಡಬಹುದಾಗಿದೆ. ಈ ಬಗ್ಗೆ ರಿಟರ್ನಿಂಗ್ ಅಧಿಕಾರಿಗಳಿಗೆ ಮಾಹಿತಿ ನೀಡಲು ಸೂಚಿಸಿದೆ.

ತಮ್ಮ ನಂಬುಗೆಯ

(ಎನ್.ಸಿ.ಮುನಿಯಪ್ಪ)
ಆಯುಕ್ತರು

**ಪ್ರತಿಯನ್ನು:-**

1. ಸಹಕಾರ ಸಂಘಗಳ ಜಂಟಿ ನಿಬಂಧಕರು ______________ ಪ್ರಾಂತ ______________
2. ಸಹಕಾರ ಸಂಘಗಳ ಸಹಾಯಕ ನಿಬಂಧಕರು ______________ ಉಪವಿಭಾಗ______________
3. ಕಛೇರಿ ರಕ್ಷಾಕಡತ.

## ಕೋಷ್ಟಕ – 4

ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿ ಹಾಗೂ ಪಟ್ಟಣ ಪಂಚಾಯತಿ, ಪುರಸಭೆ, ನಗರ ಮತ್ತು ಮಹಾನಗರ ಪಾಲಿಕೆ ಹಾಗೂ ಬಿಬಿಎಂಪಿ ಚುನಾವಣೆಗಳಿಗಾಗಿ ನಿರ್ದಿಷ್ಟಪಡಿಸಲಾದ ಮುಕ್ತ ಚಿಹ್ನೆಗಳ ಪಟ್ಟಿ.


| ಕ್ರ.ಸಂ | ಮುಕ್ತ ಚಿಹ್ನೆಗಳು | ಕ್ರ. ಸಂ | ಮುಕ್ತ ಚಿಹ್ನೆಗಳು |
|---|---|---|---|
| 01. | ಕಪಾಟು | 31. | ಕಪ್ ಅಂಡ್ ಸಾಸರ್ |
| 02. | ಏರ್‌ಕಂಡೀಷನರ್ | 32. | ಕಟ್ಟಿಂಗ್ ಪ್ಲೇಯರ್ |
| 03. | ಆಟೋರಿಕ್ಷಾ | 33. | ಡಾವ್ |
| 04. | ಬಲೂನ್ | 34. | ಡೀಸಲ್ ಪಂಪ್ |
| 05. | ಹಣ್ಣುಗಳ ಬುಟ್ಟಿ | 35. | ಡಿಶ್‌ಅಂಟೆನಾ |
| 06. | ಬ್ಯಾಟ್ | 36. | ಡೋಲಿ |
| 07. | ಬ್ಯಾಟ್ಸ್‌ಮನ್ | 37. | ವಿದ್ಯುತ್‌ಕಂಬ |
| 08. | ಬ್ಯಾಟರಿ ಟಾರ್ಚ್ | 38. | ಲಕೋಟೆ |
| 09. | ಬೆಲ್ಟ್ | 39. | ಕೊಳಲು (ಪ್ಲೂಟ್) |
| 10. | ಕಪ್ಪು ಹಲಗೆ (ಬ್ಲಾಕ್ ಬೋರ್ಡ್) | 40. | ಲಂಗ (ಫ್ರಾಕ್) |
| 11. | ಸೀಸೆ (ಬಾಟಲ್) | 41. | ಫ್ರೈಯಿಂಗ್ ಪ್ಯಾನ್ |
| 12. | ಬ್ರೆಡ್ | 42. | ಫನೆಲ್ |
| 13. | ಬ್ರೀಫ್ ಕೇಸ್ | 43. | ಗ್ಯಾಸ್ ಸಿಲಿಂಡರ್ |
| 14. | ಪೊರಕೆ | 44. | ಗ್ಯಾಸ್ ಸ್ಟೌವ್ |
| 15. | ಬ್ರಷ್ | 45. | ಗಾಜಿನ ಲೋಟ |
| 16. | ಬಕೇಟ್ | 46. | ದ್ರಾಕ್ಷಿ |
| 17. | ಕೇಕ್ | 47. | ಹಾರ್ಮೋನಿಯಂ |
| 18. | ಕ್ಯಾಲ್‌ಕ್ಯುಲೇಟರ್ | 48. | ಟೋಪಿ |
| 19. | ಕ್ಯಾಮರಾ | 49. | ಹೆಲ್ಮೆಟ್ |
| 20. | ಮೇಣದ ಬತ್ತಿ | 50. | ಹಾಕಿ ಬ್ಯಾಟು ಮತ್ತು ಚೆಂಡು |
| 21. | ಕೇರಂ ಬೋರ್ಡ್ | 51. | ಐಸ್‌ಕ್ರೀಮ್ |
| 22. | ನೆಲಹಾಸು (ಕಾರ್‌ಪೆಟ್ ) | 52. | ಇಸ್ತ್ರಿಪೆಟ್ಟಿಗೆ |
| 23. | ಕ್ಯಾರೆಟ್ | 53. | ಕೆಟಲ್ |
| 24. | ಹೂಕೋಸು | 54. | ಗಾಳಿಪಟ |
| 25. | ಸೀಲಿಂಗ್ ಫ್ಯಾನ್ | 55. | ಲೇಡಿ ಪರ್ಸ್ |
| 26. | ಚೆಸ್‌ಬೋರ್ಡ್ | 56. | ಅಂಚೆ ಪೆಟ್ಟಿಗೆ |
| 27. | ಕೋಟು | 57. | ಮಿಕ್ಸಿ |
| 28. | ತೆಂಗಿನಕಾಯಿ | 58. | ನೇಲ್ ಕಟರ್ |
| 29. | ಮಂಚ | 59. | ನೆಕ್ ಟೈ |
| 30. | ಕಿರೀಟ | 60. | ಪೆನ್ ಸ್ಟಾಂಡ್ |

| ಕ್ರಸಂ | ಮುಕ್ತ ಚಿಹ್ನೆಗಳು | ಕ್ರಸಂ | ಮುಕ್ತ ಚಿಹ್ನೆಗಳು |
|---|---|---|---|
| 61. | ಪೆನ್‌ಸಿಲ್ ಶಾರ್ಪನರ್ | 75. | ಸ್ಟೂಲ್ |
| 62. | ಪ್ಲೇಟ್ ಸ್ಟಾಂಡ್ | 76. | ಟೇಬಲ್ |
| 63. | ಕುಡಿಕೆ | 77. | ಟೇಬಲ್ ಲ್ಯಾಂಪ್ |
| 64. | ಪ್ರೆಷರ್ ಕುಕ್ಕರ್ | 78. | ದೂರವಾಣಿ (ಟೆಲಿಫೋನ್) |
| 65. | ರೇಝುರ್ | 79. | ದೂರದರ್ಶನ (ಟೆಲಿವಿಷನ್) |
| 66. | ರೆಫ್ರಿಜರೇಟರ್ | 80. | ಟೆಂಟ್ |
| 67. | ಉಂಗುರ | 81. | ಟೂಥ್ ಬ್ರಷ್ |
| 68. | ಗರಗಸ | 82. | ತುತ್ತೂರಿ |
| 69. | ಸ್ಕೂಲ್‌ಬ್ಯಾಗ್ | 83. | ಪಿಟೀಲು (ವಾಯೋಲಿನ್) |
| 70. | ಕತ್ತರಿ | 84. | ವಾಕಿಂಗ್ ಸ್ಟಿಕ್ |
| 71. | ಹೊಲಿಗೆ ಯಂತ್ರ | 85. | ಕೊಳಾಯಿ |
| 72. | ಶಟಲ್ | 86. | ಸೀಟಿ |
| 73. | ಸ್ಲೇಟ್ | 87. | ಕಿಟಕಿ |
| 74. | ಸ್ಟೆತೊಸ್ಕೋಪ್ | | |


## ಕೋಷ್ಟಕ 4ರ ಮುಕ್ತ ಚಿಹ್ನೆಗಳ ಚಿತ್ರಗಳ ಪಟ್ಟಿ



ಕಪಾಟು
1. Almirah




ಏರ್‌ಕಂಡೀಷನರ್
2. Air Conditioner




ಆಟೋರಿಕ್ಷಾ
3. Auto Rickshaw



ಬಲೂನ್
4. Baloon




ಹಣ್ಣುಗಳ ಬುಟ್ಟಿ
5. Basket containing Fruits




ಬ್ಯಾಟ್
6. Bat




ಬ್ಯಾಟ್ಸ್‌ಮೆನ್
7. Batsman



ಬ್ಯಾಟರಿ ಟಾರ್ಚ್
8. Battery Torch



ಬೆಲ್ಟ್
9. Belt




ಕಪ್ಪು ಹಲಗೆ (ಬ್ಲಾಕ್ ಬೋರ್ಡ್)
10. Black Board




(ಸೀಸೆ) ಬಾಟಲ್
11. Bottle




ಬ್ರೆಡ್
12. Bread




ಬ್ರೀಫ್ ಕೇಸ್
13. Brief Case



ಪೊರಕೆ
14. Broom




ಬ್ರಷ್
15. Brush




ಬಕೇಟ್
16. Bucket




ಕೇಕ್
17. Cake





ಕ್ಯಾಲ್ಕುಲೇಟರ್
18. Calculator




ಕ್ಯಾಮೆರಾ
19. Camera



ಮೇಣದ ಬತ್ತಿ
20. Candies



ಕೇರಂ ಬೋರ್ಡ್
21. Carrom Board




ನೆಲಹಾಸು (ಕಾರ್ಪೆಟ್)
22. Carpet




ಕ್ಯಾರೆಟ್
23. Carrot




ಹೂಕೋಸು
24. Cauliflower



ಸೀಲಿಂಗ್ ಫ್ಯಾನ್
25. Ceiling Fan




ಚೆಸ್‌ಬೋರ್ಡ್
26. Chess Board




ಕೋಟು
27. Coat



ತೆಂಗಿನಕಾಯಿ
28. Coconut




ಮಂಚ
29. Cot



ಕಿರೀಟ
30. Crown




ಕಪ್ ಅಂಡ್ ಸಾಸರ್
31. Cup & Saucer




ಕಟ್ಟಿಂಗ್ ಪ್ಲೇಯರ್
32. Cutting Plier




ಡಾವ್
33. Dao




ಡೀಸೆಲ್ ಪಂಪ್
34. Diesal Pump




ಡಿಶ್ ಅಂಟೆನಾ
35. Dish Antena




ಡೋಲಿ
36. Dolli



ವಿದ್ಯುತ್‌ಕಂಬ
37. Electric Pole



ಲಕೋಟೆ
38. Envelope





ಕೊಳಲು
39. Flute




ಲಂಗ (ಫ್ರಾಕ್)
40. Frock


ಫ್ರೈಯಿಂಗ್ ಪ್ಯಾನ್
41. Frying Pan



ಫನೆಲ್
42. Funnel



ಗ್ಯಾಸ್ ಸಿಲಿಂಡರ್
43. Gas Cylinder


ಗ್ಯಾಸ್ ಸ್ಟೌವ್
44. Gas Stove



ಗಾಜಿನ ಲೋಟ
45. Glass Tumbler


ದ್ರಾಕ್ಷಿ
46. Grapes



ಹಾರ್ಮೋನಿಯಂ
47. Harmonium



ಟೋಪಿ
48. Hat



ಹೆಲ್ಮೆಟ್
49. Helmet


ಹಾಕಿ ಬ್ಯಾಟ್ ಮತ್ತು ಚೆಂಡು
50. Hockey and Ball



ಐಸ್ ಕ್ರೀಮ್
51. Ice Cream



ಇಸ್ತ್ರೀ ಪೆಟ್ಟಿಗೆ
52. Iron Box



ಕೆಟಲ್
53. Kettle


ಗಾಳಿಪಟ
54. Kite



ಲೇಡಿ ಪರ್ಸ್
55. Lady Purse



ಅಂಚೆ ಪೆಟ್ಟಿಗೆ
56. Letter Box


ಮಿಕ್ಸಿ
57. Mixee



ನೇಲ್ ಕಟರ್
58. Nail Cutter


ನೆಕ್ ಟೈ
59. Neck Tie



ಪೆನ್ ಸ್ಟ್ಯಾಂಡ್
60. Pen Stand




ಪೆನ್ಸಿಲ್ ಶಾರ್ಪನರ್
61. Pencil Sharpener




ಪ್ಲೇಟ್ ಸ್ಟ್ಯಾಂಡ್
62. Plate Stand




ಕುಡಿಕೆ
63. Pot



ಪ್ರೆಷರ್ ಕುಕ್ಕರ್
64. Pressure Cooker




ರೇಝರ್
65. Razor




ರೆಫ್ರಿಜರೇಟರ್
66. Refrigerator



ಉಂಗುರ
67. Ring




ಗರಗಸ
68. Saw



ಸ್ಕೂಲ್‌ಬ್ಯಾಗ್
69. School Bag




ಕತ್ತರಿ
70. Scissors




ಹೊಲಿಗೆ ಯಂತ್ರ
71. Sewing Machine




ಶಟಲ್
72. Shuttle




ಸ್ಲೇಟ್
73. Slate




ಸ್ಟೆತೋಸ್ಕೋಪ್
74. Stethoscope



ಸ್ಟೂಲ್
75. Stool




ಟೇಬಲ್
76. Table



77. Table Lamp










78. Telephone



79. Television



80. Tent

| | | | |
|---|---|---|---|
|  ಟೂಥ್ ಬ್ರಷ್ 81. Tooth Brush |  ತುತ್ತೂರಿ 82. Trumpet |  ಪಿಟೀಲು (ವಾಯೋಲಿನ್) 83. Violin |  ವಾಕಿಂಗ್ ಸ್ಟಿಕ್ 84. Walking Stick |
|  ಕೊಳಾಯಿ 85. Water Tap |  ಸೀಟಿ 86. Whistle |  ಕಿಟಕಿ 87. Window | |

ಆದೇಶಾನುಸಾರ

**ವೀರಭದ್ರಯ್ಯ**
ಅಧೀನ ಕಾರ್ಯದರ್ಶಿ
ರಾಜ್ಯ ಚುನಾವಣಾ ಆಯೋಗ, ಬೆಂಗಳೂರು

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/16/2013–14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು–560004 ದಿನಾಂಕ:12.08.2013 14

## ಸುತ್ತೋಲೆ

**ವಿಷಯ:–** ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ವಿಲೇವಾರಿ ಕುರಿತು.

***

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ಹಾಗೂ ಸಂಬಂಧಿಸಿದ ನಿಯಮಗಳ ಅನ್ವಯ ಸಹಕಾರ ಸಂಘಗಳ ಆಡಳಿತ ಮಂಡಳಿಗೆ /ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ರಾಜ್ಯ ಸಹಕಾರ ಚುನಾವಣಾ ಆಯೋಗವು ಈಗಾಗಲೇ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳ ಚುನಾವಣಾ ದಿನಾಂಕ ಪ್ರಕಟಿಸಿದೆ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ನೇಮಕ /ರಿಟರ್ನಿಂಗ್ ಆಫೀಸರ್ಸ್‌ಗಳ ನೇಮಕಾತಿ ಮಾಡುವ ಬಗ್ಗೆ ಕ್ರಮ ಕೈಗೊಂಡಿದೆ ಅಲ್ಲದೇ ಈ ಸಂಬಂಧ ಇಲಾಖಾಧಿಕಾರಿಗಳಿಂದ ಸ್ವೀಕರಿಸುವ ಪ್ರಸ್ತಾವಗಳನ್ನು ಪರಿಗಣಿಸಿ ರಿಟರ್ನಿಂಗ್ ಆಫೀಸರ್ ನೇಮಕ ಮಾಡುವ ಕುರಿತು ಅಗತ್ಯ ಕ್ರಮವಿಡಲಾಗುತ್ತಿದೆ. ಜಿಲ್ಲಾ ಚುನಾವಣಾಧಿಕಾರಿಗಳ / ರಿಟರ್ನಿಂಗ್ ಆಫೀಸರ್ಸ್‌ಗಳ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಮೇಲೆ ಹೇಳಿದ ಅಧಿನಿಯಮ / ನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದೆ, ಹಾಗೂ ಆಯೋಗದಿಂದ ಈ ಸಂಬಂಧ ನಿರ್ದೇಶನ ಹಾಗೂ ಸೂಚನೆಗಳನ್ನು ನೀಡಲಾಗುತ್ತಿದೆ.

ಚುನಾವಣೆ ಮುಗಿದ ನಂತರ ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ವಿಲೇವಾರಿ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿ /ರಿಟರ್ನಿಂಗ್ ಆಫೀಸರ್ ಗಮನ ಹರಿಸಬೇಕಾಗುತ್ತದೆ. ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960 ರ ನಿಯಮ 13E ಮತ್ತು 14AC,14AD ಹಾಗೂ 14AG ಗಳಲ್ಲಿ ಈ ಸಂಬಂಧ ಉಲ್ಲೇಖಿಸಲಾಗಿದೆ.

13E(xi):- ಚುನಾವಣೆಗೆ ಸಂಬಂಧಪಟ್ಟ ಎಲ್ಲಾ ಸಂಗತವಾದ ಚುನಾವಣಾ ದಾಖಲೆಗಳನ್ನು ಸೂಕ್ತ ಸ್ವೀಕೃತಿಯೊಂದಿಗೆ ಸಂಬಂಧಪಟ್ಟ ಸಂಘದ ಸುಪರ್ದಿನಲ್ಲಿ ಸಂರಕ್ಷಿಸಿಡತಕ್ಕದ್ದು, ಆದರೆ ಅಸಾಧಾರಣ ಸಂದರ್ಭಗಳಲ್ಲಿ ಚುನಾವಣಾ ಆಯೋಗ ಅಥವಾ ರಿಟರ್ನಿಂಗ್ ಅಧಿಕಾರಿ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯು ಅಂಥ ದಾಖಲೆಗಳನ್ನು ಉಪವಿಭಾಗೀಯ ಕಛೇರಿಯಲ್ಲಿ ಅಭಿರಕ್ಷೆಯಲ್ಲಿಡುವುದು ಅಗತ್ಯವೆಂದು ಭಾವಿಸಿದಲ್ಲಿ, ಅಂಥ ದಾಖಲೆಗಳನ್ನು ಉಪವಿಭಾಗೀಯ ಕಛೇರಿಯಲ್ಲಿಡಬಹುದು.

13E(xii):- ಸಹಕಾರಿ ಚುನಾವಣಾ ಆಯೋಗವು ನಿರ್ದೇಶಿಸುವ ಅಂಥ ಅವಧಿಗೆ, ರಿಟರ್ನಿಂಗ್ ಅಧಿಕಾರಿಯು ತನ್ನ ವ್ಯಾಪ್ತಿಯಲ್ಲಿ ಬರುವ ಯಾವುದೇ ಸಹಕಾರಿಯ ಸಾಮಾನ್ಯ ಚುನಾವಣೆಗೆ ಸಂಬಂಧಪಟ್ಟಂತೆ ತಾನು ತಯಾರಿಸಿದ ಅಥವಾ ಸಹಾಯಕ ರಿಟರ್ನಿಂಗ್ ಅಧಿಕಾರಿಯಿಂದ ಸ್ವೀಕರಿಸಿದ ಎಲ್ಲಾ ಕಾಗದ ಪತ್ರಗಳನ್ನು, ದಸ್ತಾವೇಜುಗಳನ್ನು ತನ್ನ ಸುಪರ್ದಿನಲ್ಲಿ ಇಟ್ಟಿರತಕ್ಕದ್ದು.

14 AC:-

ಚುನಾವಣೆಗೆ ಸಂಬಂಧಪಟ್ಟ ಕಾಗದಪತ್ರಗಳ ಪರಿವೀಕ್ಷಣೆ ಮತ್ತು ಹಾಜರುಪಡಿಸುವಿಕೆ:– ರಿಟರ್ನಿಂಗ್ ಅಧಿಕಾರಿಯ ಅಭಿರಕ್ಷೆಯಲ್ಲಿರುವಾಗ

(ಎ) ಪಕ್ಕ ಪ್ರತಿಗಳನ್ನುಳ್ಳ (Counterfoil) ಉಪಯೋಗಿಸದ ಮತ ಪತ್ರಗಳ ಪ್ಯಾಕೇಟುಗಳನ್ನು;
(ಬಿ) ಕ್ರಮಬದ್ಧವಾಗಿರುವ ಅಥವಾ ತಿರಸ್ಕರಿಸಿದ ಉಪಯೋಗಿಸಲಾದ ಮತ ಪತ್ರಗಳ ಪ್ಯಾಕೇಟ್‌ಗಳನ್ನು;
(ಸಿ) ಉಪಯೋಗಿಸಿದ ಮತ ಪತ್ರಗಳ ಪಕ್ಕ (Counterfoil) ಪ್ರತಿಗಳ ಪ್ಯಾಕೇಟ್‌ಗಳನ್ನು;
(ಡಿ) ಮತದಾರರ ಪಟ್ಟಿಯ ಗುರುತು ಮಾಡಿದ ಪ್ರತಿಯ ಪ್ಯಾಕೇಟ್‌ಗಳನ್ನು ಮತ್ತು;
(ಇ) ಅವರ ಅಪ್ರಮಾಣಿತ ರುಜುಗಳನ್ನೊಳಗೊಂಡ ಮತದಾರರ ಘೋಷಣೆಗಳ ಪ್ಯಾಕೇಟ್‌ಗಳನ್ನು;

-2-

ಸಕ್ಷಮ ನ್ಯಾಯಾಲಯದ ಆದೇಶಗಳಿಲ್ಲದೆ ಯಾವನೇ ವ್ಯಕ್ತಿಯು ಅಥವಾ ಪ್ರಾಧಿಕಾರಿಯು ತೆರೆಯತಕ್ಕದ್ದಲ್ಲ ಮತ್ತು ಅವುಗಳ ಒಳಾಂಶಗಳನ್ನು ಪರಿಶೀಲಿಸತಕ್ಕದ್ದಲ್ಲ ಅಥವಾ ಯಾವನೇ ವ್ಯಕ್ತಿಯ ಅಥವಾ ಪ್ರಾಧಿಕಾರಿಯ ಮುಂದೆ ಅವುಗಳನ್ನು ಹಾಜರುಪಡಿಸತಕ್ಕದ್ದಲ್ಲ.

14 AD:- ಸಹಕಾರ ಚುನಾವಣಾ ಆಯೋಗವು ಅಥವಾ ಸಕ್ಷಮ ನ್ಯಾಯಾಲಯವು ತದ್ವಿರುದ್ಧವಾಗಿ ಕೊಟ್ಟ ಯಾವುದೇ ನಿರ್ದೇಶನಗಳಿಗೆ ಒಳಪಟ್ಟು,

ಎ) ಉಪಯೋಗಿಸದ ಮತಪತ್ರಗಳ ಪ್ಯಾಕೇಟ್‌ಗಳನ್ನು ಆರು ತಿಂಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಆ ತರುವಾಯ ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ವಿಧಾನದಿಂದ ನಾಶಪಡಿಸತಕ್ಕದ್ದು.

ಬಿ) ಇತರೆ ಪ್ಯಾಕೇಟ್ಟುಗಳನ್ನು ಒಂದು ವರ್ಷದ ಅವಧಿಯವರೆಗೆ ವಶದಲ್ಲಿಟ್ಟುಕೊಳ್ಳತಕ್ಕದ್ದು ಮತ್ತು ಆ ತರುವಾಯ ಅವುಗಳನ್ನು ನಾಶಪಡಿಸತಕ್ಕದ್ದು.

ಪರಂತು, ಉಪಯೋಗಿಸಿದ ಮತ ಪತ್ರಗಳ ಪಕ್ಕಪ್ರತಿಗಳನ್ನು ಒಳಗೊಂಡ ಪ್ಯಾಕೇಟ್ಟುಗಳನ್ನು ಸಹಕಾರ ಚುನಾವಣಾ ಆಯೋಗದ ಪೂರ್ವಾನುಮೋದನೆ ಪಡೆಯದೆ ನಾಶಪಡಿಸತಕ್ಕದ್ದಲ್ಲ.

ಸಿ) ಚುನಾವಣೆಗೆ ಸಂಬಂಧಪಟ್ಟ ಇತರ ಎಲ್ಲಾ ಕಾಗದ ಪತ್ರಗಳನ್ನು ಸಹಕಾರಿ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಅವಧಿಯವರೆಗೆ ವಶದಲ್ಲಿಟ್ಟುಕೊಳ್ಳತಕ್ಕದ್ದು.

14 AG (20) :-

ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟಂತೆ, ಚುನಾವಣೆಯ ಫಲಿತಾಂಶವನ್ನು ಘೋಷಿಸಿದ ತರುವಾಯ, ಪದಾಧಿಕಾರಿಗಳ ಚುನಾವಣೆಗೆ ಸಂಬಂಧಪಟ್ಟ ಮತ ಪತ್ರಗಳನ್ನು ಮತ್ತು ದಾಖಲೆಗಳನ್ನುಳ್ಳ ಮೊಹರಾದ ಲಕೋಟೆಯನ್ನು ಸಂಘದ ಮುಖ್ಯ ಕಾರ್ಯನಿರ್ವಾಹಕನಿಗೆ ಕೊಡತಕ್ಕದ್ದು. ಚುನಾವಣೆಯ ದಿನಾಂಕದಿಂದ ಆರು ತಿಂಗಳ ಅವಧಿಯವರೆಗೆ ಅಥವಾ ಚುನಾವಣೆಗೆ ಸಂಬಂಧಿಸಿವಂತೆ ಸಲ್ಲಿಸಲಾದ ವ್ಯಾಜ್ಯ ಅಥವಾ ಅಪೀಲು ವಿಲೇವಾರಿಯಾಗುವವರೆಗೆ, ಇವೆರಡರಲ್ಲಿ ಯಾವುದು ಕೊನೆಯದೋ ಅಲ್ಲಿಯವರೆಗೆ ಸಂಘದ ಮುಖ್ಯ ಕಾರ್ಯನಿರ್ವಾಹಕನು ಸದರಿ ದಾಖಲೆಗಳನ್ನುಳ್ಳ ಮೊಹರಾದ ಲಕೋಟೆಯನ್ನು ಸುರಕ್ಷಿತವಾಗಿ ಅಭಿರಕ್ಷಿಸತಕ್ಕದ್ದು ಮತ್ತು ಆ ನಂತರ ನಾಶಪಡಿಸತಕ್ಕದ್ದು.

ಮೇಲ್ಕಂಡ ಸಹಕಾರ ಸಂಘಗಳ ನಿಯಮಗಳ ಅವಕಾಶವನ್ನು ಅವಲೋಕಿಸಿದಾಗ–

1. ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯವರೆಗೆ ಸಂಬಂಧಿಸಿದ ದಾಖಲಾತಿಗಳನ್ನು ಸಂರಕ್ಷಿಸಿಡತಕ್ಕದ್ದು.
2. ನ್ಯಾಯಾಲಯದಲ್ಲಿ ಚುನಾವಣೆ ಸಂಬಂಧ ವಿವಾದಗಳಿದ್ದಲ್ಲಿ ವಿವಾದ /ಅಪೀಲು ವಿಲೇವಾರಿಯಾಗುವವರೆಗೆ ದಾಖಲಾತಿಗಳನ್ನು ಸಂರಕ್ಷಿಸಿ ಇಡತಕ್ಕದ್ದು.
3. ನಿಯಮ 13E(xi) ರ ಅವಕಾಶದಂತೆ ಉಪವಿಭಾಗೀಯ ಕಛೇರಿಯಲ್ಲಿಡುವುದು ಅಗತ್ಯವೆಂದು ಕಂಡು ಬಂದಲ್ಲಿ ಅದರಂತೆ ಕ್ರಮವಿಡುವುದು.
4. ಸಂಘದ / ಸಹಕಾರಿಯ ಮುಖ್ಯಕಾರ್ಯನಿರ್ವಾಹಕನ ವಶಕ್ಕೆ ಸುರಕ್ಷಿತ ಅಭಿರಕ್ಷೆಗಾಗಿ ವಹಿಸಿಕೊಡಲು ಅವಕಾಶವಿರುವ ಸಂಬಂಧ ಅದರಂತೆ ಕ್ರಮವಿಡುವುದು.
5. ನಿಯಮಗಳಲ್ಲಿ ಗೊತ್ತುಪಡಿಸಲಾದ ಅವಧಿ ಅಥವಾ ಗರಿಷ್ಟ ಒಂದು ವರ್ಷದ ಅವಧಿಯವರೆಗೆ ನ್ಯಾಯಾಲಯದಲ್ಲಿನ ವಿವಾದ ಅಥವಾ ಅಪೀಲು ಪ್ರಕರಣ ಇದ್ದಲ್ಲಿ ಅವುಗಳು ವಿಲೇವಾರಿಯಾಗುವವರೆಗೆ ದಾಖಲಾತಿಗಳನ್ನು ಸಂರಕ್ಷಿಸಿ ಇಡತಕ್ಕದ್ದು. ಆ ನಂತರ ಸರ್ಕಾರಿ ಕಛೇರಿಗಳಲ್ಲಿ ದಾಖಲಾತಿಗಳ/ ಕಾಗದ ಪತ್ರಗಳ ವಿಲೇವಾರಿ ಸಂಬಂಧ ಅಳವಡಿಸುವ ನಿಯಮಗಳು / ಕ್ರಮಗಳಂತೆ ವಿಲೇವಾರಿಗಾಗಿ ಸೂಕ್ತ ಕ್ರಮವಿಡುವುದು ಈ ಸಂಬಂಧ ಜಿಲ್ಲಾ ಚುನಾವಣಾ ಅಧಿಕಾರಿಗಳ ಸಲಹೆ / ಮಾರ್ಗದರ್ಶನ ಪಡೆಯುವುದು.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 14 AC (2) ರ ಅವಕಾಶದಂತೆ 14 A (1) ರಲ್ಲಿ ದಾಖಲಾತಿಗಳನ್ನು ಹೊರತುಪಡಿಸಿ ಉಳಿದಂತೆ ಸಹಕಾರ ಚುನಾವಣಾ ಆಯೋಗವು ನಿರ್ದೇಶಿಸಬಹುದಾದಂಥ ಷರತ್ತುಗಳಿಗೆ ಮತ್ತು ಅಂಥ ಶುಲ್ಕದ ಸಂದಾಯಕ್ಕೆ ಒಳಪಟ್ಟು

(ಎ) ಚುನಾವಣೆಗೆ ಸಂಬಂಧಪಟ್ಟ ಎಲ್ಲಾ ಇತರ ಕಾಗದ ಪತ್ರಗಳು ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು ಮತ್ತು

(ಬಿ) ಲಿಖಿತ ಕೋರಿಕೆಯ ಮೇರೆಗೆ ಅವುಗಳ ಪ್ರತಿಗಳನ್ನು ಒದಗಿಸತಕ್ಕದ್ದು.

ನಿಯಮ 14 AC (3) ರ ಅವಕಾಶದಂತೆ ರಿಟರ್ನಿಂಗ್ ಅಧಿಕಾರಿಯು ಕಳುಹಿಸುವ ಅಧಿಕೃತ ವರದಿಗಳ ಪ್ರತಿಗಳನ್ನು ಪ್ರತಿ, ಪ್ರತಿಗೆ ರೂ.2/– ರಂತೆ ಫೀ ಪಡೆದು ನೀಡಬಹುದಾಗಿದೆ. ಈ ರೀತಿ ಪಡೆಯುವ ಫೀಯನ್ನು ಸರ್ಕಾರಕ್ಕೆ ಜಮಾ ಪಡಿಸತಕ್ಕದ್ದಾಗಿದೆ,

ನಿಯಮ 14 AB ದ ಅವಕಾಶದಂತೆ ಮತ ಪೆಟ್ಟಿಗೆಗಳ ಮತ್ತು ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ಅಭಿರಕ್ಷೆಯ ಸಂಬಂಧ.

1. ತಾಲ್ಲೂಕು ಖಜಾನೆಯಲ್ಲಿ ಸುರಕ್ಷಿತ ಅಭಿರಕ್ಷೆಯಲ್ಲಿಡಲು ಅವಕಾಶವಾದಲ್ಲಿ ಅಲ್ಲಿ ಸ್ವೀಕೃತಿ ಪಡೆದು ಇಡತಕ್ಕದ್ದು ಅಥವಾ
2. ಎಲ್ಲಾ ದಾಖಲಾತಿಗಳನ್ನು ಲೋಹದ ಪೆಟ್ಟಿಗೆಯಲ್ಲಿಟ್ಟು ಬೀಗದಿಂದ ಭದ್ರಪಡಿಸಿ, ಮೊಹರು ಮಾಡಿ ರಿಟರ್ನಿಂಗ್ ಆಫೀಸರ್ / ಸಹಾಯಕ ರಿಟರ್ನಿಂಗ್ ಆಫೀಸರ್ ತಮ್ಮ ಲೋಹದ ಮೊಹರಿನಿಂದ ಮೊಹರು ಹಾಕಿ ಇತರ ಚುನಾಯಿತ ಪ್ರತಿನಿಧಿಗಳಿದ್ದಲ್ಲಿ ಅವರ ಸಮಕ್ಷಮ ಸಂಘದ ಮುಖ್ಯ ಕಾರ್ಯನಿರ್ವಾಹಕರಿಗೆ ಒಂದು ವರ್ಷದ ಅವಧಿಗೆ ಸುರಕ್ಷಿತ ಅಭಿರಕ್ಷೆಗಾಗಿ ವಿವರಗಳನ್ನು ದಾಖಲಿಸಿ [14AB (2) (a ನಿಂದ f ವರೆಗೆ)] ಸ್ವೀಕೃತಿ ಪಡೆಯತಕ್ಕದ್ದು, ಸ್ವೀಕೃತಿಯ ಒಂದು ಪ್ರತಿಯನ್ನು ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ / ಒಂದು ಪ್ರತಿಯನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿಗೆ ಸಲ್ಲಿಸಿ ಮೂಲ ಸ್ವೀಕೃತಿಯನ್ನು ರಿಟರ್ನಿಂಗ್ ಆಫೀಸರ್ ತನ್ನ ವಶದಲ್ಲಿ ಇಟ್ಟುಕೊಳ್ಳತಕ್ಕದ್ದು, ಚುನಾವಣಾ ವಿಷಯವಾಗಿ ವಿವಾದಗಳು ಬಂದಲ್ಲಿ ನ್ಯಾಯಾಲಯದಲ್ಲಿ ವಿವಾದ /ಅಪೀಲು ಇತ್ಯರ್ಥವಾಗುವವರೆಗೆ ಸುರಕ್ಷಿತ ಅಭಿರಕ್ಷೆಯಲ್ಲಿಡುವಂತೆ ಮುಖ್ಯ ಕಾರ್ಯನಿರ್ವಾಹಕರಿಗೆ ನಿರ್ದೇಶಿಸತಕ್ಕದ್ದು ನಿಯಮ 13 E (XI) ದ ಅವಕಾಶದಂತೆ ಉಪವಿಭಾಗೀಯ ಕಛೇರಿಯಲ್ಲಿಡುವುದು ಸೂಕ್ತ ಎಂದು ಅಭಿಪ್ರಾಯಪಟ್ಟಲ್ಲಿ ಅಸಾಧಾರಣ ಸಂದರ್ಭವಿದ್ದಲ್ಲಿ ಸದರಿ ಕಛೇರಿಯಲ್ಲಿಡತಕ್ಕದ್ದು.

(ಎನ್.ಸಿ.ಮುನಿಯಪ್ಪ)
ಆಯುಕ್ತರು

**ಇವರಿಗೆ,**

1. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳಿಗೆ,
2. ಎಲ್ಲಾ ಉಪ ವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ,
3. ಎಲ್ಲಾ ಪ್ರಾಂತೀಯ ಜಂಟಿ ನಿಬಂಧಕರುಗಳಿಗೆ,
4. ಎಲ್ಲಾ ಅಪರ ನಿಬಂಧಕರು / ಜಂಟಿ ನಿಬಂಧಕರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು.

**ಪ್ರತಿಗಳು:–**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು
2. ಮಾನ್ಯ ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560052.

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/ಚುನಾವಣೆ/ಡೆಲಿಗೇಟ್/26/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 05.09.2013

**-:ಸುತ್ತೋಲೆ:-**

**ವಿಷಯ:-** ಮಾಧ್ಯಮಿಕ ಹಾಗೂ ಫೆಡರಲ್ ಸಹಕಾರ ಸಂಘಗಳಿಗೆ ಆಡಳಿತ ಮಂಡಲಿ ಚುನಾವಣೆ- ಸದಸ್ಯ ಸಂಘಗಳು ಪ್ರತಿನಿಧಿ /ಡೆಲಿಗೇಟ್‌ಗಳನ್ನು ಕಳುಹಿಸುವ ಕುರಿತು.

**ಉಲ್ಲೇಖ:-**
1. ಆಯೋಗದ ಆದೇಶ ಸಂಖ್ಯೆ:ಸಚುಆ/16/2013-14, ದಿನಾಂಕ: 06.08.2013
2. ಆಯೋಗದ ಅಧಿಸೂಚನೆ ಸಂಖ್ಯೆ:ಸಚುಆ/23/ಚುನಾವಣೆ/ಅ.ಸೂ/ 2013-14, ದಿನಾಂಕ:17.08.2013.
3. ಆಯೋಗದ ಚೆಕ್‌ಲಿಸ್ಟ್ ದಿನಾಂಕ:24.08.2013

***

ಕರ್ನಾಟಕ ರಾಜ್ಯದಲ್ಲಿ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಸಂಬಂಧ ಸಹಕಾರ ಚುನಾವಣಾ ಆಯೋಗವು ಈಗಾಗಲೇ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳ ಚುನಾವಣೆಯನ್ನು ಅಧಿನಿಯಮ / ನಿಯಮಗಳನ್ವಯ ನಡೆಸುವ ಕುರಿತು ಕ್ರಮ ಕೈಗೊಂಡಿದೆ ಎರಡು ಹಾಗೂ ಮೂರನೇ ಹಂತದಲ್ಲಿ ಮಾಧ್ಯಮಿಕ ಹಾಗೂ ಫೆಡರಲ್ ಸಹಕಾರ ಸಂಘಗಳಿಗೆ ಚುನಾವಣೆ ನಡೆಸುವ ಸಂಬಂಧ ಆಯೋಗವು ಉಲ್ಲೇಖ(1) ರ ಆದೇಶದಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಚುನಾವಣಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿರುತ್ತದೆ. ಈ ವರ್ಗದ ಸಹಕಾರ ಸಂಘಗಳು ನಿಗಧಿತ ಅವಧಿಯಲ್ಲಿ ಚುನಾವಣೆ ನಡೆಸುವ ಬಗ್ಗೆ ದಿನಾಂಕಗಳನ್ನು ನಿಗಧಿಪಡಿಸಿ ಉಲ್ಲೇಖ (2) ರಲ್ಲಿ ಕಾಣಿಸಿರುವಂತೆ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಚುನಾವಣೆ ನಡೆಸುವ ಸಂಬಂಧ ಹಂತ ಹಂತವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಉಲ್ಲೇಖ (3) ರಲ್ಲಿ ಕಾಣಿಸಿರುವಂತೆ ಚೆಕ್‌ಲಿಸ್ಟ್ ಹೊರಡಿಸಲಾಗಿದೆ.

ಮಾಧ್ಯಮಿಕ ಹಾಗೂ ಫೆಡರಲ್ ಸಹಕಾರ ಸಂಘಗಳ ಆಡಳಿತ ಮಂಡಲಿ ಚುನಾವಣೆ ಸಂಬಂಧ, ಸದಸ್ಯ ಸಂಘಗಳು ಪ್ರತಿನಿಧಿಗಳನ್ನು / ಡೆಲಿಗೇಟ್‌ಗಳನ್ನು ಆಯ್ಕೆ ಮಾಡಿ ಕಳುಹಿಸುವ ಸಂಬಂಧ ವಿಷಯವನ್ನು ಸದಸ್ಯ ಸಂಘಗಳ ಆಡಳಿತ ಮಂಡಲಿ ಸಭೆಯಲ್ಲಿ ಮಂಡಿಸದೇ, ಸಂಘದ ಅಧ್ಯಕ್ಷರು / ಅಥವಾ ಅವರಿಂದ ನೇಮಿಸಲ್ಪಟ್ಟ ಒಬ್ಬ ವ್ಯಕ್ತಿಯು ಸಂಘದ ಪ್ರತಿನಿಧಿ /ಡೆಲಿಗೇಟ್ ಆಗಿ ಕಳುಹಿಸುತ್ತಿರುವ ಅಂಶಗಳು ಆಯೋಗದ ಗಮನಕ್ಕೆ ಬಂದಿದೆ. ಸದಸ್ಯ ಸಂಘದ ಇತರೆ ನಿರ್ದೇಶಕರು ಈ ಬಗ್ಗೆ ಯಾವುದೇ ಮಾಹಿತಿ ಹೊಂದಿಲ್ಲದಿರುವುದನ್ನು ಕೆಲವು ಪ್ರಕರಣಗಳಲ್ಲಿ ಗಮನಿಸಲಾಗಿದೆ. ಸದಸ್ಯ ಸಂಘಗಳು ಪ್ರತಿನಿಧಿಗಳನ್ನು ಕಳುಹಿಸುವ ಸಂಬಂಧ ಪಾರದರ್ಶಕತೆ ಕಾಯ್ದುಕೊಳ್ಳುವ ದೃಷ್ಟಿಯಿಂದ ಹಾಗೂ ಸಮಂಜಸವಾದ ಕ್ರಮ ಕೈಗೊಳ್ಳುವ ದೃಷ್ಟಿಯಿಂದ ಮಾರ್ಗದರ್ಶಿ ಸೂತ್ರಗಳನ್ನು ನೀಡುವ ಅವಶ್ಯಕತೆ ಇರುವುದನ್ನು ಆಯೋಗ ಗಮನಿಸಿದೆ.

ಮಾಧ್ಯಮಿಕ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಬೈಲಾ ರೀತ್ಯಾ ಬಿಡಿ ವ್ಯಕ್ತಿಗಳ ಕ್ಷೇತ್ರ ಮತ್ತು ಸಹಕಾರ ಸಂಘಗಳ ಕ್ಷೇತ್ರವೆಂದು, ಎರಡು ಕ್ಷೇತ್ರಗಳಿರುತ್ತವೆ. ಸಹಕಾರ ಸಂಘಗಳ ಕ್ಷೇತ್ರದಲ್ಲಿ ಸಂಬಂಧಿಸಿದ ಸದಸ್ಯ ಸಹಕಾರ ಸಂಘಗಳ ಪ್ರತಿನಿಧಿಗಳು / ಡೆಲಿಗೇಟ್‌ಗಳು ಭಾಗವಹಿಸುತ್ತಾರೆ. ಫೆಡರಲ್ ಸಹಕಾರ ಸಂಘಗಳ ಚುನಾವಣೆಯಲ್ಲಿ, ಪ್ರಾಥಮಿಕ ಸಹಕಾರ ಸಂಘಗಳಿಂದ ನಿಯೋಜಿತರಾಗುವ ಡೆಲಿಗೇಟ್ / ಪ್ರತಿನಿಧಿಗಳು ಫೆಡರಲ್ ಸಂಘದ ಚುನಾವಣೆಯಲ್ಲಿ ಮತದಾನ ಮಾಡಲು / ಅಗತ್ಯವಿದ್ದಲ್ಲಿ ಸ್ಪರ್ಧಿಸಲು /ನಾಮಪತ್ರಗಳನ್ನು ಹಿಂತೆಗೆದುಕೊಳ್ಳಲು ಸಂಬಂಧಿಸಿದ ಪ್ರಾಥಮಿಕ ಸಂಘದಿಂದ ಪ್ರಾಧಿಕಾರ ಪಡೆದವರಾಗಿರುತ್ತಾರೆ. ಈ ರೀತಿ ಸದಸ್ಯ ಪ್ರಾಥಮಿಕ ಸಹಕಾರ ಸಂಘಗಳಿಂದ ಮಾಧ್ಯಮಿಕ ಹಾಗೂ ಫೆಡರಲ್ ಸಂಘಗಳ ಆಡಳಿತ ಮಂಡಳಿ ಚುನಾವಣೆಯಲ್ಲಿ ಭಾಗವಹಿಸಲು / ಮತಚಲಾಯಿಸಲು / ಅಗತ್ಯ ಕಂಡು ಬಂದರೆ ಸ್ಪರ್ಧಿಸಲು ನಿಯೋಜಿಸುವ ಸಹಕಾರ ಸಂಘಗಳ ಪ್ರತಿನಿಧಿ /ಡೆಲಿಗೇಟ್‌ಗಳನ್ನು ಕಳುಹಿಸುವಾಗ ಸದಸ್ಯ ಪ್ರಾಥಮಿಕ ಸಹಕಾರ ಸಂಘವು ಈ ಕೆಳಕಂಡಂತೆ ಕ್ರಮ ಅನುಸರಿಸತಕ್ಕದ್ದಾಗಿದೆ.

1. ಸದಸ್ಯ ಸಹಕಾರ ಸಂಘವು ತನ್ನ ಪರವಾಗಿ ಮಾಧ್ಯಮಿಕ / ಫೆಡರಲ್ ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆ ಸಂಬಂಧ ಚುನಾವಣಾ ನೋಟೀಸ್ ಸ್ವೀಕರಿಸಿದ ನಂತರ ಪ್ರತಿನಿಧಿ/ ಡೆಲಿಗೇಟ್ ಅನ್ನು ನಿಯೋಜಿಸುವ / ಕಳುಹಿಸುವ ಬಗ್ಗೆ ಮುಖ್ಯ ವಿಷಯವಾಗಿ ಅಜೆಂಡಾದಲ್ಲಿ ಸೇರಿಸಿ ಆಡಳಿತ ಮಂಡಳಿ ಸಭೆಯನ್ನು ನಿಯಮಾನುಸಾರ ಕರೆದು, ಸಭೆಯ ನೋಟೀಸ್‌ನ್ನು ಆಡಳಿತ ಮಂಡಳಿಯ ಎಲ್ಲಾ ಸದಸ್ಯರಿಗೂ / ನಿಯಮ 14ಎ.ಕೆ ಹಾಗೂ ಬೈಲಾದಲ್ಲಿನ ಅವಕಾಶಗಳನ್ವಯ ಕಳುಹಿಸತಕ್ಕದ್ದು ಈ ರೀತಿಯ ಸಭಾ ನೋಟೀಸ್‌ನ್ನು ಪ್ರತಿಯನ್ನು ಮಾಹಿತಿಗಾಗಿ ಸಂಬಂಧಿಸಿದ ಮಾಧ್ಯಮಿಕ/ ಫೆಡರಲ್ ಸಂಘಕ್ಕೆ ಕಳುಹಿಸತಕ್ಕದ್ದು.

ಸಂಘದಲ್ಲಿ ಹೊಸ ಮಂಡಲಿ ರಚನೆಯಾಗಿದ್ದು ಪದಾಧಿಕಾರಿಗಳ ಚುನಾವಣೆ ಆಗಿದ್ದಲ್ಲಿ, ಹೊಸ ಸಮಿತಿಯವರು ಡೆಲಿಗೇಟ್ / ಪ್ರತಿನಿಧಿಯನ್ನು ನಿಯಮಾನುಸಾರ ಕಳುಹಿಸುವ ಬಗ್ಗೆ ಕ್ರಮವಿಡತಕ್ಕದ್ದು. ಉಳಿದಂತೆ ಹಾಲಿ ಇರುವ ಮಂಡಲಿಯು ಕ್ರಮವಿಡತಕ್ಕದ್ದು.

2. ಮಾಧ್ಯಮಿಕ /ಫೆಡರಲ್ ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆ ಸಂಬಂಧ, ಸದಸ್ಯ ಸಹಕಾರ ಸಂಘದಿಂದ ಪ್ರತಿನಿಧಿ / ಡೆಲಿಗೇಟ್ ಆಗಿ ಯಾರನ್ನು ಕಳುಹಿಸಬೇಕೆಂಬ ಬಗ್ಗೆ ಚರ್ಚಿಸಿ, ಸರ್ವಾನುಮತದ / ಬಹುಮತದ ನಿರ್ಣಯ ಕೈಗೊಳ್ಳತಕ್ಕದ್ದಾಗಿದೆ. ಈ ರೀತಿ ಸದಸ್ಯ ಸಂಘದ ಪ್ರತಿನಿಧಿ /ಡೆಲಿಗೇಟ್ ಆಗಿ ಆಯ್ಕೆಯಾದವರು ಸಂಘದ ಪ್ರತಿನಿಧಿಯಾಗಿ ಮಾಧ್ಯಮಿಕ / ಫೆಡರಲ್ ಸಂಘಗಳ ಆಡಳಿತ ಮಂಡಲಿಯ ಚುನಾವಣೆಯಲ್ಲಿ ಭಾಗವಹಿಸಲು, ಮತದಾನ ಮಾಡಲು / ಅಗತ್ಯ ಕಂಡು ಬಂದಲ್ಲಿ ಸ್ಪರ್ಧಿಸಲು /ಉಮೇದುವಾರಿಕೆ ವಾಪಸ್ಸು ಪಡೆಯಲು ಅಧಿಕಾರ ನೀಡತಕ್ಕದ್ದಾಗಿದೆ. ಈ ರೀತಿ ನಿರ್ಣಯದ ಪ್ರತಿಯನ್ನು ಸಂಬಂಧಿಸಿದ ಮಾಧ್ಯಮಿಕ / ಫೆಡರಲ್ ಸಂಘಕ್ಕೆ ಕಳುಹಿಸತಕ್ಕದ್ದಾಗಿದೆ. ಸಂಘದ ಮುಖ್ಯ ಕಾರ್ಯನಿರ್ವಾಹಕನು, ಆಡಳಿತ ಮಂಡಲಿಯ ನಿರ್ಣಯದ ಪ್ರತಿಯನ್ನು ಮಾಹಿತಿಗಾಗಿ ವ್ಯಾಪ್ತಿಯ ಸಹಕಾರ ಸಂಘಗಳ ನಿಬಂಧಕರಿಗೆ ಅಧಿನಿಯಮ ಪ್ರಕರಣ 29ಜಿ(6) ರೀತ್ಯಾ ಕಳುಹಿಸತಕ್ಕದ್ದು.

3. ಸದಸ್ಯ ಸಂಘವು ಮಾಧ್ಯಮಿಕ /ಫೆಡರಲ್ ಸಹಕಾರ ಸಂಘಕ್ಕೆ ನಿಯೋಜಿಸುವ /ಕಳುಹಿಸುವ ಪ್ರತಿನಿಧಿ /ಡೆಲಿಗೇಟ್‌ನ ಪಾಸ್‌ಪೋರ್ಟ್ ಅಳತೆಯ ದೃಢೀಕೃತ ಭಾವಚಿತ್ರವನ್ನು ಮತ್ತು ಪ್ರತಿನಿಧಿ /ಡೆಲಿಗೇಟ್‌ನ ಮಾದರಿ ಸಹಿಯನ್ನು ನಮೂನೆಯಲ್ಲಿ ದೃಢೀಕರಿಸಿ ಕಳುಹಿಸತಕ್ಕದ್ದು. [ನಿಯಮ 13ಡಿ(6)] ರಂತೆ.

4. ಸಂಘದ ಮುಖ್ಯ ಕಾರ್ಯನಿರ್ವಾಹಕನು, ಮಾಧ್ಯಮಿಕ ಸಂಘದ / ಫೆಡರಲ್ ಸಂಘದ ಮುಖ್ಯ ಕಾರ್ಯನಿರ್ವಾಹಕರಿಗೆ, ಸದಸ್ಯ ಸಂಘದ ಪರವಾಗಿ ಮೇಲ್ಕಂಡ ಮಾಧ್ಯಮಿಕ / ಫೆಡರಲ್ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಭಾಗವಹಿಸಲು ಪ್ರತಿನಿಧಿ / ಡೆಲಿಗೇಟ್ ಅನ್ನು ನಿಯೋಜಿಸುತ್ತಿರುವ ಬಗ್ಗೆ ಪತ್ರದಲ್ಲಿ ತಿಳಿಸಿ ನಮೂನೆಯಲ್ಲಿ ಮಾಹಿತಿ ಸಲ್ಲಿಸುವಿಕೆ ಸೇರಿದಂತೆ, ಪ್ರತಿನಿಧಿ / ಡೆಲಿಗೇಟ್ ಆಯ್ಕೆ ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳಲು ನಡೆಸುವ ಸಭೆಯ ಅಜೆಂಡಾ ಒಳಗೊಂಡ ನೋಟಿಸ್ ಪ್ರತಿ, ಆಡಳಿತ ಮಂಡಲಿ ನಿರ್ಣಯ, ಪ್ರತಿನಿಧಿ / ಡೆಲಿಗೇಟ್‌ನ ದೃಢೀಕರಿಸಿದ ಭಾವಚಿತ್ರ ಮತ್ತು ಮಾದರಿ ಸಹಿಯನ್ನು ಲಗತ್ತಿಸಿ, ಕಳುಹಿಸತಕ್ಕದ್ದು.

5. ಮಾಧ್ಯಮಿಕ / ಫೆಡರಲ್ ಸಂಘಗಳು, ಸದಸ್ಯ ಸಂಘಗಳಿಂದ ಪ್ರತಿನಿಧಿ / ಡೆಲಿಗೇಟ್‌ಗಳನ್ನು ಕಳುಹಿಸುವ ಸಂಬಂಧ ಸ್ವೀಕರಿಸುವ ಕ್ರಮ ಸಂಖ್ಯೆ 04 ರಲ್ಲಿ ವಿವರಿಸಲಾದ ದಾಖಲಾತಿಗಳನ್ನು ಪರಿಶೀಲಿಸಿ, ನಂತರ ಸಮರ್ಪಕವಾದ ಮತದಾರರ ಪಟ್ಟಿಯನ್ನು ತಯಾರಿಸತಕ್ಕದ್ದು.

6. ಸದಸ್ಯ ಸಹಕಾರ ಸಂಘದ ಪರವಾಗಿ ಅದರ ಪ್ರತಿನಿಧಿ, ನಾಮ ನಿರ್ದೇಶನ ಪತ್ರವನ್ನು ಸಲ್ಲಿಸುವಾಗ ನಾಮ ನಿರ್ದೇಶನ ಪತ್ರದ ಜೊತೆ ಆಡಳಿತ ಮಂಡಲಿ ನಿರ್ಣಯದ ಪ್ರತಿಯನ್ನು ಲಗತ್ತಿಸಿ, ಪ್ರತಿನಿಧಿ ಸಹಿ ಮಾಡಿರತಕ್ಕದ್ದಾಗಿದೆ ಮತ್ತು ದೃಢೀಕರಿಸಿದ ಭಾವಚಿತ್ರ / ಮಾದರಿ ಸಹಿ ಹಾಗೂ ಸದಸ್ಯ ಸಂಘದ ಸಭೆಯನ್ನು ನಡೆಸಿದ ಸಂಬಂಧ ಸಭಾ ಸೂಚನಾ ಪತ್ರದ ಪ್ರತಿಯನ್ನು ಕಳುಹಿಸತಕ್ಕದ್ದು.

7. ಒಂದು ಸಹಕಾರ ಸಂಘವು ಮತ್ತೊಂದು ಸಹಕಾರ ಸಂಘದ ಅಂದರೆ ಮಾಧ್ಯಮಿಕ/ಫೆಡರಲ್ ಸಂಘದ ಸದಸ್ಯ ಸಂಘವಾಗಿದ್ದಾಗ, ಅಂತಹ ಸಂಘಕ್ಕೆ ಪ್ರತಿನಿಧಿಯನ್ನು ಕಳುಹಿಸುವಾಗ ನಿರ್ದೇಶಕರಲ್ಲಿ ಒಬ್ಬರನ್ನು ಕಳುಹಿಸತಕ್ಕದ್ದು. ಆ ಪ್ರತಿನಿಧಿ ಮಾತ್ರ ಮಾಧ್ಯಮಿಕ/ಫೆಡರಲ್ ಸಂಘದ ಚುನಾವಣೆಯಲ್ಲಿ ಮತ ಚಲಾಯಿಸತಕ್ಕದ್ದು.

8. ಸದಸ್ಯ ಸಹಕಾರ ಸಂಘವು, ಮಾಧ್ಯಮಿಕ/ಫೆಡರಲ್ ಸಹಕಾರ ಸಂಘಗಳ ಆಡಳಿತ ಮಂಡಳಿ ಚುನಾವಣೆಯಲ್ಲಿ, ಬೈಲಾ ರೀತ್ಯಾ ಅರ್ಹತೆಗಳಿಸಿದ್ದಲ್ಲಿ ಮಾತ್ರ ಪ್ರತಿನಿಧಿ/ಡೆಲಿಗೇಟ್‌ನ್ನು ಕಳುಹಿಸಬೇಕಾಗುತ್ತದೆ. ಸದಸ್ಯ ಸಂಘವು ಮತದಾನ ಮಾಡುವ ಅರ್ಹತೆ ಹೊಂದಿಲ್ಲದಿದ್ದಲ್ಲಿ, ಅಂತಹ ಪ್ರಕರಣಗಳಲ್ಲಿ ಪ್ರತಿನಿಧಿ/ಡೆಲಿಗೇಟ್‌ಗಳನ್ನು ಕಳುಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ಸದಸ್ಯ ಸಂಘದ ಪರವಾಗಿ ಮತ ಚಲಾಯಿಸಲು ಮತದಾನಕ್ಕೆ ಅರ್ಹತೆ ಹೊಂದಿದ ಸಂಘಗಳು ಮಾತ್ರ ಪ್ರತಿನಿಧಿ/ಡೆಲಿಗೇಟ್‌ನ್ನು ಕಳುಹಿಸತಕ್ಕದ್ದು. ಆದರೆ ಪ್ರತಿನಿಧಿ ಪ್ರಾಧಿಕಾರ ಹೊಂದಿದ್ದಲ್ಲಿ ಮಾಧ್ಯಮಿಕ /ಫೆಡರಲ್ ಸಂಘದ ಮಹಾಸಭೆಯಲ್ಲಿ ಪ್ರತಿನಿಧಿಯಾಗಿ ಭಾಗವಹಿಸಬಹುದು.

ಸದಸ್ಯ ಸಂಘಗಳು ಮಾಧ್ಯಮಿಕ/ಫೆಡರಲ್ ಸಂಘಗಳಿಗೆ ಪ್ರತಿನಿಧಿ/ಡೆಲಿಗೇಟ್ ಕಳುಹಿಸುವಾಗ [ನಿಯಮ 13D(5) ಮತ್ತು ನಿಯಮ 13D(6)]ಇದಕ್ಕೆ ಲಗತ್ತಿಸಿರುವ ನಮೂನೆಯಲ್ಲಿ, ಭಾವಚಿತ್ರ/ಮಾದರಿ ಸಹಿ ದೃಢೀಕರಣದೊಂದಿಗೆ ಕಳುಹಿಸುವ ಬಗ್ಗೆ ಸಂಬಂಧಿಸಿದ ಸಂಘಗಳಿಗೆ ಸೂಚಿಸುವಂತೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ನಿರ್ದೇಶಿಸಿದೆ.

ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಸದಸ್ಯ ಸಂಘಗಳ ಪ್ರತಿನಿಧಿಗಳು ಅಗತ್ಯ ಕ್ರಮವಿಡುವುದು.

**(ಎನ್.ಸಿ. ಮುನಿಯಪ್ಪ)**
**ಸಹಕಾರ ಚುನಾವಣಾ ಆಯುಕ್ತರು**

<u>**ಪ್ರತಿಗಳು:**</u>

1. ಜಿಲ್ಲಾ ಚುನಾವಣಾಧಿಕಾರಿಗಳು/ ಜಿಲ್ಲಾಧಿಕಾರಿಗಳು, ............... ಜಿಲ್ಲೆ
2. ಸಹಕಾರ ಸಂಘಗಳ ಜಂಟಿ ನಿಬಂಧಕರು, ............ ಪ್ರಾಂತ್ಯ
3. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು, ................ಜಿಲ್ಲೆ
4. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ..............ಉಪವಿಭಾಗ
5. ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರು
6. ಎಲ್ಲಾ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿ,
7. ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ, ಬೆಂಗಳೂರು
8. ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು
9. ಸಹಕಾರ ಸಂಘಗಳ ಅಪರ ನಿಬಂಧಕರು,
10. ನಿರ್ದೇಶಕರು, ಸಕ್ಕರೆ ನಿರ್ದೇಶನಾಲಯ, ಹಾಗೂ ಕಬ್ಬು ಅಭಿವೃದ್ಧಿ ಆಯುಕ್ತರು, ಬೆಂಗಳೂರು.

**ಲಗತ್ತು**

---------------------------- ಸಹಕಾರ ಸಂಘ ನಿ., ----------------

ದಿನಾಂಕ: – –2013 ರಂದು ನಡೆಯಲಿರುವ ---------------- ಸಹಕಾರ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಭಾಗವಹಿಸಲು/ ಮತದಾನ ಮಾಡಲು / ಅಗತ್ಯ ಕಂಡು ಬಂದಲ್ಲಿ ಸ್ಪರ್ಧಿಸಲು / ನಾಮಪತ್ರವನ್ನು ಪಡೆಯಲು ಸಂಘದ ಪರವಾಗಿ ಪ್ರತಿನಿಧಿ / ಡೆಲಿಗೇಟನ್ನು ನಿಯೋಜಿಸಿ ಕಳುಹಿಸಿರುವ ಬಗ್ಗೆ ವಿವರಗಳು.

## ನಮೂನೆ

| | | |
|---|---|---|
| 1 | ಸಂಘದ ಪರವಾಗಿ ನಿಯೋಜಿಸಿರುವ ಪ್ರತಿನಿಧಿಯ / ಡೆಲಿಗೇಟ್ ಹೆಸರು / ಭಾವಚಿತ್ರ<br>(ಸದಸ್ಯ ಸಂಘದ ಮೊಹರನ್ನು ಭಾವಚಿತ್ರದ ಭಾಗದ ಮೇಲೆ ಹಾಕಿರಬೇಕು) | ಹೆಸರು: ____________ |
| 2 | ಪ್ರತಿನಿಧಿಯ ಹುದ್ದೆ/ವಿಳಾಸ | ಶ್ರೀ ____________<br>ನಿರ್ದೇಶಕರು,<br>____________ ಸಹಕಾರ ಸಂಘ ನಿ.,<br>____________ |
| 3 | ಪ್ರತಿನಿಧಿಯ ಸಹಕಾರ ಸಂಘಗಳ ಅಧಿನಿಯಮ 1956ರ ಪ್ರಕರಣ 29 ಸಿ ಮೇರೆಗೆ ಯಾವುದೇ ಅನರ್ಹತೆ ಹೊಂದಿರುತ್ತಾರೆಯೇ? | |
| 4 | ಪ್ರತಿನಿಧಿಯು ಪ್ರತಿನಿಧಿಸುತ್ತಿರುವ ಸಂಘದಲ್ಲಿ ಸದಸ್ಯತ್ವ / ಶೇರು ಖಾತೆ ಸಂಖ್ಯೆ | |
| 5 | ಸದಸ್ಯ ಸಂಘವು ಮಾಧ್ಯಮಿಕ / ಫೆಡರಲ್ ಸಂಘದಲ್ಲಿ ಸದಸ್ಯತ್ವ ಹೊಂದಿರುವ ಬಗ್ಗೆ ವಿವರಗಳು ಸದಸ್ಯತ್ವ / ಶೇರು ಖಾತೆ ಸಂಖ್ಯೆ | |
| 6 | ಪ್ರತಿನಿಧಿ / ಡೆಲಿಗೇಟ್ ಆಗಿ ನಿಯೋಜಿಸುವ ವ್ಯಕ್ತಿಯ ಮಾದರಿ ಸಹಿ / ಹೆಬ್ಬೆಟ್ಟಿನ ಗುರ್ತು | 1)<br>2)<br>3) |
| 7 | ಪ್ರತಿನಿಧಿಯಾಗಿ ಕಳುಹಿಸುತ್ತಿರುವ ಸದಸ್ಯ ಸಂಘದ ಆಡಳಿತ ಮಂಡಳಿ ನಿರ್ಣಯದ ದೃಢೀಕೃತ ಪ್ರತಿಯನ್ನು ಲಗತ್ತಿಸತಕ್ಕದ್ದು | |
| 8 | ಸದಸ್ಯ ಸಂಘದ ಪರವಾಗಿ ಪ್ರತಿನಿಧಿಸಲು / ಡೆಲಿಗೇಟ್ ಆಗಿ ಚುನಾಯಿಸಿರುವ / ಆಯ್ಕೆ ಮಾಡಿರುವ ವ್ಯಕ್ತಿ ಮಾಧ್ಯಮಿಕ / ಫೆಡರಲ್ ಸಂಘದ ಆಡಳಿತ ಮಂಡಳಿ ಚುನಾವಣೆಯಲ್ಲಿ ಮತದಾನ ಮಾಡಲು / ಅಗತ್ಯವಿದ್ದಲ್ಲಿ ಸ್ಪರ್ಧಿಸಲು ನಾಮಿನೇಶನ್ ಅರ್ಜಿ ವಾಪಸ್ಸು ಪಡೆಯಲು ಅಧಿಕಾರ ನೀಡಲಾಗಿದೆಯೇ? | ಆಡಳಿತ ಮಂಡಳಿ ಸಭಾ ದಿನಾಂಕ____________<br>ವಿಷಯ / ನಿರ್ಣಯದ ಸಂಖ್ಯೆ____________ |

| | | |
|---|---|---|
| 9 | ಮಾಧ್ಯಮಿಕ / ಫೆಡರಲ್ ಸಂಘಗಳಿಗೆ ಪ್ರತಿನಿಧಿ / ಡೆಲಿಗೇಟ್ ಆಗಿ ಕಳುಹಿಸುವಾಗ ಕೆಳಕಂಡ ವಿವರ ಸಲ್ಲಿಸುವುದು.<br>1) ಸದಸ್ಯ ಸಂಘವು ಪ್ರತಿನಿಧಿ ಡೆಲಿಗೇಟ್ ಕಳುಹಿಸುವ ಸಂಬಂಧ ಕರೆದ ಮಂಡಳಿ ಸಭಾ ಸೂಚನೆ ಪತ್ರದ ಪ್ರತಿ<br>2) ಆಡಳಿತ ಮಂಡಳಿ ಠರಾವು ಪ್ರತಿ | |

## ದೃಡೀಕರಣ

ಮೇಲ್ಕಂಡ ಮಾಹಿತಿಯನ್ನು ಸಂಘದ ದಾಖಲೆಗಳನ್ನು ಪರಿಶೀಲಿಸಿ ಸಿದ್ಧಪಡಿಸಿದ ನೈಜ ಮಾಹಿತಿಯಾಗಿರುತ್ತದೆ ಎಂದು ದೃಡೀಕರಿಸುತ್ತೇನೆ. ಪ್ರತಿನಿಧಿ/ಡೆಲಿಗೇಟ್ ರವರ ಭಾವಚಿತ್ರ /ಮಾದರಿ ಸಹಿಯನ್ನು ದೃಢೀಕರಿಸುತ್ತೇನೆ.

ಮುಖ್ಯಕಾರ್ಯನಿರ್ವಾಹಕರು

________________ ಸಹಕಾರ ಸಂಘ ನಿ.,

ಸಂಘದ ಮುಖ್ಯ ನಿರ್ವಾಹಕರ ಮೊಹರು

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಪ.ಚು/27/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ:27.09.2013

## ಸುತ್ತೋಲೆ

**ವಿಷಯ:-** ಸಹಕಾರ ಸಂಘಗಳ ಪದಾಧಿಕಾರಿಗಳ ಚುನಾವಣೆ ನಡೆಸುವ ಕುರಿತು.

****

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 39ಎ (1) ರೀತ್ಯಾ ಪ್ರತಿಯೊಂದು ಸಹಕಾರ ಸಂಘದ ಆಡಳಿತ ಮಂಡಲಿಯ ಸದಸ್ಯರ ಸಾಮಾನ್ಯ ಚುನಾವಣೆಯನ್ನು ಮತ್ತು ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದಾಗಿದೆ ಪ್ರಸ್ತುತ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳ ಆಡಳಿತ ಮಂಡಳಿ ಸಾಮಾನ್ಯ ಚುನಾವಣೆ ಪ್ರಕ್ರಿಯೆಯು ಪೂರ್ಣಗೊಂಡಿದ್ದು, ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂದ ಆಯೋಗವು ಅಗತ್ಯ ಕ್ರಮ ಕೈಗೊಂಡಿರುವ ವಿಷಯ ನಿಮಗೆ ತಿಳಿದಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 29ಎಫ್(4) ರಂತೆ ಸಹಕಾರ ಸಂಘದ ಪದಾಧಿಕಾರಿಗಳ ಪದಾವಧಿಯು ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು ಮತ್ತು ಅದು ಮಂಡಲಿಯ ಅವಧಿಯ ಜೊತೆಗೆ ಅಂತ್ಯಗೊಳ್ಳತಕ್ಕದ್ದಾಗಿದೆ. ಸಹಕಾರ ಸಂಘಗಳ ಸಾಮಾನ್ಯ ಚುನಾವಣೆಯ ತರುವಾಯ ಮಂಡಲಿಯು ರಚನೆಯಾದ ಅಥವಾ ರಚನೆಯಾಗಿದೆ ಎಂದು ಭಾವಿಸಲಾದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ, ಅಧ್ಯಕ್ಷನ ಅಥವಾ ಸಭಾಪತಿಯ ಪದಕ್ಕೆ, ಉಪಾಧ್ಯಕ್ಷನ ಅಥವಾ ಉಪಸಭಾಪತಿಯ ಪದಕ್ಕೆ ಮತ್ತು ಸಹಕಾರ ಸಂಘದ ಉಪವಿಧಿಗಳ ಪ್ರಕಾರ ಚುನಾಯಿಸುವುದು ಅಗತ್ಯವಾಗಿರುವಂಥ ಇತರ ಪದಾಧಿಕಾರಿಗಳ ಪದಕ್ಕೆ ಚುನಾವಣೆಗಳನ್ನು ನಡೆಸತಕ್ಕದ್ದಾಗಿದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2012 ಜಾರಿಗೆ ಬರುವ ಪೂರ್ವದಲ್ಲಿ ಈ ಹಿಂದೆ ಇದ್ದ ಅಧಿನಿಯಮಗಳ ಅವಕಾಶಗಳಂತೆ ಸಹಕಾರ ಸಂಘಗಳ ಪದಾಧಿಕಾರಿಗಳ ಮೊದಲ 2.1/2 ವರ್ಷ ಮುಗಿದ ಪ್ರಕರಣಗಳಲ್ಲಿ, 2ನೇ ಎರಡೂವರೆ ವರ್ಷದ ಅವಧಿಗೆ ಪದಾಧಿಕಾರಿಗಳ ಚುನಾವಣೆ ನಡೆಸಲು ಆಯೋಗ ಅವಧಿ ನಿಗದಿಪಡಿಸಿದ್ದು ದಿನಾಂಕ:15.09.2013 ರಿಂದ 30.09.2013 ರ ಒಳಗೆ ನಡೆಸಲು ನಿರ್ದೇಶಿಸಲಾಗಿದೆ. ಅಧಿನಿಯಮ ಪ್ರಕರಣ 29 ಜಿ (4-ಸಿ) ರೀತ್ಯಾ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನಿಗೆ ಪದಾಧಿಕಾರಿಗಳ ಚುನಾವಣೆಯಲ್ಲಿ ಮತದಾನದ ಹಕ್ಕು ಇರುವುದಿಲ್ಲ. ಅಧಿನಿಯಮ ಪ್ರಕರಣ 28ಎ(4-ಎ) ರೀತ್ಯಾ ಯಾವುದೇ ಸಹಕಾರ ಸಂಘದ ಮಂಡಲಿಯು, ಬ್ಯಾಂಕಿಂಗ್, ವ್ಯವಸ್ಥಾಪನೆ, ಹಣಕಾಸು ನಿರ್ವಹಣೆಯಲ್ಲಿ ಅನುಭವವಿರುವ ಅಥವಾ ಆ ಸಂಘವು ಕೈಗೊಂಡ ಉದ್ದೇಶಗಳಿಗೆ ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಇತರ ಕ್ಷೇತ್ರದಲ್ಲಿ ಪರಿಣತಿಯನ್ನು ಹೊಂದಿರುವ ವ್ಯಕ್ತಿಗಳನ್ನು, ಮಂಡಲಿಯ ಸದಸ್ಯರನ್ನಾಗಿ ಸಹಮತದಿಂದ (Co-option) ಸೇರಿಸಿಕೊಳ್ಳಬಹುದು. ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರ ಸಂಖ್ಯೆಯು 28ಎ(2) ರಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಠ ಸಂಖ್ಯೆಗೆ ಹೆಚ್ಚುವರಿಯಾಗಿ ಇಬ್ಬರನ್ನು ಮೀರತಕ್ಕದ್ದಲ್ಲ. ಮತ್ತು ಪರಂತು, ಹಾಗೆ ಸಹಮತದಿಂದ ಸೇರಿಸಿಕೊಂಡ ಸದಸ್ಯರು, ಅಂಥ ಸದಸ್ಯರ ಅಧಿಕಾರವುಳ್ಳವರಾಗಿ ಸಹಕಾರ ಸಂಘದ ಯಾವುದೇ ಚುನಾವಣೆಯಲ್ಲಿ ಮತದಾನ ಮಾಡುವ ಹಕ್ಕನ್ನು ಹೊಂದಿರತಕ್ಕದ್ದಲ್ಲ ಅಥವಾ ಮಂಡಲಿಯ ಪದಾಧಿಕಾರಿಗಳಾಗಿ ಚುನಾಯಿತರಾಗಲು ಅರ್ಹರಾಗಿರತಕ್ಕದ್ದಲ್ಲ. ಅಲ್ಲದೇ ಪರಂತು ಮೂರಕ್ಕೆ ಮೀರಿದ ಕಾರ್ಯಾನುಗುಣ ನಿರ್ದೇಶಕರು ಉಪವಿಧಿಗಳಿಗನುಸಾರವಾಗಿ ಮಂಡಲಿಯ ಸದಸ್ಯರಾಗಿರತಕ್ಕದ್ದು ಮತ್ತು ಅಂಥ ಸದಸ್ಯರುಗಳನ್ನು (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ನಿರ್ದೇಶಕರುಗಳ ಒಟ್ಟು ಸಂಖ್ಯೆಯ ಉದ್ದೇಶಕ್ಕಾಗಿ ಹೊರತುಪಡಿಸತಕ್ಕದ್ದು, ಅಲ್ಲದೇ ಪರಂತು, ವೃತ್ತಿಪರ ನಿರ್ದೇಶಕರು (Professional directors) ಮತ್ತು ಕಾರ್ಯಾನುಗುಣ

ನಿರ್ದೇಶಕರು (Functional directors), ಮಂಡಲಿಯ ಸಭೆಗಳನ್ನು ನಡೆಸಲು ಕೋರಂನ ಭಾಗವಾಗಿರತಕ್ಕದ್ದಲ್ಲ, ಎಂದಿರುತ್ತದೆ. ಅಧಿನಿಯಮ ಪ್ರಕರಣ 28ಎ (4ಬಿ) ದ ಅವಕಾಶದಂತೆ ರಾಜ್ಯ ಸರ್ಕಾರವು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮಂಡಳಿಯನ್ನು ಹೊರತುಪಡಿಸಿ ಉಳಿದ ನೆರವು ಪಡೆದ ಪ್ರತಿಯೊಂದು ಸಹಕಾರ ಸಂಘದ ಮಂಡಳಿಗೆ ಒಬ್ಬ ವ್ಯಕ್ತಿಯನ್ನು ತನ್ನ ಪ್ರತಿನಿಧಿಯನ್ನಾಗಿ ನಾಮ ನಿರ್ದೇಶಿಸಬಹುದು. ಪರಂತು, ಸಹಕಾರ ಸಂಘದ ಮಂಡಳಿಯ ಸದಸ್ಯನಾಗಿ ನಾಮ ನಿರ್ದೇಶಿತ ವ್ಯಕ್ತಿಯು, ರಾಜ್ಯ ಸರ್ಕಾರದ ಇಚ್ಚೆಗೊಳಪಟ್ಟು ಅಂಥ ಸದಸ್ಯನಾಗಿ ಪದಧಾರಣ ಮಾಡತಕ್ಕದ್ದು.

ಅಧಿನಿಯಮ ಪ್ರಕರಣ 28ಎ(6) ರ ರೀತ್ಯಾ ಮಂಡಲಿಯ ಸದಸ್ಯರುಗಳು ತಮ್ಮೊಳಗೆ ಸಂಘದ ಪದಾಧಿಕಾರಿಗಳನ್ನು ಚುನಾಯಿಸಿಕೊಳ್ಳತಕ್ಕದ್ದು, ಪದಾಧಿಕಾರಿಗಳ ಚುನಾವಣೆಯು ರಹಸ್ಯ ಮತದಾನದ ಮೂಲಕ ನಡೆಯತಕ್ಕದ್ದಾಗಿದೆ.

ಅಧಿನಿಯಮ ಪ್ರಕರಣ 29 ಎ(2) ರೀತ್ಯಾ ಅಧಿನಿಯಮದಲ್ಲಿ, ನಿಯಮಗಳಲ್ಲಿ ಮತ್ತು ಸಂಘದ ಉಪನಿಯಮಗಳಲ್ಲಿ ಏನೇ ಇದ್ದರೂ ಚುನಾವಣೆ ನಂತರ ಮಂಡಲಿ ಸದಸ್ಯರಾಗಿ ಕಾರ್ಯನಿರ್ವಹಿಸಲು ಮಂಡಲಿಯ ಚುನಾಯಿತ ಸದಸ್ಯರ ಪೈಕಿ ಬಹುಮತದ ಸದಸ್ಯರು ಇರುವ ಪಕ್ಷದಲ್ಲಿ ಮಂಡಲಿಯು ವಿದ್ಯುಕ್ತವಾಗಿ ರಚಿತವಾಗಿದೆ ಎಂದು ಭಾವಿಸತಕ್ಕದ್ದು ಎಂದಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 (ಸಂಕ್ಷಿಪ್ತವಾಗಿ ನಿಯಮ)ರ ನಿಯಮ 14ಎಜಿ ಯಲ್ಲಿ ಪದಾಧಿಕಾರಿಗಳ ಚುನಾವಣೆ ಕುರಿತಂತೆ ಕ್ರಮ ವಿವರಿಸಲಾಗಿದೆ. ಅದರಂತೆ ರಿಟರ್ನಿಂಗ್ ಆಫೀಸರ್ ಕ್ರಮ ಕೈಗೊಂಡು ಪದಾಧಿಕಾರಿಗಳ ಚುನಾವಣೆ ನಡೆಸತಕ್ಕದ್ದಾಗಿದೆ. ನಿಯಮ 14 ಎಜಿ (4) ರಲ್ಲಿ ತಿಳಿಸಿರುವಂತೆ ಸಹಕಾರ ಸಂಘದ ಪದಾಧಿಕಾರಿಗಳ ಚುನಾವಣೆ ನಾಮಪತ್ರದ ನಮೂನೆ XXIV ಆಗಿರುತ್ತದೆ. ನಿಯಮ 14ಎ.ಹೆಚ್ ರೀತ್ಯಾ ಸಹಕಾರ ಸಂಘದ ನೋಂದಣಿಯಾದ ನಂತರ ಪ್ರಥಮ ಆಡಳಿತ ಮಂಡಲಿಯ ಪದಾಧಿಕಾರಿಗಳ ಚುನಾವಣೆಗೆ ನಿಯಮ 14ಎಜಿಯ ಉಪಬಂಧಗಳು, ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದಾಗಿದೆ.

ನಿಯಮ 14 ಎ.ಕೆ (4) ರೀತ್ಯಾ ಉಪವಿಧಿಗಳಲ್ಲಿ ನಮೂದಿಸಿರುವಂತೆ ಆಡಳಿತ ಮಂಡಲಿಯ ಬಲದ ಶೇಕಾಡ 50 ರ ನಂತರದ ಪೂರ್ಣ ಸಂಖ್ಯೆಯು ಆಡಳಿತ ಮಂಡಲಿಯ ಸಭೆಯ ಕೋರಂ ಆಗಿರತಕ್ಕದ್ದು. ಯಾವುದೇ ಆಡಳಿತ ಮಂಡಲಿಯ ಸಭೆಯಲ್ಲಿ ಯಾವುದೇ ಕಲಾಪಗಳ ನಿರ್ವಹಣೆಯ ಸಮಯದಲ್ಲಿ ಕೋರಂ ಇಲ್ಲದಿದ್ದ ಪಕ್ಷದಲ್ಲಿ ಅಂಥ ಕಲಾಪವನ್ನು ನಿರ್ವಹಿಸತಕ್ಕದ್ದಲ್ಲ.

ಸಹಕಾರ ಸಂಘದ ಆಡಳಿತ ಮಂಡಲಿ ಸಭೆಯ ಕೋರಂ ಕುರಿತಂತೆ ಸಹಕಾರ ಸಂಘಗಳ ಅಧಿನಿಯಮ, ನಿಯಮ ಮತ್ತು ಸಂಘದ ಉಪವಿಧಿಗಳಲ್ಲಿರುವ ಅವಕಾಶಗಳ ಕುರಿತು ಗಮನಿಸತಕ್ಕದ್ದಾಗಿದೆ.

ಸಹಕಾರ ಸಂಘಗಳ ಅಧಿನಿಯಮ / ನಿಯಮಗಳು ಹಾಗೂ ಸಂಘದ ಉಪವಿಧಿಗಳ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ನಿರ್ದೇಶಿಸಲಾಗಿದೆ.

(ಎನ್.ಸಿ.ಮುನಿಯಪ್ಪ)
ಆಯುಕ್ತರು

ಗೆ,

1. ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು,
2. ಜಿಲ್ಲಾಧಿಕಾರಿಗಳು____________ ಜಿಲ್ಲೆ,
3. ಸಹಕಾರ ಸಂಘಗಳ ಸಹಾಯಕ ನಿಬಂಧಕರು,
4. ಸಹಕಾರ ಸಂಘಗಳ ಜಂಟಿ ನಿಬಂಧಕರು__________ ಪ್ರಾಂತ್ಯ.
5. ಸುತ್ತೋಲೆ ಕಡತ
6. ರಕ್ಷಾ ಕಡತ.

**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಚುನಾವಣೆ/34/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 11-11-2013

**ಸುತ್ತೋಲೆ**

**ವಿಷಯ:-** ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿ/ಪದಾಧಿಕಾರಿಗಳ ಚುನಾವಣೆಗೆ – ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿಗಳ ಮುಖ್ಯಕಾರ್ಯನಿರ್ವಾಹಕರುಗಳು ಕಾನೂನಿಗನುಗುಣವಾಗಿ ಕೈಗೊಳ್ಳಬಹುದಾದ ಅಗತ್ಯ ಕ್ರಮವಿಡುವ ಅಂಶಗಳನ್ನು ಆಡಳಿತ ಮಂಡಳಿ ಅವಗಾಹನೆಗೆ ಮಂಡಿಸುವ ಕುರಿತು.

***

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮಗಳು, 2012 ರ ಪ್ರಕರಣ 39ಎ(1) ಮತ್ತು ಪ್ರಕರಣ 39ಎಎ(2) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 26(2) ಮತ್ತು 26ಎ ಪ್ರಕಾರ, ಸಹಕಾರ ಸಂಘಗಳ/ಸಹಕಾರಿಗಳ ಮಂಡಳಿಗಳ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದಾಗಿದೆ. ಮಂಡಲಿಯ ಚುನಾವಣೆಗಳನ್ನು ನಡೆಸುವಲ್ಲಿ ಸಂಘದ ಆಡಳಿತ ಮಂಡಲಿಯವರು ಮತ್ತು ಮುಖ್ಯ ಕಾರ್ಯನಿರ್ವಾಹಕರು ಸಹ ಅಧಿನಿಯಮ/ನಿಯಮಗಳು/ಉಪವಿಧಿಗಳ ಅವಕಾಶದಂತೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕಾದುದು ಅವರ ಜವಾಬ್ದಾರಿ ಆಗಿರುತ್ತದೆ. ಈ ಸಂಬಂಧ ಕಾನೂನಿನ ಅಂಶಗಳನ್ನು ಗಮನಿಸಿ ಕೆಳಕಂಡ ವಿಷಯಗಳ ಕುರಿತು ಸಂಬಂಧಿಸಿದ ಸಂಘಗಳ ಆಡಳಿತ ಮಂಡಳಿಗಳು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕಾಗಿರುತ್ತದೆ.

1) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 (ಸಂಕ್ಷಿಪ್ತವಾಗಿ ಅಧಿನಿಯಮ) ಪ್ರಕರಣ 28ಬಿ(1) ರೀತ್ಯಾ "ಹೊಸದಾಗಿ ಚುನಾಯಿತವಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣ ಮಾಡುವುದನ್ನು ಖಾತ್ರಿಗೊಳಿಸುವ ಹಾಗೆ ಮಂಡಲಿಯ ಸದಸ್ಯರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾಗುವ ನಿಕಟಪೂರ್ವದಲ್ಲಿ ನಿಯಮಾನುಸಾರ ನಡೆಸತಕ್ಕದ್ದು."

2) ಅಧಿನಿಯಮ ಪ್ರಕರಣ 28ಬಿ(2) ರಂತೆ ಪ್ರಕರಣ 39ಎ ನಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ಚುನಾವಣೆಗಾಗಿ ವ್ಯವಸ್ಥೆಗಳನ್ನು ಮಾಡಲು ವಿಫಲರಾದ ಸಮಿತಿಯ ಸದಸ್ಯರು ಹಾಗೆ ನಿರ್ದಿಷ್ಟಪಡಿಸಿದ ಕಾಲಮಿತಿ ಅಂತ್ಯಗೊಂಡ ದಿನದಂದು ತಮ್ಮ ಸ್ಥಾನವನ್ನು ತೆರವುಗೊಳಿಸಿರುವುದಾಗಿ ಭಾವಿಸತಕ್ಕದ್ದು

ಮತ್ತು ಅಂತಹ ಸದಸ್ಯರು ತಮ್ಮ ಪದಾವಧಿಯು ಅಂತ್ಯಗೊಂಡ ದಿನಾಂಕದಿಂದ ಐದು ವರ್ಷಗಳ ಅವಧಿವರೆಗೆ ಸಮಿತಿ ಸದಸ್ಯರಾಗಿ ಚುನಾಯಿತರಾಗಲು ಅರ್ಹತೆ ಕಳೆದುಕೊಳ್ಳುತ್ತಾರೆ.

3) ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 26 ಮತ್ತು 26ಎ ದಲ್ಲಿ ಮಂಡಲಿಯ ಚುನಾವಣೆ ಬಗ್ಗೆ ಪ್ರಸ್ತಾಪಿಸಲಾಗಿದೆ. ಈ ಪ್ರಕರಣಗಳನ್ನು ಅವಗಾಹಿಸಿ ಅದರಂತೆ ಕಾರ್ಯನಿರ್ವಹಿಸಬೇಕಾಗಿರುತ್ತದೆ.

4) ಅಧಿನಿಯಮ ಪ್ರಕರಣ 29ಸಿ(3) ರಂತೆ ಸಹಕಾರ ಸಂಘದ ಮಂಡಳಿಯು, ಸಹಕಾರ ಚುನಾವಣಾ ಆಯೋಗವು ಪ್ರಕರಣ 39ಎ ಮತ್ತು ಪ್ರಕರಣ 29ಎಫ್‌ಗಳನ್ವಯ ಚುನಾವಣೆ ನಡೆಸಲು, ನೆರವು ನೀಡಲು ಒಂದು ವೇಳೆ ವಿಫಲವಾದಲ್ಲಿ, ತಪ್ಪೆಸಗಿದ ಮಂಡಳಿಯ ಪ್ರತಿ ಸದಸ್ಯರು, ಸಂಘದ ಮಂಡಳಿಯ ಸದಸ್ಯರಾಗಿ 5 ವರ್ಷಗಳ ಅವಧಿವರೆಗೆ ಚುನಾಯಿತರಾಗಲು ಅಥವಾ ನೇಮಕವಾಗಲು ಅಥವಾ ಮುಂದುವರೆಯಲು ಅನರ್ಹರಾಗುವರು.

5) ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 25 ರಲ್ಲಿ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಇರುವ ಅನರ್ಹತೆ ಬಗ್ಗೆ ಪ್ರಸ್ತಾಪಿಸಲಾಗಿದ್ದು, ಪ್ರಕರಣ 25(2)( a)ದಲ್ಲಿ ಸಹ ಸಹಕಾರಿಯ ಮಂಡಳಿಗೆ ನಿಗದಿಪಡಿಸಿದ ಅವಧಿ ಮುಗಿಯುವ ಮುನ್ನ ಸಹಕಾರ ಚುನಾವಣಾ ಆಯೋಗವು ಚುನಾವಣೆಯನ್ನು ನಡೆಸಲು ಅಗತ್ಯ ನೆರವು ನೀಡದಿರುವ ಮಂಡಳಿಯ ಎಲ್ಲಾ ನಿರ್ದೇಶಕರು ಚುನಾಯಿತರಾಗಲು ಅನರ್ಹತೆ ಹೊಂದುವ ದಿನಾಂಕದಿಂದ 5 ವರ್ಷಗಳ ಅವಧಿಗೆ ಅನರ್ಹತೆಗೆ ಗುರಿಯಾಗುವರು

6) ಅಧಿನಿಯಮ ಪ್ರಕರಣ 39ಎಎ(15) ರಂತೆ–

ಪ್ರತಿಯೊಂದು ಸಹಕಾರ ಸಂಘದ ಮಂಡಳಿಯು,–

(ಎ) ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಠ ಆರು ತಿಂಗಳಿಗೆ ಮುಂಚೆ ಸಹಕಾರ ಚುನಾವಣಾ ಆಯೋಗಕ್ಕೆ ತಿಳಿಸಲು ಜವಾಬ್ದಾರರಾಗಿರುತ್ತಾರೆ.

(ಬಿ) ಸಹಕಾರ ಚುನಾವಣಾ ಆಯೋಗವು ನಿಯಮಿಸಬಹುದಾದಂಥ ಕ್ಯಾಲೆಂಡರ್ ಪ್ರಕಾರ ಆಯೋಗವು ಅಗತ್ಯಪಡಿಸಬಹುದಾದಂಥ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು ಒದಗಿಸಲು ಜವಾಬ್ದಾರರಾಗಿರುತ್ತಾರೆ.

(ಸಿ) ಸಹಕಾರ ಚುನಾವಣಾ ಆಯೋಗವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಅವಶ್ಯಕವಾದ ಎಲ್ಲಾ ನೆರವು ಮತ್ತು ಸಹಕಾರವನ್ನು ನೀಡಲು ಜವಾಬ್ದಾರರಾಗಿರುತ್ತಾರೆ.

7) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 109 ರಲ್ಲಿ ಅಪರಾಧಗಳು ಮತ್ತು ದಂಡನೆಗಳ ಕುರಿತು ವಿವರಿಸಲಾಗಿದೆ. ಅಧಿನಿಯಮ ಪ್ರಕರಣ 109(20) ರಂತೆ ಪ್ರಕರಣ 39ಎಎ ಪ್ರಕರಣದಡಿಯಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಚುನಾವಣೆಗಳನ್ನು ನಡೆಸಲು ಅವಶ್ಯಕವಾದ ಪುಸ್ತಕಗಳನ್ನು, ದಾಖಲೆಗಳನ್ನು ಮತ್ತು ಮಾಹಿತಿಯನ್ನು ಸಹಕಾರ ಚುನಾವಣಾ ಆಯೋಗಕ್ಕೆ ಸಕಾಲದಲ್ಲಿ ಒದಗಿಸಿ ನೆರವು ನೀಡಲು ತಪ್ಪಿದ ಆಡಳಿತ ಮಂಡಳಿಯ ಪ್ರತಿಯೊಬ್ಬ

ಸದಸ್ಯನು ಮತ್ತು ಮುಖ್ಯಕಾರ್ಯನಿರ್ವಾಹಕನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿಸಬಹುದಾಗಿರುತ್ತದೆ.

ಅಲ್ಲದೆ ಪ್ರಕರಣ 109(21) ರಂತೆ ಯಾವೊಬ್ಬ ವ್ಯಕ್ತಿಯು ಮಂಡಳಿಯ ಸದಸ್ಯರ ಅಥವಾ ಪದಾಧಿಕಾರಿಗಳ ಚುನಾವಣೆಗೆ ಮೊದಲು, ಚುನಾವಣೆ ನಡೆಯುವಾಗ ಅಥವಾ ಚುನಾವಣೆಯ ತರುವಾಯದಲ್ಲಿ 39ಸಿ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಭ್ರಷ್ಟ ಆಚರಣೆಯನ್ನು ಅಳವಡಿಸಿದರೆ ಅಥವಾ 39ಕೆ ಪ್ರಕರಣದ ಅಡಿಯಲ್ಲಿನ ಯಾವುದೇ ಚುನಾವಣೆ ಅಪರಾಧಗಳನ್ನು ಎಸಗಿದಲ್ಲಿ, ಅವನು 6 ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿಸಬಹುದಾಗಿರುತ್ತದೆ.

8) ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಪ್ರಕರಣ 68 ರಲ್ಲಿ ಅಪರಾಧಗಳು ಮತ್ತು ದಂಡನೆಗಳ ಬಗ್ಗೆ ಪ್ರಸ್ತಾಪಿಸಲಾಗಿದೆ. ಪ್ರಕರಣ 68(7) ರೀತ್ಯಾ, ಯಾವುದೇ ಸಹಕಾರಿಯ ಅಥವಾ ಫೆಡರಲ್ ಸಹಕಾರಿಯ ಮಂಡಲಿ ಮತ್ತು ಮುಖ್ಯಕಾರ್ಯನಿರ್ವಾಹಕರು, ಸಹಕಾರ ಚುನಾವಣಾ ಆಯೋಗಕ್ಕೆ ಚುನಾವಣೆ ನಡೆಸುವ ಸಂಬಂಧ ಅಧಿನಿಯಮ ಪ್ರಕರಣ 26 ಅಥವಾ ಪ್ರಕರಣ 58 ರ ಮೇರೆಗೆ ಅಗತ್ಯವಾದ ಪುಸ್ತಕಗಳು, ದಾಖಲೆಗಳು ಮತ್ತು ಮಾಹಿತಿಯನ್ನು ಸಲ್ಲಿಸಲು ವಿಫಲವಾದಲ್ಲಿ, ಅಂಥ ಸಹಕಾರಿಯ ಅಥವಾ ಫೆಡರಲ್ ಸಹಕಾರಿಯ ಪ್ರತಿ ನಿರ್ದೇಶಕ ಮತ್ತು ಮುಖ್ಯಕಾರ್ಯನಿರ್ವಾಹಕನಿಗೆ ಹತ್ತು ಸಾವಿರ ರೂಪಾಯಿಗಳ ಜುಲ್ಮಾನೆ ಅಥವಾ 6 ತಿಂಗಳ ಕಾರಾವಾಸ ಅಥವಾ ಅವೆರಡರಿಂದಲೂ ದಂಡಿಸಬಹುದಾಗಿರುತ್ತದೆ.

9) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 13ಎ ರೀತ್ಯಾ ಸಹಕಾರ ಸಂಘದ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ರ ನಿಯಮ 4 ರಂತೆ ಸಹಕಾರಿಯ ಮುಖ್ಯಕಾರ್ಯನಿರ್ವಾಹಕನು ಸಂಘದ ಸದಸ್ಯರಿಗೆ ಭಾವಚಿತ್ರವುಳ್ಳ ಗುರುತಿನ ಕಾರ್ಡ್ ನೀಡುವ ಜವಾಬ್ದಾರಿ ಹೊಂದಿರುತ್ತಾನೆ. ಸಂಘಗಳ/ಸಹಕಾರಿಗಳ ಎಲ್ಲಾ ಸದಸ್ಯರುಗಳಿಗೆ ಗುರುತಿನ ಕಾರ್ಡ್ ವಿತರಿಸಲು ಬಾಕಿ ಇದ್ದಲ್ಲಿ ಕೂಡಲೇ ವಿತರಿಸುವ ಬಗ್ಗೆ ಅಗತ್ಯ ಕ್ರಮವಿಡಲು ಜವಾಬ್ದಾರರಾಗಿರುತ್ತಾರೆ.

10) ಯಾವುದೇ ಸಹಕಾರ ಸಂಘದ ಮಂಡಲಿಯೂ ಅಧಿನಿಯಮ ಪ್ರಕರಣ 30(2)(v) ರಲ್ಲಿ ತಿಳಿಸಿರುವಂತೆ –

"ಗೊತ್ತುಪಡಿಸಿದ ಕಾಲದೊಳಗಾಗಿ ಮಂಡಳಿಗೆ ಚುನಾವಣೆಗಳನ್ನು ನಡೆಸಲು ಚುನಾವಣಾ ಆಯೋಗವು ನಿರೂಪಿಸಿರುವ ಕ್ಯಾಲೆಂಡರಿನ ಪ್ರಕಾರ ಚುನಾವಣಾ ಆಯೋಗಕ್ಕೆ ಪುಸ್ತಕಗಳನ್ನು ಮತ್ತು ದಾಖಲೆಗಳನ್ನು, ಅವಶ್ಯ ಮಾಹಿತಿಯನ್ನು ಮತ್ತು ನೆರವನ್ನು ಒದಗಿಸಲು ವಿಫಲವಾಗಿದೆ ಎಂದು ಮತ್ತು ತತ್ಪರಿಣಾಮವಾಗಿ ಅಥವಾ ಅನ್ಯಥಾ ಚುನಾವಣಾ ಆಯೋಗವು ಗೊತ್ತುಪಡಿಸಿದ ಕಾಲದೊಳಗೆ ಮಂಡಲಿ ಚುನಾವಣೆಗಳನ್ನು ನಡೆಸಲು ವಿಫಲವಾಗಿದೆ ಎಂದು ರಿಜಿಸ್ಟ್ರಾರನು ಅಭಿಪ್ರಾಯಪಟ್ಟರೆ, ಈ ರೀತಿಯ ಲೋಪಕ್ಕೆ ಸಂಘದ ಮಂಡಳಿಯು ಗುರಿಯಾದರೆ, ಸಂಘದ ಆಡಳಿತ ಮಂಡಳಿಯನ್ನು ರದ್ದುಗೊಳಿಸಲು ಈ ಲೋಪವು ಒಂದು ಆರೋಪವಾಗುತ್ತದೆ."

11) ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು, 2013 ರ ನಿಯಮ 13ಡಿ(5) ರೀತ್ಯಾ ಸಂಘದ ಮುಖ್ಯಕಾರ್ಯನಿರ್ವಾಹಕನು

(i) ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟುಗಳ ಕರಡು ಪಟ್ಟಿಯನ್ನು

(ii) ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗದಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಯನ್ನು

(iii) ಸುಸ್ತಿದಾರರ ಕರಡು ಪಟ್ಟಿಯನ್ನು

(iv) ಅನರ್ಹತೆಗೆ ಕಾರಣಗಳನ್ನು ಸದಸ್ಯವಾರು ತೋರಿಸಿ, ಸಾಮಾನ್ಯ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರುವ, ಇತರ ಸದಸ್ಯರ ಅಥವಾ ಪ್ರತಿನಿಧಿಗಳ ಮತ್ತು ಡೆಲಿಗೇಟ್‌ಗಳ ಕರಡುಪಟ್ಟಿಯನ್ನು

ಈ ಎಲ್ಲಾ ಪಟ್ಟಿಗಳನ್ನು ಸಂಬಂಧಪಟ್ಟ ಪುಸ್ತಕಗಳ, ದಾಖಲೆಗಳ ಮತ್ತು ದಸ್ತಾವೇಜುಗಳ ಸಹಿತ ಹಾಗೂ ಜಿಲ್ಲಾ ಚುನಾವಣಾಧಿಕಾರಿಯು ಅಗತ್ಯಪಡಿಸುವ ಇತರ ಮಾಹಿತಿಯನ್ನು ಚುನಾವಣಾ ದಿನಾಂಕದ ಪೂರ್ವದ 60 ದಿನಗಳ ಮುಂಚಿತವಾಗಿ ಜಿಲ್ಲಾ ಚುನಾವಣಾಧಿಕಾರಿಯ ವಶಕ್ಕೆ ಒಪ್ಪಿಸಲು ಜವಾಬ್ದಾರರಾಗಿರುತ್ತಾರೆ.

ನಿಯಮ 13ಡಿ(7) ರಂತೆ ಅಂತಿಮ ಮತದಾರರ ಪಟ್ಟಿಯ ಪ್ರತಿಯನ್ನು ನಿಯಮ 13ಡಿ(8) ರಂತೆ ಪ್ರತಿ ಸಹಕಾರ ಸಂಘದ ಕಛೇರಿಯಲ್ಲಿ ಮತ್ತು ಜಿಲ್ಲಾ ಚುನಾವಣಾಧಿಕಾರಿಯ ಕಛೇರಿಯಲ್ಲಿ ವೀಕ್ಷಣೆಗೆ ಮುಕ್ತವಾಗಿಡಲು ಜವಾಬ್ದಾರರಾಗಿರುತ್ತಾರೆ.

12) ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960 ರ ನಿಯಮ 14ಎಎ ದಲ್ಲಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013 ರ ನಿಯಮ 5ಎಎಫ್ ಮೇರೆಗೆ ವಿವರಿಸಿರುವಂತೆ ಚುನಾವಣಾ ವೆಚ್ಚವನ್ನು ಸಂಬಂಧಿಸಿದ ಸಹಕಾರ ಸಂಘ/ಸಹಕಾರಿಯೇ ಭರಿಸಬೇಕಾಗಿರುತ್ತದೆ.

13) ಸಹಕಾರ ಸಂಘದಲ್ಲಿ ಉದ್ಭವಿಸುವ ಆಕಸ್ಮಿಕ ಖಾಲಿ ಸ್ಥಾನದ ಬಗ್ಗೆ ಸಂಘದ ಮುಖ್ಯಕಾರ್ಯನಿರ್ವಾಹಕರುಗಳು ಕರ್ನಾಟಕ ಸಹಕಾರ ಸಂಘಗಳ ನಿಯಮ 14ಎಎಫ್ ರಂತೆ ಹಾಗೂ ಸಹಕಾರಿಯಲ್ಲಿ ಉದ್ಭವಿಸುವ ಇಂಥ ಖಾಲಿಸ್ಥಾನದ ಬಗ್ಗೆ ಮುಖ್ಯಕಾರ್ಯನಿರ್ವಾಹಕರುಗಳು ಸೌಹಾರ್ದ ಸಹಕಾರ ನಿಯಮ 5ಎಕೆ ರೀತ್ಯಾ ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸಿ ರಿಟರ್ನಿಂಗ್ ಆಫೀಸರ್ ನೇಮಕಾತಿ ಮಾಡಿಸಿಕೊಂಡು ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಜವಾಬ್ದಾರರಾಗಿರುತ್ತಾರೆ.

14) ಅಧಿನಿಯಮ ಪ್ರಕರಣ 29–ಜಿ ಮತ್ತು ನಿಯಮ 14ಎಎಂ ಹಾಗೂ ಸೌಹಾರ್ದ ಸಹಕಾರಿ ಅಧಿನಿಯಮ ಪ್ರಕರಣ 31(2) ಮತ್ತು ನಿಯಮ 6ಜೆ ದಲ್ಲಿ ಕ್ರಮವಾಗಿ ಸಹಕಾರ ಸಂಘದ/ಸಹಕಾರಿಯ ಮುಖ್ಯಕಾರ್ಯನಿರ್ವಾಹಕರ ಕಾರ್ಯನಿರ್ವಹಣೆ/ಅಧಿಕಾರಗಳ ಬಗ್ಗೆ ಹಾಗೂ ಸಂಬಂಧಿಸಿದ ಸಂಘಗಳ/ಸಹಕಾರಿಗಳ ಉಪವಿಧಿಗಳಲ್ಲೂ ವಿವರಿಸಲಾಗಿರುತ್ತದೆ. ಸಂಘದ/ಸಹಕಾರಿಯ ಮಂಡಲಿಯ ಸಾಮಾನ್ಯ ಅಧೀಕ್ಷಣೆ, ನಿಯಂತ್ರಣಕ್ಕೆ ಒಳಪಟ್ಟು ಮುಖ್ಯಕಾರ್ಯನಿರ್ವಾಹಕನು ಕರ್ತವ್ಯ ನಿರ್ವಹಿಸಬೇಕಾಗಿರುತ್ತದೆ.

15) ಅಧಿನಿಯಮ ಪ್ರಕರಣ 28ಸಿ ಮತ್ತು ಸೌಹಾರ್ದ ಸಹಕಾರಿ ಅಧಿನಿಯಮ ಪ್ರಕರಣ 27 ರಲ್ಲಿ ಹಾಗೂ ಸಂಘಗಳ ಉಪವಿಧಿಗಳಲ್ಲಿ ಆಡಳಿತ ಮಂಡಳಿ ಅಧಿಕಾರ ಮತ್ತು ಕಾರ್ಯನಿರ್ವಹಣೆಗಳ ಬಗ್ಗೆ ವಿವರಿಸಲಾಗಿದೆ. ಸಂಘದ / ಸಹಕಾರಿಯ ಮುಖ್ಯಕಾರ್ಯನಿರ್ವಾಹಕರು / ಸಿಬ್ಬಂದಿ ಆಡಳಿತ

ಮಂಡಳಿಯ ನಿಯಂತ್ರಣಕ್ಕೆ ಒಳಪಟ್ಟು ಕೆಲಸ ನಿರ್ವಹಿಸುತ್ತಾರೆ. ಸಿಬ್ಬಂದಿಯು ಸಂಘದ ಉದ್ದೇಶಗಳನ್ನು ಈಡೇರಿಸುವ ಸಂಬಂಧ ಅಧಿನಿಯಮ/ನಿಯಮ/ಉಪವಿಧಿಗಳಿಗನುಸಾರವಾಗಿ ಕಾರ್ಯ ನಿರ್ವಹಿಸುತ್ತಿರುತ್ತಾರೆಯೇ ಎಂಬ ಬಗ್ಗೆ ಮೇಲ್ವಿಚಾರಣೆ ನಡೆಸುವ ಅಧಿಕಾರ ಸಂಘದ/ಸಹಕಾರಿಯ ಆಡಳಿತ ಮಂಡಳಿಗೆ ಇರುತ್ತದೆ. ಚುನಾವಣೆ ನಡೆಸುವ ವಿಷಯವಾಗಿಯೂ ಸಂಘವು ಅಧಿನಿಯಮ/ನಿಯಮಗಳ ಅವಕಾಶದನ್ವಯ ಏನೆಲ್ಲಾ ಕೆಲಸಗಳನ್ನು ನಿರ್ವಹಿಸಬೇಕಾಗುತ್ತದೆ ಎಂಬ ಬಗ್ಗೆಯೂ ಸಂಘದ/ಸಹಕಾರಿಗಳ ಮಂಡಳಿಯು ತಿಳುವಳಿಕೆ ಹೊಂದಿರಬೇಕಾಗಿದ್ದು ಮತ್ತು ಮೇಲ್ವಿಚಾರಣೆ ನಡೆಸುವುದು ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

16) ಅಧಿನಿಯಮ ಪ್ರಕರಣ 39ಎಎ(14) ಹಾಗೂ ನಿಯಮ 14ಎಎ ರೀತ್ಯಾ ಚುನಾವಣೆಗಳಿಗಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ತಗಲುವ ಎಲ್ಲಾ ವೆಚ್ಚವನ್ನು ಸಂಬಂಧಿಸಿದ ಸಹಕಾರ ಸಂಘವೇ ಭರಿಸತಕ್ಕದ್ದಾಗಿದೆ. ಈ ಅಂಶವನ್ನು ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013 ರ ನಿಯಮ 5ಎಎಫ್ ನಲ್ಲೂ ವಿವರಿಸಲಾಗಿದೆ. ಚುನಾವಣೆ ನಡೆಸುವ ಸಂಬಂಧ ಭರಿಸಬೇಕಾದ ಆರ್ಥಿಕ ವೆಚ್ಚವನ್ನು ಸಂಘವು ಭರಿಸಲು ಸಂಘಗಳ/ಸಹಕಾರಿಗಳ ಮಂಡಳಿಯವರು ಜವಾಬ್ದಾರರಾಗಿರುತ್ತಾರೆ.

17) ಅಧಿನಿಯಮ ಪ್ರಕರಣ 2(ಬಿ), ಸೌಹಾರ್ದ ಸಹಕಾರಿ ಅಧಿನಿಯಮ ಪ್ರಕರಣ 2(ಎ–3) ಗಳಲ್ಲಿ ವಿವರಿಸಿರುವಂತೆ "ಮಂಡಲಿ" ಎಂದರೆ ಒಂದು ಸಹಕಾರ ಸಂಘದ/ಸಹಕಾರಿಯ ದೈನಂದಿನ ವ್ಯವಹಾರಗಳ ವ್ಯವಸ್ಥಾಪನೆಯ ನಿರ್ದೇಶನ ಮತ್ತು ನಿಯಂತ್ರಣವನ್ನು ಯಾವ ನಿರ್ದೇಶಕರ ಮಂಡಳಿಗೆ ಅಥವಾ ಆಡಳಿತ ನಿಕಾಯಕ್ಕೆ ವಹಿಸಿಕೊಡಲಾಗಿದೆಯೋ ಆ ಸಹಕಾರ ಸಂಘದ/ಸಹಕಾರಿಯ ಯಾವುದೇ ಹೆಸರಿನಿಂದ ಕರೆಯಲ್ಪಡುವ ನಿರ್ದೇಶಕರ ಮಂಡಳಿ ಅಥವಾ ಆಡಳಿತ ನಿಕಾಯ. ಈ ಹಿನ್ನೆಲೆಯಲ್ಲಿ ಅದಿನಿಯಮ ಪ್ರಕರಣ 28ಎ(5), ಪ್ರಕರಣ 30(2), ಪ್ರಕರಣ 31 ಹಾಗೂ ಸೌಹಾರ್ದ ಅಧಿನಿಯಮ ಪ್ರಕರಣ 26(2), ಪ್ರಕರಣ 38 ಗಳ ಅಡಿಯಲ್ಲಿ ಆಡಳಿತಗಾರ/ವಿಶೇಷಾಧಿಕಾರಿಗಳನ್ನು ಕಾನೂನುರೀತ್ಯಾ ವ್ಯಾಪ್ತಿಯ ನಿಬಂಧಕರು ನೇಮಕ ಮಾಡಿದ್ದಲ್ಲಿ ಈ ಪ್ರಕರಣಗಳಡಿಯಲ್ಲಿ ನೇಮಿಸಲಾದವರು ಚುನಾವಣೆ ವಿಷಯವಾಗಿ ಮಂಡಳಿ ಕೆಲಸ/ಕಾರ್ಯಗಳನ್ನು ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ.

ಮೇಲೆ ವಿವರಿಸಿದ ಪರಿಸ್ಥಿತಿಯಲ್ಲಿ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿ ಚುನಾವಣೆಯನ್ನು ನಡೆಸುವುದರ ಸಂಬಂಧವಾಗಿ ಸಂಘದ ಹಂತದಲ್ಲಿ ಮಂಡಳಿ, ಮುಖ್ಯಕಾರ್ಯನಿರ್ವಾಹಕರೂ ಸೇರಿದಂತೆ ಅಧಿನಿಯಮ/ನಿಯಮಗಳ/ಉಪವಿಧಿಗಳ ಅವಕಾಶಗಳಂತೆ ನಿಗದಿತ ಅವಧಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಂಘದ ಆಡಳಿತ ಮಂಡಳಿ ಕ್ರಮವಿಡಬೇಕಾಗಿರುತ್ತದೆ.

ಸಂಬಂಧಿಸಿದ ಸಂಘಗಳ/ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಅಧಿನಿಯಮ/ನಿಯಮಗಳು/ ಉಪವಿಧಿಗಳು ಹಾಗೂ ಆಯೋಗವು ಚುನಾವಣೆಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಹೊರಡಿಸುವ ಆದೇಶ/ಸುತ್ತೋಲೆಗಳನ್ನು ಆಡಳಿತ ಮಂಡಳಿ ಸಭೆಗೆ ವಿಷಯ ಮಂಡಿಸಿ ಸಭೆಗೆಅದರಂತೆ ಕ್ರಮವಿಡಬೇಕಾದ ಅಂಶಗಳ ಬಗ್ಗೆ ಟಿಪ್ಪಣಿ ಸಲ್ಲಿಸಿ ವಿವರಿಸತಕ್ಕದ್ದು.

ಈ ಬಗ್ಗೆ ಇಲಾಖಾಧಿಕಾರಿಗಳು, ಜಿಲ್ಲಾ ಚುನಾವಣಾಧಿಕಾರಿಗಳು ಸಂಬಂಧಿಸಿದ ಸಂಘಗಳಿಗೆ/ಸಹಕಾರಿಗಳಿಗೆ ಸೂಚನೆಗಳನ್ನು ನೀಡುವಂತೆ ನಿರ್ದೇಶಿಸಿದೆ.

ಆಯೋಗವು ಸಹಕಾರ ಸಂಘಗಳ/ಸಹಕಾರಿಗಳ ಆಡಳಿತ ಮಂಡಳಿ/ಪದಾಧಿಕಾರಿಗಳ ರಿಕ್ತಸ್ಥಾನಗಳ ಚುನಾವಣೆಯನ್ನು ಸಮರ್ಪಕವಾಗಿ ನಿಯಮಾನುಸಾರ ಪಾರದರ್ಶಕವಾಗಿ ನಡೆಸಲು ಆಡಳಿತ ಮಂಡಳಿಗಳು ಮತ್ತು ಮುಖ್ಯಕಾರ್ಯನಿರ್ವಾಹಕರುಗಳು ಹಾಗೂ ಸಂಘಗಳ / ಸಹಕಾರಿಗಳು/ ಸಿಬ್ಬಂದಿಗಳು ಕಾರ್ಯನಿರ್ವಹಿಸಿ ಸಹಕರಿಸಲು ನಿರ್ದೇಶಿಸಿದೆ.

11.11.13

**(ಎನ್.ಸಿ. ಮುನಿಯಪ್ಪ)**
**ಸಹಕಾರ ಚುನಾವಣಾ ಆಯುಕ್ತರು**

**ಇವರಿಗೆ :-**

1) ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು
2) ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು,
3) ಎಲ್ಲಾ ಉಪ ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು,
4) ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು
5) ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳು
6) ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಮಟ್ಟದ ಎಲ್ಲಾ ಸಹಕಾರ ಸಂಸ್ಥೆಗಳು/ಮಹಾಮಂಡಲಿಗಳು

**ಪ್ರತಿಗಳು:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01
2. ಸಹಕಾರ ಸಂಘಗಳ ನಿಬಂಧಕರು, #1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052
3. ಕೇಂದ್ರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಅಪರ ನಿಬಂಧಕರುಗಳಿಗೆ
4. ಕೇಂದ್ರ ಕಛೇರಿಯ ಎಲ್ಲಾ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ
5. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು
6. ನಿರ್ದೇಶಕರು, ಜವಳಿ ನಿರ್ದೇಶನಾಲಯ, ಬೆಂಗಳೂರು
7. ನಿರ್ದೇಶಕರು, ಮೀನುಗಾರಿಕೆ ಇಲಾಖೆ, ಬೆಂಗಳೂರು
8. ಸುತ್ತೋಲೆ ಕಡತ/ರಕ್ಷಾ ಕಡತ